# ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ಮತ್ತು ಪುತ್ತೂರು ತಾಲ್ಲೂಕಿನ ಸಿಲೋನ್ ತೋಟ ಕಾರ್ಮಿಕರು: ಒಂದು ಸಮಾಜಶಾಸ್ತ್ರೀಯ ಅಧ್ಯಯನ

**ಸಮಾಜಶಾಸ್ತ್ರ ವಿಷಯದಲ್ಲಿ ಪಿಹೆಚ್.ಡಿ ಪದವಿಗಾಗಿ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಸಂಶೋಧನಾ ಮಹಾಪ್ರಬಂಧ**


**ಸಂಶೋಧಕರು**

**ಜಗದೀಶ.ಎಂ**

**ಮಾರ್ಗದರ್ಶಕರು**

**ಡಾ. ಗೋವಿಂದರಾಜು. ಬಿ.ಎಂ**

**ಸಹಾಯಕ ಪ್ರಾಧ್ಯಾಪಕರು**
**ಸಮಾಜಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ**
**ಮಂಗಳಗಂಗೋತ್ರಿ–574199**



**ಸಮಾಜಶಾಸ್ತ್ರ ವಿಭಾಗ**
**ಮಂಗಳೂರು ವಿಶ್ವವಿದ್ಯಾನಿಲಯ**
**ಮಂಗಳಗಂಗೋತ್ರಿ–574199**

**2021**

# ಅಧ್ಯಾಯ-1

## ಪೀಠಿಕೆ

ವಲಸೆ ಒಂದು ಜಾಗತಿಕ ವಿದ್ಯಮಾನವಾಗಿದೆ. ಇದು ಮಾನವನ ಇತಿಹಾಸದಷ್ಟೆ ಪ್ರಾಚೀನವಾದುದು. ಮಾನವನು ತಮ್ಮ ಬೇಕು ಬೇಡಗಳನ್ನು ಪೂರೈಸಿಕೊಳ್ಳಲು, ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ನಿರಂತರವಾಗಿ ವಲಸೆ ಹೋಗುತ್ತಿದ್ದನು. ಇದಕ್ಕೆ ಅನುಗುಣವಾಗಿ ವಲಸೆಯನ್ನು ಏಕ ರೂಪದಲ್ಲಿ ವ್ಯಾಖ್ಯಾನಿಸುವುದು ಕಷ್ಟಕರ. ಯಾಕೆಂದರೆ ಕಾಲ ಬದಲಾದಂತೆ ಮಾನವರ ಆಸೆ ಆಕಾಂಕ್ಷೆಗಳು ಬದಲಾಗುತ್ತವೆ, ಆತನ ಆಸೆ ಆಕಾಂಕ್ಷೆಗೆ ಅನುಗುಣವಾಗಿ ತನ್ನ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ವಿವಿಧ ರೀತಿಯ ವಲಸೆಯನ್ನು ಕೈಗೊಳ್ಳುತ್ತಾನೆ. ಪ್ರಾಚೀನ ಕಾಲದಲ್ಲಿ ಮಾನವ, ತನ್ನ ಹಸಿವನ್ನು ನೀಗಿಸಿಕೊಳ್ಳಲು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವಲಸೆ ಹೋದರೆ, ಆಧುನಿಕ ಸಮಾಜದಲ್ಲಿ ಆಹಾರದ ಹಸಿವಿನ ಜೊತೆಗೆ ಜ್ಞಾನದ ಹಸಿವು, ಆರೋಗ್ಯ ಮತ್ತು ಮನೋರಂಜನೆ ಅಥವಾ ವೈಭವಯುತ ಜೀವನಕ್ಕಾಗಿ ಒಂದು ದೇಶದಿಂದ, ಇನ್ನೊಂದು ದೇಶಕ್ಕೆ ವಲಸೆ ಹೋಗುತ್ತಿರುವುದನ್ನು ಕಾಣಬಹುದು. ಹೀಗೆ ವಲಸೆ ಹೋದಂತಹ ಮನುಷ್ಯನ ಜೀವನದಲ್ಲಿ ಬಹಳಷ್ಟು ಬದಲಾವಣೆಗಳು, ಅಂದರೆ ಆರ್ಥಿಕವಾಗಿ, ರಾಜಕೀಯವಾಗಿ, ಸಾಮಾಜಿಕವಾಗಿ ಮತ್ತು ಶೈಕ್ಷಣಿಕ ಬದಲಾವಣೆಗಳು ಕಂಡು ಬರುವುದು ಸಾಮಾನ್ಯ. ಈ ಎಲ್ಲಾ ಬದಲಾವಣೆಗಳು ಮನುಷ್ಯನ ಒಟ್ಟು ಜೀವನ ಕ್ರಮದಲ್ಲಿ ಸಾಕಷ್ಟು ಪರಿವರ್ತನೆಗಳನ್ನು ತರುತ್ತವೆ. ಈ ನಿಟ್ಟಿನಲ್ಲಿ ಈ ಎಲ್ಲಾ ಬದಲಾವಣೆಗಳನ್ನು, ಬದಲಾವಣೆಗಳಿಗೆ ಕಾರಣವಾದ ಅಂಶಗಳನ್ನು ಮತ್ತು ಬದಲಾವಣೆಯಿಂದ ಉಂಟಾಗಿರುವ ಚಲನೆಗಳು ಹಾಗು ಎದುರಾಗಿರುವ ಸಮಸ್ಯೆಗಳನ್ನು ಅಧ್ಯಯನ ಮಾಡುವುದು ಇಂದಿನ ಅಗತ್ಯವಾಗಿದೆ.

ಭಾರತ ಪ್ರಪಂಚದಲ್ಲಿ ಎರಡನೇ ಅತಿ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ದೇಶ. ಭಾರತ ದೇಶವು ಕೂಡ ವಲಸೆಯ ಪ್ರಕ್ರಿಯೆಯಿಂದ ದೂರ ಉಳಿದಿಲ್ಲ. ಭಾರತೀಯರು ವಿವಿಧ ಕಾಲಘಟ್ಟಗಳಲ್ಲಿ, ಪ್ರಪಂಚದ ಬೇರೆ-ಬೇರೆ ಭಾಗಗಳಿಗೆ ವ್ಯಾಪಾರ-ವ್ಯವಹಾರ, ಉದ್ಯೋಗ ಮುಂತಾದ ಕಾರಣಗಳಿಗೆ ವಲಸೆ ಹೋಗಿರುವುದಕ್ಕೆ ಸಾಕಷ್ಟು ಪುರಾವೆಗಳು ಸಿಗುತ್ತವೆ. ಅದೇ ರೀತಿ ದೇಶದ ಅಥವಾ ರಾಜ್ಯದ ಒಳಗೆ ಉನ್ನತ ವಿದ್ಯಾಭ್ಯಾಸ, ಉದ್ಯೋಗ ಅಥವಾ ವ್ಯಾಪಾರದಂತಹ ಕಾರಣಗಳಿಂದ ಹಿಡಿದು ಬಂಧುತ್ವದ ಭಾಗವಾಗಿ ವಲಸೆ ಹೋಗಿರುವ ಅಥವಾ ಹೋಗುತ್ತಿರುವ ಉದಾಹರಣೆಗಳು ಸಾಕಷ್ಟು ಕಂಡು ಬರುತ್ತವೆ. ಹೀಗೆ ಒಂದಲ್ಲ ಒಂದು

ಕಾರಣದಿಂದ ತಮ್ಮ ಮೂಲ ನೆಲದಿಂದ ವಲಸೆ ಹೋದಂತಹ ಕುಟುಂಬಗಳು ಅಲ್ಲೇ ದೀರ್ಘಕಾಲ ನೆಲೆಸಿ, ಆ ದೇಶದ ಶಾಶ್ವತ ಪೌರರಾಗಿ ಗುರುತಿಸಿಕೊಂಡುದುದನ್ನ ಇತಿಹಾಸದಲ್ಲಿ ಕಾಣಬಹುದಾಗಿದೆ.

ಆದ್ದರಿಂದ, ಇಂದು ಜಗತ್ತಿನ ಯಾವುದೇ ಮೂಲೆಯಲ್ಲಿ ಇರುವ ದೇಶಗಳಿಗೆ ಭೇಟಿ ನೀಡಿದರೂ, ಅಲ್ಲಿ ಭಾರತೀಯರಿಲ್ಲದ ದೇಶವನ್ನು ಊಹಿಸುವುದು ಅಸಾಧ್ಯವಾದ ಮಾತು ಎಂಬುದನ್ನು ಹಲವು ವಲಸೆ ಸಂಬಂಧಿತ ಅಧ್ಯಯನಗಳಿಂದ ಕಾಣಬಹುದಾಗಿದೆ. ಈ ರೀತಿಯ ವಲಸೆಗಳು ಭಾರತ ಮತ್ತು ಇತರ ದೇಶಗಳ ನಡುವೆ ಕೇವಲ ಆರ್ಥಿಕ ಸಂಬಂಧವನ್ನು ಮಾತ್ರ ಸೃಷ್ಟಿಸದೆ, ಸಾಂಸ್ಕೃತಿಕ ಭಾಂದವ್ಯವನ್ನು ಹೆಣೆಯುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಇದಕ್ಕೆ ಪೂರಕವಾಗಿ ಕೆಲವು ಉದಾಹರಣೆಗಳನ್ನು ಉಲ್ಲೇಖಿಸುವುದಾದರೆ, ಭಾರತ ಮತ್ತು ದಕ್ಷಿಣ ಅಥವಾ ದಕ್ಷಿಣ ಏಷಿಯಾ ದೇಶಗಳೆಡೆಗಿನ ವಲಸೆಯ ಪ್ರಭಾವವನ್ನು ಕಾಣಬಹುದು. ಆದರೆ ಭಾರತವು ಆಧುನಿಕ ಜಗತ್ತಿಗೆ ತೆರೆದುಕೊಂಡಂತೆ, ಅಂದರೆ ಬ್ರಿಟಿಷ್ ವಸಾಹತುಶಾಹಿಗಳು ಭಾರತಕ್ಕೆ ಬಂದಂತಹ ಕಾಲಘಟ್ಟದಲ್ಲಿ ವಲಸೆಯ ಪ್ರಭಾವ ಮತ್ತು ಮಾನವರ ಚಲನೆಯು ಹಲವು ರೂಪಗಳಲ್ಲಿ ಬದಲಾಗಿರುವುದನ್ನು ಕಾಣಬಹುದಾಗಿದೆ.

ಕೆಲವು ಸಮಾಜ ವಿಜ್ಞಾನಿಗಳ ಅಭಿಪ್ರಾಯದಂತೆ, ಬ್ರಿಟೀಷ್ ವಸಾಹತುಶಾಹಿ ಕಾಲಘಟ್ಟದ ವಲಸೆಗಳು ಭಾರತದಲ್ಲಿ ಹಿಂದಿನಿಂದಲೂ ನಡೆದುಕೊಂಡು ಬರುತ್ತಿದ್ದಂತಹ ಸಾಂಪ್ರದಾಯಿಕ ವಲಸೆಗಳಿಗಿಂತ ಬಹಳ ಭಿನ್ನವಾದವುಗಳು ಆಗಿದ್ದು, ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ರಾಜತಾಂತ್ರಿಕ ನೆಲೆಯಲ್ಲಿ ಹೆಚ್ಚು ಪರಿಣಾಮಕಾರಿಯಾಗಿದ್ದವು. ಅಂದರೆ ವಸಾಹತುಕಾಲದಲ್ಲಿ ವಲಸೆಯು ಬಹುದೊಡ್ಡ ಪ್ರಮಾಣದಲ್ಲಿದ್ದು, ಅವುಗಳು ಹೆಚ್ಚಾಗಿ ಔದ್ಯೋಗಿಕ ಅಥವಾ ಕಾರ್ಮಿಕ ನೆಲೆಯಲ್ಲಿ ನಡೆದಂತಹ ವಲಸೆಗಳಾಗಿದ್ದವು. ಈ ರೀತಿಯ ವಲಸೆಯು ಹೆಚ್ಚಿನ ಪ್ರಮಾಣದಲ್ಲಿ ಸಮಸ್ಯೆಗಳನ್ನೇ ಸೃಷ್ಟಿಸುವಂತವುಗಳೇ ಆಗಿದ್ದವು ಎಂಬುದು ವಲಸೆ ಸಂಬಂಧಿತ ಅಧ್ಯಯನಕಾರರ ಅಭಿಪ್ರಾಯವಾಗಿದೆ. ಅಂದರೆ ವಲಸೆ ಹೋದಂತಹ ಪ್ರದೇಶದಲ್ಲಿ, ವಲಸಿಗರಿಗೆ ಪೂರಕವಾದ ಕಾನೂನು, ನೀತಿ–ನಿಯಮಗಳು ಇಲ್ಲದಿದ್ದಾಗ ವಲಸೆಗೊಳಪಟ್ಟಂತಹ ಸಮುದಾಯಗಳು ವಲಸೆ ಹೋದ ದೇಶದಲ್ಲಿ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದರು, ಮತ್ತು ವಲಸಿಗರಿಗೆ ತಮ್ಮ ಭವಿಷ್ಯದ ನೆಲೆಯಲ್ಲಿ ಆಲೋಚಿಸಿವುದು ಕೂಡ ಕಷ್ಟಕರವಾಗಿತ್ತು. ವಲಸಿಗರ ಜೀವನದ ಪ್ರತಿಯೊಂದು ಹಂತದಲ್ಲೂ, ಬಹಳಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದರು. ಅವರುಗಳು ಎದುರಿಸುತ್ತಿದ್ದಂತಹ ಸಮಸ್ಯೆಗಳು ವಲಸಿಗರ ವಲಸೆಯ ಸ್ವರೂಪವನ್ನಾಧರಿಸಿರುತ್ತಿದ್ದವು. ಮಾತ್ರವಲ್ಲ ಅದು ವಲಸಿಗರ ಸಮುದಾಯದ ಗಾತ್ರ, ಅವರ ಆರ್ಥಿಕ, ಶೈಕ್ಷಣಿಕ, ರಾಜಕೀಯ ಮತ್ತು ಸಾಮಾಜಿಕ ಸ್ಥಾನಮಾನದ ಆಧಾರದ ಮೇಲೆ ನೆಲೆನಿಂತಿದ್ದವು.

ಏಷಿಯಾ ಮತ್ತು ಆಫ್ರಿಕಾ ಖಂಡದಲ್ಲಿ ವಸಾಹತಿನಿಂದ ಮುಕ್ತವಾಗಿ ಸ್ವತಂತ್ರ ದೇಶ ಸ್ಥಾಪನೆಯ ಸಂದರ್ಭದಲ್ಲಿ, ಬೃಹತ್ ಪ್ರಮಾಣದಲ್ಲಿ ವಲಸೆ–ಮರು ವಲಸೆಗೆ ಕಾರಣವಾಗಿರುವುದನ್ನು, ಇತಿಹಾಸದ ದಾಖಲೆಗಳಿಂದ ಕಾಣಬಹುದಾಗಿದೆ. ಪ್ರಮುಖವಾಗಿ ಸ್ವತಂತ್ರಗೊಂಡ ದೇಶಗಳಿಗೆ ತನ್ನ ದೇಶದ ಮೂಲನಿವಾಸಿಗಳ ಧರ್ಮ, ಭಾಷೆ, ಆಧಾರದಲ್ಲಿ ಅಥವಾ ರಾಷ್ಟ್ರೀಯವಾದಿ ನೆಲೆಯಲ್ಲಿ ದೇಶ ಕಟ್ಟುವ ಸಂದರ್ಭದಲ್ಲಿ ಬೇರೊಂದು ಭಾಷೆ, ಧರ್ಮ ಅಥವಾ ದೇಶಗಳಿಂದ ವಲಸೆ ಬಂದು, ಹಲವು ಶತಮಾನಗಳಿಂದ ವಲಸಿಗರಾಗಿ ನೆಲೆಸಿದವರ ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಹಿತಾಸಕ್ತಿಯನ್ನು ಕಾಪಾಡುವುದು ಅವರುಗಳಿಗೆ ಸವಾಲಾದ ಪ್ರಶ್ನೆಯಾಗಿತ್ತು. ಕೆಲವರ ವಾದದ ಪ್ರಕಾರ ವಲಸಿಗರ ಧರ್ಮ, ಭಾಷೆಯನ್ನು ಪರಿಗಣನೆಗೆ ತೆಗೆದುಕೊಂಡುದರ ಪರಿಣಾಮ, ಅವರು ಪರಕೀಯರಾಗಿ, ಜನಾಂಗಿಯ ಕಲಹಕ್ಕೆ ಕಾರಣವಾದುದಲ್ಲದೆ, ತಮ್ಮ ವಾಸಸ್ಥಾನವನ್ನ, ದೇಶವನ್ನ ತ್ಯಜಿಸಬೇಕಾಗಿ ಬಂದುದನ್ನ ಇತಿಹಾಸದಲ್ಲಿ ಕಾಣಬಹುದಾಗಿದೆ. ಇದಕ್ಕೆ ಪೂರಕವಾಗಿ ಕೆಲವು ಉದಾಹರಣೆಗಳನ್ನು ಉಲ್ಲೇಖಿಸುವುದಾದರೆ, 1947 ರಲ್ಲಿ ಭಾರತ ಸ್ವತಂತ್ರಗೊಂಡ ಸಂದರ್ಭದಲ್ಲಿ ಹಿಂದುಗಳು ಪಾಕಿಸ್ತಾನವನ್ನು ತ್ಯಜಿಸಿ ಭಾರತಕ್ಕೆ; ಅದೇ ರೀತಿ ಮುಸ್ಲಿಮರು ಭಾರತದಿಂದ ಪಾಕಿಸ್ತಾನಕ್ಕೆ; 1959 ರಲ್ಲಿ ಚೀನಾದಲ್ಲಿ ವಾಸವಾಗಿದ್ದ ಟಿಬೆಟಿಯನ್ನರು ಚೀನಾದಿಂದ ಭಾರತಕ್ಕೆ, 1978 ಮತ್ತು 1979 ರಲ್ಲಿ ವಿಯೆಟ್ನಾಂ ಮತ್ತು ಇಂಡೋನೇಷಿಯಾದಲ್ಲಿ ಇದ್ದಂತಹ ಚೀನಿಯರು ಆ ದೇಶವನ್ನು ಬಿಟ್ಟು ಚೀನಾಕ್ಕೆ ಹಾಗೂ 1960 ಮತ್ತ 1970 ರಲ್ಲಿ ಬರ್ಮಾ, ಉಗಾಂಡ ಮತ್ತು ಶ್ರೀಲಂಕಾದಲ್ಲಿ ವಾಸವಾಗಿದ್ದ ಭಾರತೀಯರು ಆ ದೇಶಗಳನ್ನು ಬಿಟ್ಟು ಭಾರತಕ್ಕೆ ಬೃಹತ್ ಸಂಖ್ಯೆಯಲ್ಲಿ ಮರು ವಲಸೆಗೊಂಡಿರುವುದನ್ನು ಕಾಣಬಹುದಾಗಿದೆ. ಇಂತಹ ಮಹಾ ಮರುವಲಸೆಯ ಸಂದರ್ಭದಲ್ಲಿ ಸಾಕಷ್ಟು ಪ್ರಾಣ ಹಾನಿ, ಆಸ್ತಿ ಹಾನಿ ಹಾಗೂ ಬಂಧುತ್ವದ ಸಮಸ್ಯೆಗಳಿಗೆ ಒಳಗಾಗಿರುವುದನ್ನು ಇತಿಹಾಸದ ಪುಟಗಳಿಂದ ಕಾಣಬಹುದಾಗಿದೆ.

ಹೀಗೆ ವಲಸಿಗರು ವಿಭಿನ್ನ ರೀತಿಯ ರಾಜಕೀಯ ಚದುರಂಗಾಟಕ್ಕೆ ಬಲಿಪಶುಗಳಾಗಿ ನಲುಗಿಹೋಗಿದುದು ಮಾತ್ರವಲ್ಲದೆ, ಹಲವಾರು ಒಪ್ಪಂದದ ಮೂಲಕ ತಮ್ಮ ಸಮಸ್ಯೆಗಳನ್ನು ಸೌಹಾರ್ದಯುತವಾಗಿ ಬಗೆಹರಿಸಿಕೊಳ್ಳಲು ಪ್ರಯತ್ನಿಸಿ, ಕೆಲವು ಸಮಸ್ಯೆಗಳಿಗೆ ಪರಿಹಾರ ಕಂಡುಕೊಂಡರೆ ಇನ್ನೂ ಕೆಲವಾರು ಸಮಸ್ಯೆಗಳು ಬಗೆಹರಿಯದೆ ಇದ್ದಿರುವುದು ಕಂಡುಬರುತ್ತದೆ. ಅವರ ಸಮಸ್ಯೆ ಬಗೆಹರಿಯದೆ ಇರುವುದಕ್ಕೆ ಮೂಲ ಕಾರಣ ಸಮಸ್ಯೆಯನ್ನೆದುರಿಸುತ್ತಿರುವ ವಲಸಿಗರನ್ನು ನಿರ್ಧಾರ ತೆಗೆದುಕೊಳ್ಳುವಲ್ಲಿ ಸಂಪೂರ್ಣವಾಗಿ ಹೊರಗಿಟ್ಟಿರುವುದಾಗಿದೆ. ಮಾತ್ರವಲ್ಲದೆ, ಏಕಪಕ್ಷೀಯ ನಿರ್ಧಾರವನ್ನು ಹೇರಿ ಅವರ ಭಾವನೆಗಳಿಗೆ, ಅಭಿಪ್ರಾಯಗಳಿಗೆ ಬೆಲೆಕೊಡದೆ, ಒತ್ತಾಯದ ಮರು ವಲಸೆಗೆ ಅಥವಾ ಪುನರ್

ಸಂಜಾತೀಕರಣಕ್ಕೆ ಕಾರಣವಾಗಿ ಅವರ ಭವಿಷ್ಯವನ್ನು ಡೋಲಾಯಮಾನ ಸ್ಥಿತಿಗೆ ತಲುಪಿಸಿರುವುದನ್ನು ಕಾಣಬಹುದಾಗಿದೆ. ಇದರ ಜೊತೆಗೆ ಬಹುಮುಖ್ಯವಾಗಿ ಸ್ವತಂತ್ರಗೊಂಡ ದೇಶವೊಂದರ ಹೊಸದಾಗಿ ಆಡಳಿತ ಚುಕ್ಕಾಣಿ ಹಿಡಿದ ರಾಜಕೀಯ ನೇತಾರರು, ಅಲ್ಲಿನ ವಲಸಿಗರನ್ನು ಪರಿಗಣನೆಗೆ ತೆಗೆದುಕೊಳ್ಳದೆ ಅವರನ್ನು ವೈರಿಗಳೆಂದು ಭಾವಿಸಿ, ತಮ್ಮ ರಾಜಕೀಯ ಭವಿಷ್ಯಕ್ಕೆ ಕಂಠಕರೆಂದು ಪರಿಭಾವಿಸಿರುವುದು, ವಲಸಿಗರ ಬಲಿಪಶುವಿಗೆ ಪ್ರಮುಖ ಕಾರಣಗಳಾಗಿದ್ದವು. ಅಷ್ಟು ಮಾತ್ರವಲ್ಲದೆ, ಈ ಬೆಳವಣಿಗೆಗಳ ಸಹಜ ಪರಿಣಾಮವಾಗಿ ಅತೀ ಶೀಘ್ರದಲ್ಲಿಯೇ ಅಲ್ಲಿನ ವಲಸಿಗರು ಧಾರ್ಮಿಕ, ಸಾಂಸ್ಕೃತಿಕ, ರಾಜಕೀಯ ಮತ್ತು ಆರ್ಥಿಕ ಪರಕೀಯತೆಗೂ ಒಳಗಾಗುತ್ತಾರೆ. ಮುಂದುವರೆದು, ವಲಸಿಗರನ್ನು ಬಲಪ್ರಯೋಗಿಸಿ ಅಥವಾ ಒತ್ತಾಯ ಪೂರ್ವಕವಾಗಿ ಅವರ ದೇಶದಿಂದ ಹೊರದಬ್ಬುವ ಪ್ರಯತ್ನಗಳು ನಿರಂತರವಾಗಿ ನಡೆಯುತ್ತಲೇ ಇರುತ್ತವೆ. ಶತ ಶತಮಾನಗಳಿಂದ ವಾಸವಾಗಿದ್ದ ವಲಸಿಗರನ್ನು **'ಪರದೇಶಿಗಳು'** ಎಂಬ ಹಣೆಪಟ್ಟಿ ಕಟ್ಟಿ ಅವರಿಗೆ ಪೌರತ್ವದ ಜೊತೆಗೆ ಇತರ ಮೂಲಭೂತ ಸವಲತ್ತುಗಳನ್ನು ನಿರಾಕರಿಸುವಂತಹುದು ಅಥವಾ ಕಸಿದುಕೊಂಡಂತಹ ನಿದರ್ಶನಗಲೂ ಇವೆ. ವಲಸಿಗರು ಆ ದೇಶದ ಆರ್ಥಿಕತೆಗೆ ನೀಡಿದ ಕೊಡುಗೆಯನ್ನಾಗಲಿ, ಒಳಿತುಗಳನ್ನಾಗಲಿ ಯಾವುದನ್ನು ಪರಿಗಣನೆಗೆ ತೆಗೆದುಕೊಳ್ಳದೆ ವಲಸಿಗರನ್ನು ಪ್ರತ್ಯೇಕಿತರಂತೆ, ಪರಕೀಯರಂತೆ ಕಂಡು, ಅವರ ಪೌರತ್ವವನ್ನು ಕಸಿದುಕೊಂಡು, ಅವರನ್ನು ರಾಷ್ಟ್ರರಹಿತರಂತೆ ಕಂಡು ಹಿಂಸಿಸಿರುವ ಘಟನೆಗಳು ಇತಿಹಾಸದ ಪುಟಗಳಲ್ಲಿ ಅಚ್ಚಾಗಿವೆ.

ಈ ಎಲ್ಲಾ ಬೆಳವಣಿಗೆಗಳು ರಾಷ್ಟಗಳ ರಾಷ್ಟ್ರಗಳ ನಡುವಿನ ರಾಜತಾಂತ್ರಿಕ ಸಂಬಂಧಗಳ ಬಿರುಕಿಗೆ ಕಾರಣವಾದರೂ, ರಾಷ್ಟ್ರಗಳ ನಡುವೆ ಉತ್ತಮ ದ್ವಿಪಕ್ಷೀಯ ಸಂಬಂಧಗಳನ್ನು ಕಾಯ್ದುಕೊಳ್ಳುವ ಮತ್ತು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಸಂಬಂಧಿಸಿದ ವಲಸಿಗರ ತವರು ರಾಷ್ಟ್ರಗಳು ತ್ಯಾಗ ಭಾವದಿಂದ ನಡೆದಂತಹ ಹಲವಾರು ಉದಾಹರಣೆಗಳನ್ನು ಕಾಣಬಹುದು. ಕೆಲವು ಉದಾಹರಣೆಗಳನ್ನು ಉಲ್ಲೇಖಿಸುವುದಾದರೆ, 1955 ರಲ್ಲಿ ನಡೆದ ಚೀನಾ ಮತ್ತು ಇಂಡೋನೇಷಿಯಾದ ದ್ವಿ-ರಾಷ್ಟ್ರೀಯ ಒಪ್ಪಂದ; 1964 ಮತ್ತು 1974 ರಲ್ಲಿ ನಡೆದ ಭಾರತ ಮತ್ತು ಶ್ರೀಲಂಕಾಗಳ ನಡುವೆ ನಡೆದ ಒಪ್ಪಂದಗಳು ಇದಕ್ಕೆ ಉತ್ತಮ ಉದಾಹರಣೆಗಳಾಗಿವೆ. ಈ ಮೂರು ಒಪ್ಪಂದಗಳು ಬೃಹತ್ ಮಟ್ಟದಲ್ಲಿ ವಲಸೆ ಮತ್ತು ಮರುವಲಸೆಗೆ ಕಾರಣವಾದುದಲ್ಲದೆ, ವಲಸೆಗೆ ಸಂಬಂಧಿಸಿದಂತೆ ಹಲವು ಸಮಸ್ಯೆಗಳಿಗೆ ಪರಿಹಾರವನ್ನು ಕಾಣಲು ಸಾಧ್ಯವಾಗಿಸಿವೆ. ಅಲ್ಲದೆ, ಸಹಸ್ರಾರು ವರ್ಷಗಳಿಂದ ಭಿನ್ನ ರೂಪದಲ್ಲಿದ್ದ ವಲಸೆಯನ್ನು ರಾಜಕೀಯ, ಆರ್ಥಿಕ, ಜನಾಂಗೀಯ ಮತ್ತು ಸಮಾಜೋ-ಸಾಂಸ್ಕೃತಿಕ ಚೌಕಟ್ಟಿನಲ್ಲಿ ವಿಶ್ಲೇಷಿಸುವಂತೆ ಮಾಡಿವೆ.

ಇಂತಹುಗಳಲ್ಲಿ ದಕ್ಷಿಣ ಏಷಿಯಾದ ದೇಶಗಳಾದ ಭಾರತ ಮತ್ತು ಶ್ರೀಲಂಕಾದ ರಾಜತಾಂತ್ರಿಕ ಸಮಸ್ಯೆಗಳಲ್ಲೊಂದಾದ **'ದಕ್ಷಿಣ ಭಾರತದ ತಮಿಳರ ಸಿಲೋನ್ (ಶ್ರೀಲಂಕಾ) ಮಹಾವಲಸೆ'** ಪ್ರಮುಖವಾದುದು.

## ಐತಿಹಾಸಿಕ ಹಿನ್ನೆಲೆ

ಭಾರತ ಮತ್ತು ಶ್ರೀಲಂಕಾ ಏಷ್ಯಾ ಖಂಡದ, ಎರಡು ನೆರೆಯ ಮತ್ತು ಸ್ನೇಹಿತ ರಾಷ್ಟ್ರಗಳು. ಈ ಎರಡು ಪ್ರಜಾಪ್ರಭುತ್ವ ರಾಷ್ಟ್ರಗಳ ಬಂಧುತ್ವವು ಸಹೋದರತೆಯಿಂದ ಕೂಡಿದುದು ಮಾತ್ರವಲ್ಲದೇ, ಅಷ್ಟೇ ಪ್ರಾಚೀನವಾದುದು ಕೂಡ ಆಗಿದೆ. ಇವುಗಳ ಸ್ನೇಹ ಸಂಬಂಧವು ಭೌಗೋಳಿಕ ವಿಚಾರಕ್ಕೆ ಮಾತ್ರ ಸೀಮಿತವಾಗಿರದೆ ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ವ್ಯವಹಾರಕ್ಕಿಂತಲೂ ಮೀರಿ ಸಮ್ಮಿಳಿತವಾಗಿವೆ ಹಾಗೂ ಪರಸ್ಪರ ಅನ್ಯೋನ್ಯತೆಯಿಂದ ಕೂಡಿದೆ. ಭಾರತ ಮತ್ತು ಸಿಲೋನಿನ ಸ್ನೇಹ ಸಂಬಂಧದಿಂದ ಭೌಗೋಳಿಕವಾಗಿ ಸಮೀಪದಲ್ಲಿದ್ದ, ದಕ್ಷಿಣ ಭಾರತದ ಜೊತೆಗೆ ಸಾಮಾಜಿಕ ಸಂಬಂಧ ಹಾಗೂ ವ್ಯವಹಾರ ವಿನಿಮಯದ ಕೇಂದ್ರ ಸ್ಥಳಗಳಾಗಿ ಪ್ರಸಿದ್ಧಿಯನ್ನು ಪಡೆದಿತ್ತು. ಬಹುಮುಖ್ಯವಾಗಿ ಸಿಲೋನಿಗೆ ಹೊಂದಿಕೊಂಡಿರುವ ದಕ್ಷಿಣ ಭಾರತದ ತಮಿಳುನಾಡು ರಾಜ್ಯವು ಸಿಲೋನಿನೊಂದಿಗೆ, ಕೇವಲ ಸಮುದ್ರಮಾರ್ಗವನ್ನು ಮಾತ್ರ ಹಂಚಿಕೊಳ್ಳದೆ ಭಾಷೆ, ಸಾಹಿತ್ಯ, ಸಂಸ್ಕೃತಿ, ತತ್ವಜ್ಞಾನ ಮತ್ತು ಧಾರ್ಮಿಕ ಕೇಂದ್ರಗಳನ್ನು ಹಂಚಿಕೊಂಡಿತ್ತು. ಈ ಎಲ್ಲಾ ಕಾರಣದಿಂದ ಎರಡು ದೇಶಗಳ ನಡುವೆ ಉತ್ತಮ ಸಂಬಂಧ ಹೊಂದುವಲ್ಲಿ ಕಾರಣವಾಗಿತ್ತು.

ಆಧ್ಯಾತ್ಮಿಕ ಹಿನ್ನೆಲೆಯಲ್ಲಿ ನೋಡಿದಾಗ ಭಾರತ ಮತ್ತು ಸಿಲೋನ್ (ಶ್ರೀಲಂಕಾ) ದೇಶಗಳ ಸಂಬಂಧವು ರಾಮಾಯಣ ಕಾಲದಿಂದಲೇ ಇದೆ ಎಂಬುದನ್ನು ಇತಿಹಾಸದ ಕಥನಗಳಿಂದ, ದಾಖಲೆಗಳಿಂದ ತಿಳಿದುಕೊಳ್ಳಬಹುದು. ರಾಮಾಯಣ ಕಾಲದಿಂದಿಡಿದು ನಂತರದಲ್ಲಿ ಸಂಗಮರು, ಚೋಳರು ಮುಂತಾದ ರಾಜ ವಂಶಸ್ಥರ ಕಾಲದವರೆಗೂ, ಉತ್ತಮ ರೀತಿಯಲ್ಲಿ ಇದ್ದವಲ್ಲದೆ, ಚೋಳರ ಅವನತಿಯ ನಂತರವು ಈ ಎರಡು ದೇಶಗಳ ನಡುವೆ ಆರ್ಥಿಕ ವ್ಯವಹಾರಗಳು ಮತ್ತು ಸಾಂಸ್ಕೃತಿಕ ಕೊಡುಕೊಳ್ಳುವಿಕೆಗಳು ಮುಂದುವರೆದಿದ್ದವು ಎಂಬುದಕ್ಕೆ ಹಲವಾರು ಉದಾರಣೆಗಳು ಕಾಣಸಿಗುತ್ತವೆ. ಆದರೆ 19 ನೇ ಶತಮಾನದಲ್ಲಿ ಈ ಎರಡೂ ದೇಶಗಳ ಸಂಬಂಧಗಳು ಔಪಚಾರಿಕ ರೂಪವನ್ನು ಪಡೆದುಕೊಂಡವು.

ಪ್ರಮುಖವಾಗಿ 19 ನೇ ಶತಮಾನದ ಪ್ರಾರಂಭದಲ್ಲಿ ಅಂದರೆ ಬ್ರಿಟೀಷ್ ವಸಾಹತುಶಾಹಿಗಳು ದಕ್ಷಿಣ ಏಷ್ಯಾ ಖಂಡವನ್ನು ಕೇಂದ್ರೀಕರಿಸಿಕೊಂಡು ವ್ಯಾಪಾರ, ವ್ಯವಹಾರ ನಡೆಸುತ್ತಿದ್ದ ಸಂದರ್ಭದಲ್ಲಿ, ಅದರಲ್ಲೂ ಸಿಲೋನಿನಲ್ಲಿ ರಬ್ಬರ್, ಕಾಫಿ, ಚಾ, ಮುಂತಾದ ಸಂಬಾರ ಪದಾರ್ಥಗಳ ಬೆಳೆಗಳನ್ನು ಬೆಳೆಯಲು ಆರಂಭಿಸಿದುದರ ನಂತರದಲ್ಲಿ ಎರಡು ದೇಶಗಳು ಔಪಚಾರಿಕವಾಗಿ ಇನ್ನಷ್ಟು ಹತ್ತಿರವಾದವು. ಪ್ರಮುಖವಾಗಿ

ಸಿಲೋನಿನ ವಸಾಹತು ಆಡಳಿತದ, ಆರ್ಥಿಕ ವಿಸ್ತರಣೆಯ ನೀತಿಯ ಹಿನ್ನೆಲೆಯಲ್ಲಿ ಪ್ರಾರಂಭವಾದ ಚಹಾ, ಕಾಫಿ ತೋಟಗಳಿಗೆ ಅಗತ್ಯವಾದ ಕಾರ್ಮಿಕರು, ದಕ್ಷಿಣ ಭಾರತದ ತಮಿಳುನಾಡಿನಿಂದ ಹೆಚ್ಚು ಪ್ರಮಾಣದಲ್ಲಿ ವಲಸೆ ಹೋಗಲು ಪ್ರಾರಂಭಿಸಿದ ಕಾಲಘಟ್ಟದಿಂದ ಔಪಚಾರಿಕವಾಗಿ ಆರ್ಥಿಕ ಸಂಬಂಧಗಳು ಪ್ರಾರಂಭವಾದವು. ಸಿಲೋನ್ ಕಡೆಗಿನ ಭಾರತೀಯ ಕಾರ್ಮಿಕರ ವಲಸೆಯು, ಆರಂಭದಲ್ಲಿ ಮಂದಗತಿಯಲ್ಲಿ ಪ್ರಾರಂಭವಾದರೂ ನಂತರದ ದಿನಗಳಲ್ಲಿ ತಮಿಳುನಾಡಿನಲ್ಲಿ ಉಂಟಾದ ಕ್ಷಾಮ, ಬರಗಾಲ ನಿರುದ್ಯೋಗ, ಬಡತನದಂತಹ ನೂರಾರು ಸಮಸ್ಯೆಗಳು ಕಾರ್ಮಿಕರ ವಲಸೆಯ ವೇಗವನ್ನು ಹೆಚ್ಚಿಸಿತು. ಹೀಗೆ ಪ್ರಾರಂಭವಾದ ವಲಸಿಗರ ಪ್ರಮಾಣವು 1948 ರಲ್ಲಿ 'ಸಿಲೋನ್' (ಶ್ರೀಲಂಕಾ) ಸ್ವಾತಂತ್ರ್ಯ ಗಳಿಸುವ ತನಕವೂ ನಿರಂತರವಾಗಿ ಮುಂದುವರೆದಿತ್ತು. 1948 ರಲ್ಲಿ ಸಿಲೋನ್ ಸ್ವಾತಂತ್ರ್ಯ ಗಳಿಸುವ ಹೊತ್ತಿಗೆ, ಸಿಲೋನಿನಲ್ಲಿ ಭಾರತೀಯ ವಲಸೆ ತೋಟ ಕಾರ್ಮಿಕರ ಪ್ರಮಾಣವು ಸಿಲೋನಿನ ಒಟ್ಟು ಜನಸಂಖ್ಯೆಯ ಶೇಕಡ 11 ಕ್ಕೆ ತಲುಪಿತ್ತು. ಸಿಲೋನಿನಲ್ಲಿ ಭಾರತೀಯ ತಮಿಳು ವಲಸಿಗ ಕಾರ್ಮಿಕರ ಬೃಹತ್ ಪ್ರಮಾಣದ ಏರಿಕೆಯು ಸ್ವತಂತ್ರ ಶ್ರೀಲಂಕಾಕ್ಕೆ (ಸಿಲೋನಿಗೆ) ಬಹುಮುಖ್ಯವಾಗಿ, ಸಿಂಹಳ ರಾಜಕೀಯ ನೇತಾರರಿಗೆ ಇದೊಂದು ರಾಜಕೀಯ ಸಮಸ್ಯೆಯಾಗಿ ಕಾಣಿಸಿತಲ್ಲದೆ, ಸಿಂಹಳದ ಪ್ರಜಾಪ್ರಭುತ್ವದ ಭವಿಷ್ಯಕ್ಕೆ ಒಂದು ಮಹತ್ತರ ಸವಾಲಾಗಿ ಕಾಡತೊಡಗಿತ್ತು. ಈ ನಿಟ್ಟಿನಲ್ಲಿ ಸಿಂಹಳದ ಆಡಳಿತಗಾರರು ಭಾರತೀಯ ವಲಸೆ ಕಾರ್ಮಿಕರ ಕುರಿತು ಎಚ್ಚರಿಕೆಯ ಹೆಜ್ಜೆಯನ್ನಿಡಲು ಪ್ರಾರಂಭಿಸಿದ್ದರು.

ಈ ಬೆಳವಣಿಗೆಯ ಮೊದಲ ಹೆಜ್ಜೆಯಾಗಿ ಸಿಲೋನಿಗೆ ಭಾರತೀಯ ಕಾರ್ಮಿಕರ ವಲಸೆಯನ್ನು ನಿಯಂತ್ರಿಸುವ ಪ್ರಯತ್ನಕ್ಕೆ ಮುಂದಾದರು. ಜೊತೆಗೆ ದಶಕಗಳಿಂದ ವಾಸಿಸುತಿದ್ದ ಭಾರತೀಯ ವಲಸೆ ಕಾರ್ಮಿಕರು, ಸಿಲೋನಿನ ಆರ್ಥಿಕ ಅಭಿವೃದ್ಧಿಗೆ ನೀಡಿದಂತಹ ಕೊಡುಗೆಗಳನ್ನು ಪರಿಗಣಿಸದೆ, ಭಾರತೀಯ ವಲಸೆ ಕಾರ್ಮಿಕರನ್ನು ಸಿಂಹಳೀಯರು **"ಅಸ್ಥಿರ ಸಮೂಹ", 'ವಲಸೆ ಹಕ್ಕಿಗಳು'** ಎಂದು ಮಾನಸಿಕವಾಗಿ ಪರಿಭಾವಿಸುವ ಪ್ರಯತ್ನವನ್ನು ಮಾಡಿದರು. ಮಾತ್ರವಲ್ಲ ಭಾರತೀಯ ವಲಸೆ ಕಾರ್ಮಿಕರ ಮೇಲೆ ಹಲವಾರು ನಿರ್ಬಂಧಗಳನ್ನು ಹೇರುವ ಪ್ರಯತ್ನವನ್ನು ಮಾಡಿದರು. ಸಿಂಹಳೀಯರ ಮತ್ತು ಸಿಲೋನ್ ಸರ್ಕಾರದ, ಈ ನಡವಳಿಕೆ ಭಾರತೀಯ ಕಾರ್ಮಿಕರಲ್ಲಿನ ಅಸ್ಥಿರತೆಯ ಭಾವನೆಯನ್ನು ದೃಢೀಕರಿಸಿತು. ಇದರ ಮುಂದುವರಿದ ಭಾಗವಾಗಿ 1949 ರಲ್ಲಿ ಸಿಲೋನ್ ಸರ್ಕಾರವು, ಬಹುಸಂಖ್ಯೆಯಲ್ಲಿ ನೆಲೆಸಿದ್ದ ಭಾರತೀಯ ವಲಸೆ ಕಾರ್ಮಿಕರಿಗೆ ಸಿಲೋನಿನ **"ಪೌರತ್ವ ನಿರಾಕರಣೆ"** ಕಾಯಿದೆಯನ್ನು ರೂಪಿಸಿ ಸಿಲೋನಿನ ಸಾಂಸ್ಥಿಕ ವ್ಯವಸ್ಥೆಯಿಂದ ಹೊರಗಿಡುವ ಮೊದಲ ಔಪಚಾರಿಕ ಪ್ರಯತ್ನವನ್ನು ಮಾಡಿತು. ಶ್ರೀಲಂಕಾ ಸರಕಾರದ ಈ ನಡವಳಿಕೆ ಭಾರತೀಯ ವಲಸೆ ಕಾರ್ಮಿಕರಲ್ಲಿ ಮತ್ತಷ್ಟು ಸಮಸ್ಯೆ ಉಂಟುಮಾಡುವುದರ ಜೊತೆಗೆ ಸಿಲೋನ್

ಸರ್ಕಾರದ ಕುರಿತು ಹಲವು ಅನುಮಾನಗಳು ಹುಟ್ಟುವಂತೆ ಮಾಡಿತು. ಶ್ರೀಲಂಕಾ ಸರಕಾರದ ನಿರ್ಬಂಧಗಳನ್ನು ವಿರೋಧಿಸಿ ಹಲವು ಹೋರಾಟಗಳು ಭಾರತೀಯ ವಲಸಿಗರಿಂದ ನಡೆಯುತ್ತಲೇ ಇದ್ದವು. ಜೊತೆಗೆ ಭಾರತ ಸರಕಾರವು ಭಾರತೀಯ ವಲಸಿಗರ ಪೌರತ್ವ ಸಮಸ್ಯೆಯನ್ನು ಪರಿಹರಿಸಲು ಸಿಲೋನಿನ ನಡುವೆ ನಿರಂತರ ಮಾತುಕತೆಯ ಪ್ರಯತ್ನವನ್ನು ಮಾಡುತ್ತಲೇ ಇತ್ತು. ಹೀಗೆ ಸುಧೀರ್ಘವಾಗಿ ನಡೆದ ದ್ವಿ-ಪಕ್ಷೀಯ ಮಾತುಕತೆಯ ಫಲಪ್ರದವಾಗಿ 1964 ರಲ್ಲಿ ಮತ್ತು 1974 ರಲ್ಲಿ ನಡೆದ ಎರಡು ಮಹಾ ಒಪ್ಪಂದಗಳ ಮೂಲಕ ಭಾರತೀಯ ವಲಸಿಗರ ಪೌರತ್ವ ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳಲಾಯಿತು.

## ದ್ವಿಪಕ್ಷೀಯ ಒಪ್ಪಂದಗಳು

ಭಾರತ ಮತ್ತು ಸಿಲೋನ್ ದೇಶಗಳ ನಡುವೆ ಇದ್ದಂತಹ ವಲಸೆ ಕಾರ್ಮಿಕರ ಸಮಸ್ಯೆಗಳನ್ನು ಹಲವಾರು ಸುತ್ತಿನ ಮಾತುಕತೆ, ಚರ್ಚೆ ಮತ್ತು ಒಪ್ಪಂದಗಳ ಮೂಲಕ ಬಗೆಹರಿಸಿಕೊಳ್ಳಲು ಪ್ರಯತ್ನಿಸಿರುವುದನ್ನು ಕಾಣಬಹುದು. ಅವುಗಳಲ್ಲಿ ಪ್ರಮುಖವಾದ ಎರಡು ಒಪ್ಪಂದಗಳು ಎಂದರೆ 1964 ರಲ್ಲಿ ನಡೆದ **'ಶಾಸ್ತ್ರಿ-ಸಿರಿಮಾವೋ ಒಪ್ಪಂದ'** ಮತ್ತು 1974ರಲ್ಲಿ ನಡೆದ **'ಇಂದಿರಾ-ಸಿರಿಮಾವೋ'** ಒಪ್ಪಂದಗಳಾಗಿವೆ. ಈ ಎರಡು ಒಪ್ಪಂದಗಳು ಹಲವು ದಶಕಗಳ ಕಾಲ ಬಗೆಹರಿಸಲಾಗದ ಸಿಲೋನಿನ ಭಾರತೀಯ ವಲಸೆ ಕಾರ್ಮಿಕರ ಪೌರತ್ವ ಸಮಸ್ಯೆಗೆ ಅಂತಿಮ ಪರಿಹಾರವನ್ನು ಒದಗಿಸಲು ಸಾಧ್ಯವಾಯಿತು.

**ಶಾಸ್ತ್ರಿ-ಸಿರಿಮಾವೋ ಒಪ್ಪಂದ-1964:** 1964ರ ಒಪ್ಪಂದವು ಸ್ವತಂತ್ರ ಸಿಲೋನ್ ಸರಕಾರವು ಗಣತಿಯ ಆಗಲೇ ಮೂಲಕ ಗುರುತಿಸಿದ್ದಂತಹ ಸುಮಾರು 9,75,000 ಸಂಖ್ಯೆಯ ಕಾರ್ಮಿಕರನ್ನು, ಪರಸ್ಪರ ಎರಡೂ ದೇಶಗಳು ಹಂಚಿಕೊಂಡು, ಪೌರತ್ವವನ್ನು ನೀಡಿ ತಮ್ಮ-ತಮ್ಮ ದೇಶದಲ್ಲಿ ಪುನರ್ವಸತೀಕರಣಗೊಳಿಸುವುದೆಂಬ ನಿರ್ಧಾರಕ್ಕೆ ಬಂದವು. 1964 ರ ಒಪ್ಪಂದದ ಮೊದಲ ಭಾಗವಾಗಿ 5,25,000 ಭಾರತೀಯ ಸಿಲೋನ್ ಕಾರ್ಮಿಕರಿಗೆ ಮತ್ತು ಅವರ ನಂತರದ ಸಂತತಿಗೆ ಭಾರತ ಸರಕಾರವು ಪೌರತ್ವವನ್ನು ನೀಡಿ, ಭಾರತದಲ್ಲಿ ಪುನರ್ವಸತೀಕರಣಗೊಳಿಸುವುದು. ಸುಮಾರು 3,00,000 ಭಾರತೀಯ ವಲಸೆ ಕಾರ್ಮಿಕರು ಮತ್ತು ಅವರ ನಂತರದ ಸಂತತಿಗೆ ಶ್ರೀಲಂಕಾ ಸರಕಾರವು ಪೌರತ್ವವನ್ನು ನೀಡಿ ತನ್ನ (ಶ್ರೀಲಂಕಾದಲ್ಲಿ) ದೇಶದಲ್ಲಿ ಪುನರ್ವಸತೀಕರಣಗೊಳಿಸುವುದೆಂಬ ನಿರ್ಧಾರಕ್ಕೆ ಬಂದವು. ಅಲ್ಲದೆ 1964 ರ ಒಪ್ಪಂದ ಪೂರ್ಣಗೊಳಿಸಲು 15 ವರ್ಷಗಳ ಕಾಲಾವಕಾಶವನ್ನು ಈ ಒಪ್ಪಂದದ ಮೂಲಕ ನಿಗದಿಪಡಿಸಲಾಗಿತ್ತು. ಮುಂದೆ 1968 ರಲ್ಲಿ **'ಪುನಸಂಜಾತೀಕರಣ ಅನುಷ್ಠಾನ ಕಾಯ್ದೆ-1968'** ಜಾರಿಗೆ ತಂದು ಪುನರ್ ಸಂಜಾತೀಕರಣ ಪ್ರಕ್ರಿಯೆ ಪ್ರಾರಂಭಿಸಲಾಯಿತು.

**ಇಂದಿರಾ–ಸಿರಿಮಾವೋ ಒಪ್ಪಂದ–1974:** 1964 ರ ಒಪ್ಪಂದದಲ್ಲಿ ಉಳಿದಂತಹ 1,50,000 ಭಾರತೀಯ ವಲಸೆ ಕಾರ್ಮಿಕರ ಪೌರತ್ವದ ಕುರಿತಂತೆ ನಂತರದಲ್ಲಿ ಬಗೆಹರಿಸುವ ತೀರ್ಮಾನಕ್ಕೆ ಎರಡು ದೇಶಗಳು ಒಪ್ಪಂದ ಮಾಡಿದ್ದವು. ಮುಂದೆ 1974 ರಲ್ಲಿ ಶ್ರೀಲಂಕಾ ಮತ್ತು ಭಾರತ ದೇಶಗಳ ನಡುವೆ ಇಂದಿರಾ–ಸಿರಿಮಾವೋ ಒಪ್ಪಂದ–1974: ನಡೆದು, ಉಳಿದ 1,50,000 ಭಾರತೀಯ ಕಾರ್ಮಿಕರನ್ನು, ಎರಡು ದೇಶಗಳು ತಲಾ 75,000 ರಂತೆ ಹಂಚಿಕೊಂಡು, ಅವರ ನಂತರದ ಸಂತತಿಗೆ ಪೌರತ್ವವನ್ನು ನೀಡುವ ಒಪ್ಪಂದದೊಂದಿಗೆ, ಸಿಲೋನಿನಲ್ಲಿನ 'ಭಾರತೀಯ ತೋಟ ಕಾರ್ಮಿಕರ ಪೌರತ್ವ ಸಮಸ್ಯೆಗೆ' ಅಂತಿಮ ಪರಿಹಾರವನ್ನು ಕಂಡುಕೊಂಡವು.

**ಪುನರ್ ಸಂಜಾತೀಕರಣ ಮತ್ತು ಪುನರ್ವಸತೀಕರಣ ಪ್ರಕ್ರಿಯೆಗಳು**

1964 ಮತ್ತು 1974ರ ಈ ಎರಡು ಮಹಾಒಪ್ಪಂದದ ಮೂಲಕ ಭಾರತದಲ್ಲಿ ಪುನರ್‌ಸಂಜಾತಗೊಂಡ ಸಿಲೋನ್ ತೋಟಕಾರ್ಮಿಕರನ್ನು ಭಾರತದಲ್ಲಿ ಪುನರ್ವಸತೀಕರಣಗೊಳಿಸುವುದು ಭಾರತ ಸರ್ಕಾರಕ್ಕೆ ಒಂದು ಸವಾಲಿನ ಕೆಲಸವಾಗಿತ್ತು. ಮುಖ್ಯವಾಗಿ ಬೃಹತ್ ಸಂಖ್ಯೆಯಲ್ಲಿ ಭಾರತದ ಪೌರತ್ವವನ್ನು ಪಡೆದು ಭಾರತಕ್ಕೆ ಪುನರ್ ಸಂಜಾತೀಕರಣಗೊಂಡಿದ್ದ ಸಿಲೋನ್ ತೋಟ ಕಾರ್ಮಿಕರಿಗೆ ಉದ್ಯೋಗ, ವಸತಿ ಮತ್ತು ಇತರೆ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಡುವ ನಿಟ್ಟಿನಲ್ಲಿ ಭಾರತ ಸರಕಾರ ಉತ್ತಮ ಯೋಜನೆಗಳನ್ನು ರೂಪಿಸಬೇಕಾಗಿತ್ತು. ಈ ನಿಟ್ಟಿನಲ್ಲಿ ಭಾರತಕ್ಕೆ ಪುನರ್ ಸಂಜಾತೀಕರಣಗೊಂಡಂತಹ, ಸಿಲೋನ್ ಭಾರತೀಯರಿಗೆ ಭಾರತ ಸರಕಾರವು, ಭಾರತದ ವಿವಿಧ ರಾಜ್ಯ ಸರಕಾರಗಳ ಸಹಯೋಗದೊಂದಿಗೆ ವಿವಿಧ ಯೋಜನೆಗಳ ಮೂಲಕ ಪುನರ್ವಸತೀಕರಣಗೊಳಿಸುವ ಕಾರ್ಯವನ್ನು ಕೈಗೊಂಡಿತು.

ಭಾರತ ಸರಕಾರದ ಪುನರ್ವಸತೀಕರಣ ಯೋಜನೆಯಂತೆ ಒಟ್ಟು ಸಿಲೋನ್ ಪುನರ್ ಸಂಜಾತರಲ್ಲಿ ಶೇ 95 ಸಿಲೋನ್ ತೋಟ ಕಾರ್ಮಿಕರನ್ನು, ತಮಿಳುನಾಡಿನ ನೀಲಗಿರಿ ಜಿಲ್ಲೆಯ **'ಕೋತಗಿರಿ ಚಹಾ ತೋಟ'**ಗಳಲ್ಲಿ, ಕನ್ಯಾಕುಮಾರಿಯ **'ಅರಸು ರಬ್ಬರ್ ಪ್ಲಾಂಟೇಶನ್'** (ARP) ಗಳಲ್ಲಿ', ಕೊಯಂಬತ್ತೂರಿನ **'ಸಿಂಚೋನಾ ಪ್ಲಾಂಟೇಶನ್'** ಗಳಲ್ಲಿ ಪುನರ್ವಸತೀಕರಣ ಕಾರ್ಯ ಕೈಗೊಂಡಿತು, ಅದೇ ರೀತಿ ಕೇರಳದ ಪುನಲೂರಿನಲ್ಲಿನ **'ರಿಹ್ಯಾಬಿಲಿಟೇಶನ್ ಪ್ಲಾಂಟೇಶನ್ ಲಿಮಿಟೆಡ್'** (RPL) ಮತ್ತು ಕರ್ನಾಟಕದಲ್ಲಿನ **'ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ'** ದ ರಬ್ಬರ್ ತೋಟಗಳಲ್ಲಿ ವಿವಿಧ ಮೂಭೂತ ಸೌಲಭ್ಯಗಳೊಂದಿಗೆ ಪುನರ್ವಸತೀಕರಣ ಮಾಡಲಾಯಿತು.

ಕರ್ನಾಟಕದಲ್ಲಿನ ಪುನರ್ವಸತಿ ಯೋಜನೆಯು 1961 ರಲ್ಲಿ ಭಾರತ ಮತ್ತು ಕರ್ನಾಟಕ ಸರಕಾರಗಳ ಜಂಟಿಸಹಭಾಗಿತ್ವದಲ್ಲಿ, ಪ್ರಯೋಗಾರ್ಥವಾಗಿ ಪ್ರಾರಂಭಿಸಿದ ರಬ್ಬರ್ ತೋಟಗಾರಿಕೆಯು ಯಶಸ್ವಿಯಾದ

ಹಿನ್ನೆಲೆಯಲ್ಲಿ ಈ ರಬ್ಬರ್ ತೋಟಗಳನ್ನು ಸಿಲೋನ್ ಪುನರ್‌ಸಂಜಾತರಿಗೆ ಪುನರ್ವಸತೀಕರಣ ಯೋಜನೆಯಾಗಿ ಪರಿವರ್ತಿಸಲಾಯಿತು. ಮುಖ್ಯವಾಗಿ ಸಿಲೋನ್ ಪುನರ್ ಸಂಜಾತರು ಮೂಲತಃ ರಬ್ಬರ್ ತೋಟಗಳಲ್ಲಿ ಕೆಲಸ ಮಾಡಿದ ಅನುಭವ ಇದ್ದುದರಿಂದ ಈ ರಬ್ಬರ್ ತೋಟಗಳನ್ನು ಮತ್ತಷ್ಟು ವಿಸ್ತರಿಸಿ, ಸಿಲೋನ್ ಪುನರ್ ಸಂಜಾತರಿಗೆ ಉದ್ಯೋಗ, ವಸತಿ ಮತ್ತು ಇತರ ಮೂಲಭೂತ ಸೌಲಭ್ಯಗಳನ್ನು ನೀಡಿ ಪುನರ್ವಸತೀಕರಣ ಮಾಡಲಾಯಿತು. ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದ ದಾಖಲೆಯಂತೆ, ಕೆ.ಎಫ್.ಡಿ.ಸಿ ನಿಗಮವು 4,443.32 ಹೆಕ್ಟೇರ್ ರಬ್ಬರ್ ನೆಡುತೋಪುಗಳನ್ನು ಹೊಂದಿದ್ದು, ಸುಮಾರು 988 ಪುನರ್‌ಸಂಜಾತ ಸಿಲೋನ್ ತೋಟಕಾರ್ಮಿಕ ಕುಟುಂಬಗಳಿಗೆ ಸೇರಿದ, 1852 ಸಿಲೋನ್ ತೋಟ ಕಾರ್ಮಿಕರನ್ನು ನಿಗಮದ ನೆಡುತೋಪುಗಳ ಇಕ್ಕೆಲಗಳಲ್ಲಿ ಕಾಲನಿಯನ್ನು ನಿರ್ಮಿಸಿ ಪುನರ್ವಸತೀಕರಣಗೊಳಿಸಲಾಯಿತು. ಕೆ.ಎಫ್.ಡಿ.ಸಿ ರಬ್ಬರ್ ತೋಟದ ಪುನರ್ವಸತೀಕರಣ ಯೋಜನೆಯಂತೆ ಪ್ರತಿ ಸಿಲೋನ್ ಪುನರ್ವಸಿತ ಕುಟುಂಬಕ್ಕೆ ಎರಡು ಉದ್ಯೋಗ, ಕಾರ್ಮಿಕ ಕುಟುಂಬಗಳಿಗೆ ವಾಸಿಸಲು ಉಚಿತ ವಸತಿಗಳನ್ನು ಮತ್ತು ಅಗತ್ಯವಿರುವ ಇತರ ಮೂಲಭೂತ ಸೌಲಭ್ಯಗಳನ್ನು ನೀಡಲಾಗಿದೆ.

ಪ್ರಸ್ತುತ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದ ದಾಖಲೆಯಂತೆ, ನಿಗಮದ ರಬ್ಬರ್ ವಿಭಾಗದಲ್ಲಿ ನೆಡು ತೋಪುಗಳು ಮತ್ತು ಕಾರ್ಖಾನೆಗಳು ಸೇರಿದಂತೆ ಸುಮಾರು 1444 ಕಾರ್ಮಿಕರು ಇದ್ದು, ಅವರುಗಳಲ್ಲಿ 744 ಮೂರ್ತೆದಾರರಾಗಿ (Tappers), 550 ಸಾಮಾನ್ಯ ಕಾರ್ಮಿಕರಾಗಿ (Common Labor) 150 ಕಾರ್ಖಾನೆ ಕಾರ್ಮಿಕರಾಗಿ (Factory labor) ಕಾರ್ಯ ನಿರ್ವಹಿಸುತ್ತಿದ್ದಾರೆ.

ಕಳೆದ ಐದು ದಶಕಗಳಿಂದ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದ ರಬ್ಬರ್ ತೋಟಗಳಲ್ಲಿ ಕೆಲಸ ಮಾಡುತ್ತಾ ನಿಗಮದ ಸಾಲುಮನೆಗಳಲ್ಲಿ ವಾಸಿಸುತ್ತಿರುವ ಈ ಸಿಲೋನ್ ಪುನರ್ವಸಿತ ತೋಟಕಾರ್ಮಿಕರ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಜೀವನ ವ್ಯವಸ್ಥೆಯಲ್ಲಿ ಸಾಕಷ್ಟು ಪರಿವರ್ತನೆಗಳು ಕಂಡುಬಂದಿವೆ. ಈ ನಿಟ್ಟಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ಮತ್ತು ಪುತ್ತೂರು ತಾಲ್ಲೂಕಿನ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದ ರಬ್ಬರ್ ತೋಟಗಳಲ್ಲಿ ಕೆಲಸ ಮಾಡುತ್ತಿರುವ ಸಿಲೋನ್ ಪುನರ್ ಸಂಜಾತ ಪುನರ್ವಸಿತ ತೋಟಕಾರ್ಮಿಕರ ಐತಿಹಾಸಿಕ ಹಿನ್ನೆಲೆಯೊಂದಿಗೆ, ಅವರ ಸಾಮಾಜಿಕ– ಆರ್ಥಿಕ ಸ್ಥಿತಿಗತಿಯನ್ನು ಅಧ್ಯಯನ ಮಾಡುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

# ಸಾಹಿತ್ಯ ಪರಾಮರ್ಶೆ

ಸುಮಾರು ಐದು ದಶಕಗಳ ಇತಿಹಾಸ ಸಿಲೋನ್ ಪುನರ್‌ಸಂಜಾತ ಪುನರ್ವಸಿತರಿಗೆ ಇದ್ದರೂ ಕೂಡ ಇವರ ಕುರಿತಂತೆ ಇಲ್ಲಿಯವರೆಗೆ ನಡೆದಿರುವ ಸಂಶೋಧನೆಗಳು, ಅಧ್ಯಯನಗಳು, ಪ್ರಕಟಗೊಂಡಂತಹ ಲೇಖನಗಳು, ಪುಸ್ತಕಗಳು ಮತ್ತು ವರದಿಗಳು ಕಡಿಮೆಯೇ. ಪ್ರಸ್ತುತ ಇಲ್ಲಿ ಲಭ್ಯವಿದ್ದ ಮತ್ತು ವಿವಿಧ ಮೂಲಗಳಿಂದ ಸಂಗ್ರಹಿಸಿದ ವಲಸೆ ಮತ್ತು ಮರುವಲಸೆ ಸಂಬಂಧಿಸಿದ ಸಾಹಿತ್ಯಗಳನ್ನು ವಿವಿಧ ಹಂತಗಳಲ್ಲಿ ಪರಾಮರ್ಶಿಸಲಾಗಿದೆ. ಸಾಹಿತ್ಯ ಪರಾಮರ್ಶೆಯನ್ನು ರಬ್ಬರ್ ತೋಟಬೆಳೆಯ ಹಿನ್ನೆಲೆ, ಸಿಲೋನ್ ತೋಟಕಾರ್ಮಿಕರ ಐತಿಹಾಸಿಕ ಹಿನ್ನೆಲೆ, ತೋಟ ಕಾರ್ಮಿಕರ ಔದ್ಯೋಗಿಕ ಸ್ಥಿತಿಗತಿ, ಸಾಮಾಜಿಕ–ಆರ್ಥಿಕ ಸ್ಥಿತಿಗತಿ, ಶಿಕ್ಷಣ, ಆರೋಗ್ಯ ಮತ್ತು ಸಮಸ್ಯೆಗಳ ಕುರಿತಾಗಿನ ಸಾಹಿತ್ಯಗಳನ್ನು ಪ್ರತ್ಯೇಕವಾಗಿ ಪರಾಮರ್ಶಿಸಿ ವಿವರಿಸಲಾಗಿದೆ.

**ವಾಸುದೇವನ್, ಸಿ (1989)** ರವರು **'ಶ್ರೀಲಂಕನ್ ರಿಪಾಟ್ರಿಯೇಟ್ಸ್ ಸೆಟಲ್ಡ್ ಇನ್ ರಿಹಾಬಿಲಿಟೇಶನ್ ಪ್ಲಾಂಟೇಶನ್ ಲಿಮಿಟೆಡ್ ಪುನಲೂರು, ಕೇರಳ– ಎ ಸ್ಟಡಿ'** ಲೇಖನದಲ್ಲಿ ತಮಿಳುನಾಡಿನಲ್ಲಿರುವ ಹೆಚ್ಚಿನ ಶ್ರೀಲಂಕಾ ಪುನರ್ ಸಂಜಾತ ತಮಿಳರಲ್ಲಿ ಸರಿಸುಮಾರು ಅರ್ಧದಷ್ಟು ಜನರು ಬಡವರಾಗಿದ್ದಾರೆ ಮತ್ತು ಅವರು ಬಡತನ ರೇಖೆಗಿಂತ ಕಡಿಮೆ ಇದ್ದವರಾಗಿದ್ದಾರೆ ಮತ್ತು ಅವರಲ್ಲಿ ಅಸಮಾನತೆ ಇಲ್ಲ ಎನ್ನುತ್ತಾರೆ. ಅವರ ಆದಾಯದ ಮೂಲ ಭಾರತಕ್ಕೆ ಬಂದಮೇಲೆ ವೈವಿಧ್ಯತೆಯಿಂದ ಕೂಡಿದೆ, ಅವರ ಆದಾಯ ಇನ್ನು ಬೆಳವಣಿಗೆ ಆಗಿಲ್ಲ ಎನ್ನುತ್ತಾರೆ. ಅಲ್ಲದೆ ಹೆಚ್ಚಿನವರು ಬಡವರಾದ ಕಾರಣ ಆಹಾರಕ್ಕೆ ಹೆಚ್ಚು ಖರ್ಚು ಮಾಡಬೇಕಾದುದರಿಂದ, ಅವರ ಆಹಾರ ಸೇವನೆಯ ಪ್ರಮಾಣದಲ್ಲಿ ಸಾಕಷ್ಟು ಬದಲಾವಣೆಗಳಾಗಿದ್ದು, ಅದು ಅವರ ಜೀವನ ಶೈಲಿಯ ಮೇಲೆ ಪರಿಣಾಮ ಬೀರಿದೆ ಎಂದು ಉಲ್ಲೇಖಿಸುತ್ತಾರೆ. ಶ್ರೀಲಂಕಾದಲ್ಲಿ ಇವರು ಹೆಚ್ಚು ಹಿಟ್ಟು ಸೇವನೆಯನ್ನು ಮಾಡುತ್ತಿದ್ದರು, ಅದು ಈ ಹೊಸ ನಾಡಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಡಿಮೆಯಾಗಿದೆ. ಆಹಾರಕ್ಕಿಂತ ಹೆಚ್ಚು ಇತರೆ ಖರ್ಚುಗಳಾದ ಶಿಕ್ಷಣ, ಔಷಧ ಮತ್ತು ಸಾರಿಗೆ ವ್ಯವಸ್ಥೆಗೆ ಖರ್ಚು ಮಾಡಬೇಕಾದುದು ಅವರನ್ನು ಮತ್ತಷ್ಟು ಬಡವನ್ನಾಗಿಸಿದೆ. ಮುಖ್ಯವಾಗಿ ಬಯಲು ಪ್ರದೇಶದಲ್ಲಿ ವಾಸಿಸುವವರಿಗಿಂತ, ಗುಡ್ಡ ಪ್ರದೇಶದಲ್ಲಿ ವಾಸಿಸುವವರ ಜೀವನ ಅತ್ಯಂತ ಕಷ್ಟಕರ ಎಂದು ಅಭಿಪ್ರಾಯಿಸುತ್ತಾರೆ.

**ಟಿಂಕರ್ ಹ್ಯೂ (1974)**ರವರು ತಮ್ಮ ಅಧ್ಯಯನ **'ನ್ಯು ಸಿಸ್ಟಮ್ ಆಫ್ ಸ್ಲೇವರಿ–ದಿ ಎಕ್ಸ್‌ಪೋರ್ಟ್ ಆಫ್ ಇಂಡಿಯನ್ ಲೇಬರ್ ಓವರ್ಸೀಸ್–1830–1920'** ದಲ್ಲಿ ಉತ್ತರ ಈಶಾನ್ಯ ಭಾಗದ ಆದಿವಾಸಿ ಸಮುದಾಯವಾದ 'ದಂಗಾರರು' ಮತ್ತು ದಕ್ಷಿಣ ಭಾರತದ 'ಅಸ್ಪೃಷ್ಯ' ಕೃಷಿ ಕಾರ್ಮಿಕರು ಬ್ರಿಟೀಷರ

ವಸಾಹತು ಕಾಲದ ತೋಟಗಳಲ್ಲಿ ದುಡಿಯುವ ವಲಸೆ ಕಾರ್ಮಿಕರ ಮೂಲವಾಗಿದ್ದರು. ಅಲ್ಲದೆ ಉತ್ತರ ಈಶಾನ್ಯ ಭಾಗದವರು ಪ್ರಮುಖವಾಗಿ ಕೆರೆಬಿಯನ್ ದ್ವೀಪಗಳಿಗೆ, ಟ್ರಿನಿದಾದ್, ಜಮೈಕಾ, ಬ್ರಿಟಿಷ್ ಗಯಾನ, ಫಿಜಿ, ಮತ್ತು ಮಾರಿಷಸ್ ದೇಶಗಳಿಗೆ ವಲಸೆ ಕಾರ್ಮಿಕರಾಗಿದ್ದರೆ, ದಕ್ಷಿಣದ ವಲಸೆ ಕಾರ್ಮಿಕರು ಮಲಯ (ಮಲೇಷಿಯಾ), ಬರ್ಮಾ ಮತ್ತು ಶ್ರೀಲಂಕಾ ದೇಶಗಳಿಗೆ ಹಂಚಲ್ಪಟ್ಟಿದ್ದರು. ಸಿಲೋನ್, ಮಲಯಾ ಮತ್ತು ಬರ್ಮಾಗಳಿಗೆ 'ಕಂಗಣಿ' ಪದ್ಧತಿಯ ಮೂಲಕ ಕಾರ್ಮಿಕರ ನೇಮಕವಾಗುತ್ತಿದ್ದರೆ ಉಳಿದ ಕಡೆಗಳಿಗೆ 'ಮೇಸ್ತ್ರಿ' ಪದ್ಧತಿಯ ಮೂಲಕ ಆಯ್ಕೆಯಾಗುತ್ತಿದ್ದರು.

**ಕ್ಲಾರ್ಕ್, ಪೀಚ್ ಮತ್ತು ವರ್ಟೋವೆಕ್. (1990)** ರವರು ತನ್ನ ಅಧ್ಯಯನದಲ್ಲಿ ಸಿಲೋನ್ ತೋಟಗಳಲ್ಲಿ ಭಾರತೀಯ ತಮಿಳರು ಭಾಷೆ ಮತ್ತು ಸಂಸ್ಕೃತಿಗಳ ನೆಲೆಯಲ್ಲಿ ಜೊತೆಯಾಗುತ್ತಿದ್ದರು ಎಂದು ಅಭಿಪ್ರಾಯಿಸುತ್ತಾರೆ. ಮುಂದುವರೆದು, ಭಾರತೀಯ ವಲಸಿಗರ ಮತ್ತು ಸಿಲೋನ್ ವಸಾಹತು ಆಡಳಿತಗಾರರ ಬಾಂಧವ್ಯವು ಬಿಟೀಷರ ಆರ್ಥಿಕ ವಿಸ್ತರಣೆಯ ಹಿನ್ನೆಲೆಯಲ್ಲಿ ಬಹಳ ಅನ್ಯೋನ್ಯವಾಗಿತ್ತು ಎನ್ನುತ್ತಾರೆ.

**ಕನಪತ್ತಿಪಿಳ್ಳೈ, ವಿ, (2012)** ಅವರು **'ಸಿಟಿಜನ್ ಶಿಪ್ ಆಂಡ್ ಸ್ಟೇಟ್‌ಲೆಸ್ನೆಸ್: ದಿ ಕೇಸ್ ಆಫ್ ತಮಿಳ್ ಎಸ್ಟೇಟ್ ವರ್ಕರ್ಸ್'** ಕೃತಿಯಲ್ಲಿ ಸಿಲೋನ್ ಎಸ್ಟೇಟ್‌ಗಳಲ್ಲಿ ವಲಸೆ ಕಾರ್ಮಿಕರಾಗಿದ್ದ ಭಾರತೀಯರ ಸ್ಥಿತಿಗತಿಗಳ ಕುರಿತು ಅಧ್ಯಯನ ನಡೆಸಿದ್ದಾರೆ. ಅವರು ಭಾರತೀಯ ವಲಸೆ ಕಾರ್ಮಿಕರು, ಇಂದಿಗೂ ವಸಾಹತು ಕಾಲದ ಲೈನ್ ಪದ್ಧತಿಯ ಕಾಲನಿಗಳ, ಎರಡು ಕೊಠಡಿಗಳ ಮನೆಗಳಲ್ಲಿಯೆ ವಾಸಿಸುತ್ತಿದ್ದಾರೆ. ಕಾರ್ಮಿಕರ ಆರೋಗ್ಯ ಪರಿಸ್ಥಿತಿ ತೀರಾ ಹದೆಗೆಟ್ಟಿದ್ದು, ಚರ್ಮ ಮತ್ತು ಸ್ನಾಯು ಸಂಬಂಧಿ ರೋಗಗಳಿಂದ ಬಳಲುತ್ತಿದ್ದರು ಎಂದು ಉಲ್ಲೇಖಿಸುತ್ತಾರೆ.

**ಅಡಪ ಸತ್ಯನಾರಾಯಣ (2001),** ಅವರು **'ಬರ್ಡ್ಸ್ ಆಫ್ ಪಾಸೇಜ್-ಮೈಗ್ರೇಶನ್ ಆಫ್ ಸೌಥ್ ಇಂಡಿಯನ್ ಲೇಬರ್ ಕಮ್ಯುನಿಟೀಸ್ ಟು ಸೌಥ್ ಈಸ್ಟ್ ಏಷಿಯಾ: 19-20 ಸೆಂಚುರಿ'** ಯಲ್ಲಿ ದಕ್ಷಿಣ ಭಾರತದಿಂದ ಮಲಯಾ ಮತ್ತು ಬರ್ಮಾ ದೇಶಗಳಿಗೆ ವಲಸೆ ಹೋಗುತ್ತಿದ್ದವರ ಕಾರಣವನ್ನು ಅಧ್ಯಯನ ಮಾಡಿದ್ದಾರೆ. ಆರ್ಥಿಕವಾಗಿ ಹಿಂದುಳಿಯುವಿಕೆ, ಕೃಷಿಯಲ್ಲಿನ ತೀವ್ರ ಹಿನ್ನಡೆ ಕೆಳ (ಶೂದ್ರ) ಜಾತಿ ಮತ್ತು ಕೆಳ ವರ್ಗದವರು ದಕ್ಷಿಣ ಏಷ್ಯಾದ ದೇಶಗಳಾದ ಮಲಯಾ ಮತ್ತು ಬರ್ಮಾಗಳಿಗೆ ವಲಸೆ ಹೋಗುತ್ತಿದ್ದರು ಎಂದು ಉಲ್ಲೇಖಿಸುತ್ತಾರೆ. ಮಾತ್ರವಲ್ಲ ಸಾಮಾಜಿಕ ಅವ್ಯವಸ್ಥೆಯು ದಕ್ಷಿಣ ಭಾರತೀಯರ ವಲಸೆಗೆ ಕಾರಣವಾಗಿತ್ತು ಎಂದು ಉಲ್ಲೇಖಿಸುತ್ತಾರೆ. ದಕ್ಷಿಣ ಏಷ್ಯಾದ ದೇಶಗಳಲ್ಲಿ, ಕೆಳ ಜಾತಿಯವರಿಗೆ ಉತ್ತಮ ಉದ್ಯೋಗ ಅವಕಾಶಗಳು, ಹೆಚ್ಚಿನ ವೇತನ ದೊರಕುತ್ತಿರುವುದು ವಲಸೆ ಪ್ರಮಾಣದಲ್ಲಿ ಹೆಚ್ಚಳಕ್ಕೆ

ಕಾರಣವಾಗಿತ್ತು. ಅಲ್ಲದೆ ಈ ದೇಶಗಳಿಗೆ ಈ ಹಿಂದೆಯೇ ವಲಸೆ ಹೋಗಿ ಉದ್ಯೋಗ ಮಾಡುತ್ತಿದ್ದ, ಸ್ನೇಹಿತ ಸಂಬಂಧಿಗಳೇ ಹೆಚ್ಚಿನ ಸಂಖ್ಯೆಯಲ್ಲಿ ವಲಸೆ ಹೋಗುತ್ತಿದ್ದರು ಎಂದು ದಾಖಲಿಸುತ್ತಾರೆ.

**ಎರಿಕ್ಸನ್ (1993)** ಅವರು ಭಾರತೀಯ ವಲಸಿಗರು ಸಿಲೋನಿನ ಹೊಸ ನೆಲದಲ್ಲಿನ ಸ್ಥಳೀಯ ಸಮುದಾಯವಾದ ಸಿಂಹಳೀಯರ ಜೊತೆಗೆ ಸಮ್ಮಿಳಿತರಾಗದೆ, ತಮ್ಮ ಮೂಲ ಸಂಸ್ಕೃತಿಯನ್ನು ಮುಂದುವರೆಸಿಕೊಂಡು ಹೋದರು. ಇದು ಭಾರತೀಯ ತಮಿಳರು ತಮ್ಮ ಗುರುತಿಗೆ ತಾವೆ ಗಡಿಯನ್ನು ನಿರ್ಮಿಸಿದಂತಾಯಿತು ಎಂದು ಅಭಿಪ್ರಾಯಿಸುತ್ತಾರೆ.

**ದೋಡ್ಜ್, ಪಿ.ಕೆ ಮತ್ತು ಪೌಲ್, ವೈ. ಡಿ (1981)** ತಮ್ಮ ಲೇಖನದಲ್ಲಿ ಮದುರೈಯಲ್ಲಿನ ಪುನರ್‌ಸಂಜಾತ ತಮಿಳರ ಸ್ಥಿತಿಗತಿಯ ಕುರಿತಂತೆ ಉಲ್ಲೇಖಿಸಿದ್ದಾರೆ. ಅವರು ಮದುರೈನ ಜನಸಾಮಾನ್ಯರಿಗೆ ಹೋಲಿಸಿದರೆ ಶಿಕ್ಷಣ, ಉದ್ಯೋಗ, ಆದಾಯ ಮತ್ತು ಪೌಷ್ಠಿಕಾಂಶಗಳಿಗೆ ಹೋಲಿಸಿದರೆ ಪುನರ್ ಸಂಜಾತ ಸಮುದಾಯಗಳ ಜನರು ಉತ್ತಮ ಸ್ಥಿತಿಯಲ್ಲಿದ್ದಾರೆ ಎಂದು ವ್ಯಕ್ತಪಡಿಸುತ್ತಾರೆ. ಮುಂದುವರೆದು, ಪುನರ್ ವಸತೀಕರಣ ಪ್ರಕ್ರಿಯೆಯ ಭಾಗವಾಗಿ ನಿರ್ಮಿಸಿದ ಮನೆಗಳು ಶಿಥಿಲಗೊಂಡಿದ್ದವು, ವಾಸಕ್ಕೆ ಯೋಗ್ಯವಾಗಿರಲಿಲ್ಲ ಎಂದು ಅಭಿಪ್ರಾಯ ಪಡುತ್ತಾರೆ.

**ರಾಣಿ, ಎಸ್.ಪಿ (2012) 'ಇಂಡೋ–ಶ್ರೀಲಂಕನ್ ಪ್ಯಾಕ್ಟ್ 1964 ಆಂಡ್ ಪ್ರಾಬ್ಲಮ್ಸ್ ಆಫ್ ಸ್ಟೇಟ್ಮೆಂಟ್– ಎ ಸ್ಟಡಿ'** ಅವರು ತನ್ನ ಲೇಖನದಲ್ಲಿ 1964 ರ ಸಿರಿಮಾವೋ–ಶಾಸ್ತ್ರೀ ಒಪ್ಪಂದದ ಕುರಿತಂತೆ ವಿಮರ್ಶಿಸಿದ್ದಾರೆ. ಅವರು ಸಿಲೋನಿನ ಭಾರತೀಯ ತಮಿಳರ ಪುನರ್ ಸಂಜಾತೀಕರಣ ಪ್ರಕ್ರಿಯೆಗೆ ನಿಗದಿಪಡಿಸಿದ್ದ 15 ವರುಷಗಳ ಅವಧಿಯು ಮುಕ್ತಾಯವಾಗಿದೆ, ಆದರೆ ಪುನರ್ ವಸತೀಕರಣ ಪ್ರಕ್ರಿಯೆ ಪರಿಪೂರ್ಣವಾಗಲಿಲ್ಲ ಎನ್ನುತ್ತಾರೆ. ಮುಂದುವರೆದು ಸಾಮಾಜಿಕ ವೈಕಲ್ಯತೆ, ದೈಹಿಕ ತೊಂದರೆಗಳು ಮತ್ತು ಮಾನಸಿಕ ಸಂಕಟಗಳು ಹಾಗೆಯೇ ಮುಂದುವರೆದಿವೆ ಎಂದು ಉಲ್ಲೇಖಿಸುತ್ತಾರೆ. ಅಲ್ಲದೆ ಅಸಮತೋಲನದಿಂದ ಕೂಡಿದ, ಹೊಂದಿಕೆಯಾಗದ ಒಪ್ಪಂದದ ಅಂಶಗಳು ಇವರನ್ನು ಬಲಿಪಶುಗಳಾಗಿಸಿವೆ ಎಂದು ಅಭಿಪ್ರಾಯಿಸುತ್ತಾರೆ.

**ಕುರ್ಮಿ, ಪ್ರದೀಪ್ (2014)** ರವರು **'ಪ್ರಾಬ್ಲಮ್ ಆಫ್ ಎಜ್ಯುಕೇಶನಲ್ ಅಟೈನ್‌ಮೆಂಟ್ ಚಿಲ್ಡ್ರನ್: ಎ ಕೇಸ್ ಸ್ಟಡಿ ಆಫ್ ಗಾರ್ಡನ್ ಲೇಬರರ್ಸ್ ಇನ್ ದರ್ಬಿ ಟೀ ಎಸ್ಟೇಟ್'** ಅಧ್ಯಯನದಲ್ಲಿ ತೋಟ ಕಾರ್ಮಿಕರ ಮಕ್ಕಳ ಶಿಕ್ಷಣ ಸಾಧನೆಗಳು ಮತ್ತು ಅವಕಾಶಗಳ ಕುರಿತು ಉಲ್ಲೇಖಿಸಿದ್ದಾರೆ. ಅವರು ತೋಟ ಕಾರ್ಮಿಕರ ಮಕ್ಕಳ ಶಿಕ್ಷಣ ಸಾಧನೆಯು ಅವರ ತಾಯಿಯ ಶಿಕ್ಷಣದ ಮೇಲೆ ಅವಲಂಬಿತವಾಗಿದೆ ಎನ್ನುತ್ತಾರೆ. ಮುಂದುವರೆದು ಉತ್ತಮ ಶಿಕ್ಷಣ ಪಡೆದ ತಾಯಂದಿರ ಮಕ್ಕಳ ಶೈಕ್ಷಣಿಕ ಸಾಧನೆ ಉನ್ನತ ಮಟ್ಟದಲ್ಲಿರುತ್ತದೆ,

ಕಡಿಮೆ ವಿದ್ಯಾಭ್ಯಾಸ ಪಡೆದ ತಾಯಂದಿರ ಮಕ್ಕಳ ಶೈಕ್ಷಣಿಕ ಸಾಧನೆ ಕಳಪೆಯಿಂದ ಕೂಡಿದೆ ಎನ್ನುತ್ತಾರೆ. ಅಲ್ಲದೆ ಕುಟುಂಬದ ಗಾತ್ರ ಮತ್ತು ಕುಟುಂಬದ ಒಟ್ಟು ಆದಾಯವು ಮಕ್ಕಳ ಶಿಕ್ಷಣದ ಮೇಲೆ ನೇರ ಪರಿಣಾಮವನ್ನುಂಟು ಮಾಡುತ್ತದೆ ಎಂದು ಅಭಿಪ್ರಾಯಿಸುತ್ತಾರೆ.

**ನಾಯರ್ (2006),** ಅವರು **'ಎ ಸ್ಟಡಿ ಆಫ್ ದಿ ಹೆಲ್ತ್ ಪ್ರೊಫೈಲ್ ಆಫ್ ರಬ್ಬರ್ ಪ್ಲಾಂಟೇಶನ್ ವರ್ಕರ್ಸ್ ಇನ್ ರೂರಲ್ ಕೇರಳ'** ದಕ್ಷಿಣ ಭಾರತದ ತೋಟಕಾರ್ಮಿಕರ ಶೈಕ್ಷಣಿಕ ಮಟ್ಟದ ಕುರಿತು ವಿವರಿಸುತ್ತಾ ಶೇ 95 ರಷ್ಟು ತೋಟಕಾರ್ಮಿಕರು ಸಂಪೂರ್ಣ ಅನಕ್ಷರಸ್ಥರಾಗಿದ್ದಾರೆ ಮಾತ್ರವಲ್ಲದೆ ಅವರಿಗೆ 1 ರಿಂದ 10 ವರೆಗೆ ಎಣಿಸಲು ಬರುವುದಿಲ್ಲ ಎಂದು ಉಲ್ಲೇಖಿಸುತ್ತಾರೆ. 1960 ರ ಪ್ರಾರಂಭದಲ್ಲಿ ದಕ್ಷಿಣ ಭಾರತದ ಎಲ್ಲಾ ತೋಟಗಳಲ್ಲಿ ಪ್ರಾಥಮಿಕ ಶಾಲೆಗಳಿದ್ದವು, ಮಕ್ಕಳು ಬೆಳಗಿನ ಅವಧಿಯಲ್ಲಿ ತೋಟಗಳಲ್ಲಿ ದುಡಿಯ ಬೇಕಾಗಿತ್ತು, ಮಧ್ಯಾಹ್ನದ ನಂತರ ಶಾಲೆಗೆ ತೆರಳಿ ಅಧ್ಯಯನ ಮಾಡಬೇಕಾಗಿತ್ತು ಎಂದು ವ್ಯಕ್ತಪಡಿಸುತ್ತಾರೆ. ಆದರೆ ಹಾಜರಾತಿ ಕಳಪೆಯಾಗಿತ್ತು ಮತ್ತು ಪೋಷಕರು ಮಕ್ಕಳ ಶಿಕ್ಷಣದ ಬಗ್ಗೆ ಗಮನವಹಿಸುತ್ತಿರಲಿಲ್ಲ ಎನ್ನುತ್ತಾರೆ.

## ಅಧ್ಯಯನದ ಸಮಸ್ಯೆಯ ಹೇಳಿಕೆ

ತೋಟ ಕಾರ್ಮಿಕರು ಭಾರತದ ಪ್ರಮುಖ ಕಾರ್ಮಿಕ ವರ್ಗಗಳಲ್ಲಿ ಒಂದಾಗಿದೆ. ಮಾತ್ರವಲ್ಲ ಸಮಾಜದ ಮುಖ್ಯವಾಹಿನಿಯಿಂದ ಹೊರಗುಳಿಯಲ್ಪಟ್ಟ, ಪ್ರಮುಖ ಕಾರ್ಮಿಕ ಸಮುದಾಯವಾಗಿದೆ. ಅದರಲ್ಲೂ ಪುನರ್ವಸಿತರಾಗಿ ದುಡಿಯುತ್ತಿರುವ ಕಾರ್ಮಿಕರು ಇಂದು ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿರುವುದನ್ನು ಕಾಣಬಹುದಾಗಿದೆ. ಪುನರ್‌ಸಂಜಾತರು ಅಥವಾ ಪುನರ್ವಸಿತ ಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಗಳು ಅವರ ಐತಿಹಾಸಿಕ ಹಿನ್ನೆಲೆ, ಪುನರ್ ಸಂಜಾತೀಕರಣ ಅಥವಾ ಪುನರ್ವಸತೀಕರಣದ ಸ್ವರೂಪ, ಪುನರ್ವಸತಿ ಯೋಜನೆಗಳ ಯಶಸ್ಸು ಮತ್ತು ವೈಫಲ್ಯದ ಮೇಲೆ ಕೇಂದ್ರೀಕರಿಸಿರುತ್ತವೆ. ಪುನರ್ವಸಿತ ತೋಟ ಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಗಳು ಅವರು ಹೊಂದಿರುವ ಮೂಲಭೂತ ಸೌಕರ್ಯಗಳಾದ ವಸತಿ, ಆಹಾರದಿಂದ ಹಿಡಿದು, ಉದ್ಯೋಗ, ವೇತನ, ಆರೋಗ್ಯ ಸಮಸ್ಯೆ, ಬಂಧುತ್ವದವರೇಗೂ ವಿಸ್ತರಿಸಿರುತ್ತವೆ. ಈ ಎಲ್ಲಾ ಹಿನ್ನೆಲೆಯಲ್ಲಿ, ಪ್ರಸ್ತುತ ಅಧ್ಯಯನವು ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ಮತ್ತು ಪುತ್ತೂರು ತಾಲ್ಲೂಕಿನಲ್ಲಿ ಪುನರ್ವಸಿತರಾಗಿರುವ ಸಿಲೋನ್ ತೋಟ ಕಾರ್ಮಿಕರ ಕುರಿತು ಸಮಾಜಶಾಸ್ತ್ರೀಯ ನೆಲೆಯಲ್ಲಿ ಅಧ್ಯಯನವನ್ನು ಮಾಡುತ್ತದೆ.

## ಅಧ್ಯಯನದ ಮಹತ್ವ

ಪ್ರಸ್ತುತ ಅಧ್ಯಯನವು ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ಮತ್ತು ಪುತ್ತೂರು ತಾಲ್ಲೂಕಿನಲ್ಲಿ ಕಾರ್ಯಚರಿಸುತ್ತಿರುವ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದ ಅಧೀನದಲ್ಲಿ ನಡೆಸಲ್ಪಡುತ್ತಿರುವ ರಬ್ಬರ್ ತೋಟಗಳಲ್ಲಿ ಕೆಲಸ ಮಾಡುತ್ತಿರುವ ಸಿಲೋನ್ ತೋಟ ಕಾರ್ಮಿಕರ ಕುರಿತ ಸವಿವರವಾದ ಮಾಹಿತಿಯನ್ನು ಪಡೆಯುವ ಉದ್ದೇಶವನ್ನು ಹೊಂದಿದೆ. ಸಿಲೋನ್ ತೋಟಕಾರ್ಮಿಕರು ದಕ್ಷಿಣ ಭಾರತದ ತಮಿಳರಾಗಿದ್ದು 19ನೇ ಶತಮಾನದಲ್ಲಿನ, ಬ್ರಿಟಿಷ್ ವಸಾಹತು ಕಾಲಘಟ್ಟದಲ್ಲಿ ಸಿಲೋನ್ ದೇಶಕ್ಕೆ ಕಾರ್ಮಿಕರ ಕೊರತೆಯನ್ನು ನೀಗಿಸುವ ನಿಟ್ಟಿನಲ್ಲೆ ವಲಸೆ ಹೋಗಿ ಶತಮಾನಗಳ ಕಾಲ ಸಿಲೋನ್ ದೇಶದಲ್ಲಿ ನೆಲೆಸಿದವರಾಗಿದ್ದಾರೆ. ಸಿಲೋನ್ ದೇಶವು ಸ್ವಾತಂತ್ರ್ಯವನ್ನು ಪಡೆದ ನಂತರದಲ್ಲಿ ಉಂಟಾದ ಭಾರತೀಯ ವಲಸೆ ಕಾರ್ಮಿಕರ ಪೌರತ್ವ ಸಮಸ್ಯೆ ಕುರಿತಂತೆ ನಡೆದ ದೀರ್ಘಕಾಲದ ದ್ವಿಪಕ್ಷೀಯ ಮಾತುಕತೆಯ ಭಾಗವಾಗಿ, 1964 ರಲ್ಲಿ ಏರ್ಪಟ್ಟ **'ಸಿರಿಮಾವೋ–ಶಾಸ್ತ್ರಿ 1964'** ಒಪ್ಪಂದದ ಮೂಲಕ ಭಾರತಕ್ಕೆ ಪುನರ್ ಸಂಜಾತೀಕರಣಗೊಂಡು ಭಾರತದ ವಿವಿಧ ರಾಜ್ಯಗಳಲ್ಲಿ ಪುನರ್ವಸತಿ ಯೋಜನೆಗಳ ಭಾಗವಾಗಿ ಪುನರ್ವಸತೀಕರಣಗೊಂಡವರಾಗಿದ್ದಾರೆ. ಇಲ್ಲಿಯವರೆಗೆ ಈ ಪುನರ್ ಸಂಜಾತ ಸಮುದಾಯಗಳ ಕುರಿತು ಅಧ್ಯಯನಗಳು ನಡೆದಿರುವುದು ಬೆರಳೆಣಿಕೆಯಷ್ಟು ಮಾತ್ರ. ಮಾತ್ರವಲ್ಲದೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪುನರ್ವಸಿತರಾಗಿರುವ ಸಿಲೋನ್ ಪುನರ್ ಸಂಜಾತ ತೋಟ ಕಾರ್ಮಿಕರ ಸಾಮಾಜಿಕ–ಆರ್ಥಿಕ ಸ್ಥಿತಿಗತಿಯ ಕುರಿತು ಇಲ್ಲಿಯವರೆಗೆ ಯಾವುದೇ ಸಮಾಜಶಾಸ್ತ್ರೀಯ ನೆಲೆಯಲ್ಲಿ ಅಧ್ಯಯನಗಳು ನಡೆದಿರುವುದಿಲ್ಲ. ಈ ನಿಟ್ಟಿನಲ್ಲಿ ಪ್ರಸ್ತುತ ಅಧ್ಯಯನವು ಮಹತ್ವವನ್ನು ಪಡೆದುಕೊಂಡಿದೆ.

ಸಮಾಜಶಾಸ್ತ್ರದ ಶೈಕ್ಷಣಿಕ ಮಹತ್ವದ ಹಿನ್ನೆಲೆಯಲ್ಲಿ ಪ್ರಸ್ತುತ ಸಂಶೋಧನೆಯು ಅಗತ್ಯವಾದುದಾಗಿದೆ. ತೋಟ ಕಾರ್ಮಿಕರ ಜೀವನ ಸ್ಥಿತಿಗತಿಯ ಕುರಿತು ಬಹಳಷ್ಟು ಅಧ್ಯಯನಗಳು ನಡೆದಿದ್ದರೂ, ವಲಸೆ ಮತ್ತು ಮರುವಲಸೆಗೊಳಪಟ್ಟ ತೋಟ ಕಾರ್ಮಿಕರ ಕುರಿತಂತೆ, ಬಹುಮುಖ್ಯವಾಗಿ ಪುನರ್‌ಸಂಜಾತ ತೋಟ ಕಾರ್ಮಿಕ ಸಮುದಾಯಗಳ ಜೀವನ ಸ್ಥಿತಿಗತಿಯ ಕುರಿತು ಅಧ್ಯಯನಗಳು ಬಹಳ ವಿರಳವಾಗಿ ಕಾಣಸಿಗುತ್ತಿವೆ. ಮಾತ್ರವಲ್ಲದೆ, ರಬ್ಬರ್ ತೋಟಗಾರಿಕೆಯು ಪುರುಷ ಕೇಂದ್ರೀಕೃತ ವಾಣಿಜ್ಯ ಕೃಷಿಯಾಗಿದ್ದರೂ, ಪ್ರಸ್ತುತ ಅಧ್ಯಯನಕ್ಕೆ ಒಳಪಡಿಸಿದ ಕಾರ್ಮಿಕರಲ್ಲಿ ಮಹಿಳೆಯರೇ ಹೆಚ್ಚಿರುವ ಕಾರಣದಿಂದ ತೋಟ ಕಾರ್ಮಿಕರ ನೆಲೆಯಲ್ಲಿ, ತೋಟ ಕೆಲಸ ಮತ್ತು ಲಿಂಗತ್ವದ ನಡುವಿನ ಸಂಬಂಧಗಳನ್ನು ಅರಿಯುವ ಹಿನ್ನೆಲೆಯಲ್ಲಿ ಈ ಅಧ್ಯಯನವು ಮಹತ್ವದ್ದಾಗಿದೆ. ಇಲ್ಲಿಯವರೆಗಿನ ತೋಟಕಾರ್ಮಿಕರ ಅಧ್ಯಯನವು ಆಂತರಿಕ ವಲಸೆಯನ್ನು ಕೇಂದ್ರೀಕರಿಸಿದ್ದುದು ಮಾತ್ರವಲ್ಲದೆ, ಕಾರ್ಮಿಕರ ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆಯನ್ನು ತಿಳಿಯುವ

ಕುರಿತಾಗಿದ್ದವು. ಪ್ರಸ್ತುತ ಅಧ್ಯಯನವು ಸಾಗರೋತ್ತರ ಪುನರ್‌ಸಂಜಾತ ಪುನರ್ವಸಿತ ಕಾರ್ಮಿಕರ ಕುರಿತಾಗಿರುವುದರಿಂದ ಮಾಹಿತಿಯ ಮತ್ತು ಕಾನೂನು ರೂಪಿಸುವ ನೆಲೆಯಲ್ಲಿ ಅತ್ಯಂತ ಮಹತ್ವವನ್ನು ಪಡೆದುಕೊಂಡಿದೆ. ಮಾತ್ರವಲ್ಲ ಪ್ರಸ್ತುತ ಅಧ್ಯಯನಕ್ಕೆ ಒಳಪಡಿಸಿದ ಪುನರ್‌ಸಂಜಾತ ಕಾರ್ಮಿಕರ ಐತಿಹಾಸಿಕ ಹಿನ್ನೆಲೆಯು ಕಾರ್ಮಿಕರ ಜೀವನದ ಎಲ್ಲಾ ಆಯಾಮಗಳ ಮೇಲೆ ಬೆಳಕು ಚೆಲ್ಲುವುದರಿಂದ ಈ ನಿಟ್ಟಿನಲ್ಲಿ ಅಧ್ಯಯನವು ಅತ್ಯಂತ ಮಹತ್ವದ್ದಾಗಿದೆ.

ತೋಟ ಜೀವನ ವ್ಯವಸ್ಥೆಯು ಒಂದು ಸಮಗ್ರ ಸಾಮಾಜಿಕ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತದೆ. ಸಮಾಜದ ಮುಖ್ಯವಾಹಿನಿಯಿಂದ ಹೊರಗಿದ್ದು ತಮ್ಮದೇ ಆದ ವ್ಯವಸ್ಥೆಯನ್ನು ಕಟ್ಟಿಕೊಂಡಿರುವ ತೋಟ ಕಾರ್ಮಿಕ ಸಮುದಾಯಗಳು, ಒಂದು ವಿಭಿನ್ನ ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನದ ಕೇಂದ್ರವಾಗಿದೆ. ಈ ತೋಟಕಾರ್ಮಿಕರ ಜೀವನ ಶೈಲಿ, ವಿವಾಹ ಪದ್ದತಿ, ಬಂಧುತ್ವದಂತಹ ಅಂತಃಕ್ರಿಯೆ ವ್ಯವಸ್ಥೆಯು ಸಮಾಜಶಾಸ್ತ್ರೀಯ ನೆಲೆಯಲ್ಲಿ ಅಧ್ಯಯನಕ್ಕೆ ಅರ್ಥಪೂರ್ಣವಾದುದಾಗಿದೆ.

ಪ್ರಸ್ತುತ ಅಧ್ಯಯನಕ್ಕೆ ಒಳಪಡಿಸಿದ ಕಾರ್ಮಿಕರು ಪುನರ್ವಸತಿ ಕಾರ್ಮಿಕರಾಗಿರುವುದರಿಂದ ಪುನರ್ವಸತಿ ಯೋಜನೆಯ ಯಶಸ್ವಿ ಮತ್ತು ವೈಫಲ್ಯವನ್ನು ತಿಳಿಯುವ ನಿಟ್ಟಿನಲ್ಲಿ ಈ ಅಧ್ಯಯನವು ಮಹತ್ವವನ್ನು ಪಡೆದಿದೆ. ಮಾತ್ರವಲ್ಲ ಕಾನೂನು, ಯೋಜನೆ ಮತ್ತು ಕಾರ್ಯಕ್ರಮ ರೂಪಿಸುವ ಸರಕಾರದ ಅಂಗಗಳಿಗೆ, ವಾಸ್ತವ ಮಾಹಿತಿಯನ್ನು ಕೊಡುವ ನಿಟ್ಟಿನಲ್ಲಿ ಈ ಅಧ್ಯಯನ ಮಹತ್ವವನ್ನು ಪಡೆದುಕೊಂಡಿದೆ. ಒಟ್ಟಾಗಿ ಸಮಾಜದ ಒಂದು ಭಾಗವಾದ ಈ ತೋಟ ಕಾರ್ಮಿಕ ಸಮುದಾಯವು ವೃತ್ತಿ ಏಣಿ–ಶ್ರೇಣಿ, ಜೀವನ ವಿಧಾನ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಸ್ಥಾನಮಾನದ ಕುರಿತು ಮಾಹಿತಿಯನ್ನು ತೆರೆದಿಡುತ್ತದೆ.
ವಲಸೆ ಕಾರ್ಮಿಕರು ಹೊಸ ಆರ್ಥಿಕ ವ್ಯವಸ್ಥೆಯನ್ನು ಕಟ್ಟಿಕೊಡುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಾ, ತಾವು ವಾಸಿಸುತ್ತಿರುವ ಸ್ಥಳೀಯ ಪ್ರದೇಶದ ಕಾರ್ಮಿಕರ ಕೊರತೆಯನ್ನು ನೀಗಿಸುವ ಬಹುದೊಡ್ಡ ಸಂಪತ್ತಾಗಿ ಕಾರ್ಯನಿರ್ವಹಿಸುತ್ತಾರೆ. ಮಾತ್ರವಲ್ಲ, ಹೊಸ ವಾಣಿಜ್ಯ ಕೃಷಿಯನ್ನು ಪರಿಚಯಿಸುತ್ತಾ, ಸ್ಥಳೀಯರ ಜೀವನದ ಚಿತ್ರಣವನ್ನೇ ಬದಲಾಯಿಸುತ್ತಾರೆ. ವಲಸೆ ಕಾರ್ಮಿಕರ ಆಗಮನವು ಸ್ಥಳೀಯ ಆರ್ಥಿಕ ಚಟುವಟಿಕೆಗಳಿಗೆ ಪ್ರೋತ್ಸಾಹವನ್ನು ಮತ್ತು ಉದ್ಯೋಗ ಸೃಷ್ಟಿಗೂ ಕಾರಣವಾಗಿದ್ದಿದೆ. ಈ ನಿಟ್ಟಿನಲ್ಲಿ ಸಿಲೋನ್ ಪುನರ್ ಸಂಜಾತ ತೋಟ ಕಾರ್ಮಿಕರ ದಕ್ಷಿಣಕನ್ನಡ ಜಿಲ್ಲೆಯ ಕಡೆಗಿನ ಆಗಮನದ ನಂತರದಲ್ಲಿ ಉಂಟಾದ, ಆರ್ಥಿಕ ಚಟುವಟಿಕೆಯಲ್ಲಿನ ಬದಲಾವಣೆಯನ್ನು ತಿಳಿದುಕೊಳ್ಳುವಲ್ಲಿ ಮಹತ್ವದ್ದಾಗಿದೆ. ವಲಸೆ ಕಾರ್ಮಿಕರ ಆಗಮನವು ಸ್ಥಳೀಯವಾಗಿ ಕೆಲವು ಅಸಮದಾನಗಳನ್ನು, ವೈಷಮ್ಯ, ಬಿಕ್ಕಟ್ಟು, ಗೊಂದಲಗಳು ಮತ್ತು ಸಮಸ್ಯೆಗಳನ್ನು ಸೃಷ್ಟಿ

ಮಾಡುತ್ತವೆ. ಈ ಸ್ಥಿತಿಯ ನಿರ್ಮಾಣಕ್ಕೆ ಕಾರಣಗಳು ಮತ್ತು ಅದರ ಪರಿಣಾಮಗಳ ಕುರಿತು ಅರಿತುಕೊಳ್ಳುವಲ್ಲಿ ಪ್ರಸ್ತುತ ಅಧ್ಯಯನವು ಮಹತ್ವದ್ದಾಗಿದೆ.

ಆದ್ದರಿಂದ ಪ್ರಸ್ತುತ ದಕ್ಷಿಣಕನ್ನಡ ಜಿಲ್ಲೆಯ, ರಬ್ಬರ್ ತೋಟಕಾರ್ಮಿಕರ ಕುರಿತ ಸಮಾಜಶಾಸ್ತ್ರೀಯ ಅಧ್ಯಯನವು ತೋಟಕೃಷಿ ಕ್ಷೇತ್ರದಲ್ಲಿನ, ಮಗದೊಂದು ಕ್ಷೇತ್ರವಾದ ಕಾರ್ಮಿಕರ ಕುರಿತಂತೆ, ಸಮಾಜಶಾಸ್ತ್ರೀಯ ನೆಲೆಯಲ್ಲಿ ಮಹತ್ವದ ಮಾಹಿತಿಯನ್ನು ನೀಡುತ್ತದೆ. ಪ್ರಸ್ತುತ ಅಧ್ಯಯನದ ಮಾಹಿತಿದಾರರಲ್ಲಿ ಮಹಿಳಾ ಕಾರ್ಮಿಕರೇ ಹೆಚ್ಚಿರುವುದರಿಂದ ಆರ್ಥಿಕತೆ ಮತ್ತು ಲಿಂಗತ್ವ ಸಂಬಂಧದ ಕುರಿತು ಯೋಜನೆ ರೂಪಿಸುವವರಿಗೆ ಮಹತ್ವದ್ದಾಗಿದೆ. ಕಾರ್ಮಿಕ ಸಂಘಟನೆಗಳ ನೆಲೆಯಲ್ಲಿ, ಅವರ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಮತ್ತು ನಿರ್ಧರಿತ ಫಲಿತಾಂಶಗಳನ್ನು ಪಡೆಯುವ ನಿಟ್ಟಿನಲ್ಲಿ ಪ್ರಸ್ತುತ ಅಧ್ಯಯನವು ಮಹತ್ವವನ್ನು ಪಡೆದುಕೊಂಡಿದೆ.

## ಅಧ್ಯಯನದ ಉದ್ದೇಶಗಳು:

ಸಿಲೋನ್ ಪುನರ್‌ಸಂಜಾತ ಪುನರ್ವಸತಿದಾರ ತೋಟಕಾರ್ಮಿಕರ ಕುರಿತ ಸಾಹಿತ್ಯ ಪರಾಮರ್ಶೆಯಲ್ಲಿ ಕಂಡುಕೊಂಡ ಅಂತರ ಮತ್ತು ಪ್ರಮುಖ ವಿಚಾರಗಳನ್ನು ಹಿನ್ನೆಲೆಯಾಗಿಟ್ಟು, ಪ್ರಸ್ತುತ ಅಧ್ಯಯನವು ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ಮತ್ತು ಪುತ್ತೂರು ತಾಲ್ಲೂಕಿನಲ್ಲಿ, ನೆಲೆಸಿರುವ ಸಿಲೋನ್ ತೋಟ ಕಾರ್ಮಿಕರ ಕುರಿತು ಈ ಕೆಳಗಿನ ಉದ್ದೇಶಗಳೊಂದಿಗೆ ಅಧ್ಯಯನವನ್ನು ಕೈಗೊಳ್ಳಲಾಗಿದೆ.

1. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ಮತ್ತು ಪುತ್ತೂರು ತಾಲ್ಲೂಕಿನಲ್ಲಿ ನೆಲೆಸಿರುವ ಸಿಲೋನ್ ತೋಟಕಾರ್ಮಿಕರ ಐತಿಹಾಸಿಕ ಹಿನ್ನೆಲೆಯನ್ನು ಮತ್ತು ಜನಸಂಖ್ಯಾ ಚಿತ್ರಣವನ್ನು ವಿಶ್ಲೇಷಿಸುವುದು.
2. ಸಿಲೋನ್ ತೋಟಕಾರ್ಮಿಕರ ಪುನರ್‌ಸಂಜಾತೀಕರಣ ಮತ್ತು ಪುನರ್ವಸತೀಕರಣ ಪ್ರಕ್ರಿಯೆಯಲ್ಲಿ ಸರಕಾರ ಅನುಷ್ಠಾನಗೊಳಿಸಿದ ಯೋಜನೆಗಳ ಬಗ್ಗೆ ತಿಳಿದುಕೊಳ್ಳುವುದು.
3. ಸಿಲೋನ್ ತೋಟಕಾರ್ಮಿಕರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಯನ್ನು ವಿಶ್ಲೇಷಣೆ ಮಾಡುವುದು.
4. ಸಿಲೋನ್ ತೋಟಕಾರ್ಮಿಕರ ಆರೋಗ್ಯ ಸ್ಥಿತಿಗತಿಯನ್ನು ತಿಳಿದುಕೊಳ್ಳುವುದು ಮತ್ತು,
5. ಸಿಲೋನ್ ತೋಟಕಾರ್ಮಿಕರು ಪ್ರಸ್ತುತ ಎದುರಿಸುತ್ತಿರುವ ಸಮಸ್ಯೆಗಳನ್ನು ತಿಳಿದುಕೊಳ್ಳುವುದು

## ಸಂಶೋಧನಾ ವಿಧಾನ

ಪ್ರಸ್ತುತ ಅಧ್ಯಯನವು ವಿಭಜಿತ ಯಾದೃಚ್ಚಿಕ ನಮೂನಾ ವಿನ್ಯಾಸವನ್ನು ಅಳವಡಿಸಿಕೊಂಡಿದ್ದು, ನಮೂನೆಗಳನ್ನು ಆಯ್ಕೆ ಮಾಡಿಕೊಳ್ಳಲು ಸರಳ ಯಾದೃಚ್ಛಿಕ ನಮೂನಾ ವಿಧಾನವನ್ನು ಅಳವಡಿಸಿಕೊಳ್ಳಲಾಗಿದೆ. ಅಲ್ಲದೆ ನಮೂನೆಯ ಗಾತ್ರವನ್ನು ನಿರ್ಧರಿಸುವಲ್ಲಿ ಕ್ರೇಜಿ ಮತ್ತು ಮೋರ್ಗನ್

ಮಾಪಕವನ್ನು ಅನುಸರಿಸಲಾಗಿದೆ. ಪ್ರಸ್ತುತ ಅಧ್ಯಯನದ ನಮೂನೆಯ ಒಟ್ಟು ಗಾತ್ರ 400. ಅಧ್ಯಯನದ ಪೂರ್ವದಲ್ಲಿ ನಿಗಮದ ಮೂರು ವಲಯಗಳು ಮತ್ತು ಫ್ಯಾಕ್ಟರಿ ಕಾಲನಿಗಳನ್ನು ಗುರುತಿಸಲಾಗಿದ್ದು, ನಮೂನೆಗಳನ್ನು ಆಯ್ಕೆ ಮಾಡುವ ನಿಟ್ಟಿನಲ್ಲಿ ಅವುಗಳನ್ನು ಈ ಕೆಳಕಂಡಂತೆ ವಿಂಗಡಿಸಲಾಗಿದೆ.

**ಅಧ್ಯಯನದ ನಮೂನೆಯ ವಿನ್ಯಾಸ**

| ಕ್ರ.ಸಂ | ಕೆ.ಎಫ್.ಡಿ.ಸಿ ರಬ್ಬರ್ ವಲಯ | ಸಿ.ಆರ್.ಸಿ ಮನೆಗಳ ಸಂಖ್ಯೆ | ನಮೂನೆಗಳ ಸಂಖ್ಯೆ |
|---|---|---|---|
| 1 | ಪುತ್ತೂರು | 312 | 91 |
| 2 | ಸುಳ್ಯ | 508 | 149 |
| 3 | ಐವರನಾಡು | 514 | 151 |
| 4 | ಪ್ಯಾಕ್ಟರಿ ಕಾಲನಿ | 32 | 9 |
| ಒಟ್ಟು ಮನೆಗಳ ಸಂಖ್ಯೆ–1366 | | | ಒಟ್ಟು ನಮೂನೆಗಳ ಸಂಖ್ಯೆ –400 |

**ಮೂಲ: ಪ್ರಾಥಮಿಕ ಮಾಹಿತಿ**

ಪುತ್ತೂರು ಮತ್ತು ಸುಳ್ಯ ತಾಲೂಕುಗಳಲ್ಲಿ ಸರಿಸುಮಾರು 44 ಪ್ರದೇಶಗಳಲ್ಲಿ ಪುನರ್ವಸತೀಕರಣಗೊಳಿಸಿ ಅವರಿಗಾಗಿ ಕಾಲನಿಗಳನ್ನು ನಿರ್ಮಿಸಲಾಗಿದೆ. ಈ ಕಾಲನಿಗಳಲ್ಲಿ, ವಾಸಿಸಲು ಅಗತ್ಯವಿರುವ ಮೂಲಭೂತ ಸವಲತ್ತುಗಳನ್ನು ಒದಗಿಸಿಕೊಡಲಾಗಿದೆ. ಪ್ರಸ್ತುತ 44 ಕಾಲೋನಿಗಳಲ್ಲಿ ಪುನರ್ವಸಿತರ ಒಟ್ಟು 1366 ಕುಟುಂಬಗಳಿಗೆ ಸೇರಿದ 6343 ಪುನರ್ವಸಿತರು ವಾಸಿಸುತ್ತಿದ್ದಾರೆ. ಅಧ್ಯಯನದ ನಮೂನೆಯ ಗಾತ್ರವನ್ನು ಪುನರ್ವಸಿತರ ಜನಸಂಖ್ಯೆಗೆ ಅನುಗುಣವಾಗಿ ಮತ್ತು ಕ್ರೆಝಿ ಮತ್ತು ಮೋರ್ಗನ್ ಮಾಪನದ ಪ್ರಕಾರ ಸಮೂನೆಗಳನ್ನು ಆಯ್ಕೆ ಮಾಡಲಾಗಿದೆ. ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಒಟ್ಟು 400 ನಮೂನೆಗಳನ್ನು ಮಾಹಿತಿದಾರರನ್ನಾಗಿ ಆಯ್ಕೆ ಮಾಡಿಕೊಂಡು ರಚನಾತ್ಮಕ ಸಂದರ್ಶನಸೂಚಿ ಮತ್ತು ಅವಲೋಕನದ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

## ಮಾಹಿತಿ ಸಂಗ್ರಹಣೆಯ ಸಾಧನಗಳು

ಪ್ರಸ್ತುತ ಅಧ್ಯಯನದ ಪ್ರಾಥಮಿಕ ಮಾಹಿತಿಯನ್ನು ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ಮತ್ತು ಪುತ್ತೂರು ತಾಲೂಕಿನ ಕೆ.ಎಫ್.ಡಿ.ಸಿ ನಿಗಮದ ಪುತ್ತೂರು, ಐವರನಾಡು ಮತ್ತು ಸುಳ್ಯ ವಲಯದ ರಬ್ಬರ್ ತೋಟ ಕಾರ್ಮಿಕರಿಂದ ಸಂದರ್ಶನ ಸೂಚಿಯ ಮೂಲಕ ಪಡೆಯಲಾಗಿದೆ. ಸದರಿ ಅಧ್ಯಯನಕ್ಕೆ ನಿಗಮದ ಕಾಯಂ ನೌಕರರನ್ನು ಮಾತ್ರ ಮಾಹಿತಿದಾರರನ್ನಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ವಿಭಜಿತ ಯಾದೃಚ್ಛಿಕ

ನಮೂನೆಯೊಂದಿಗೆ, ಸರಳ ಯಾದೃಚ್ಛಿಕ ವಿಧಾನದ ಮೂಲಕ ಅಧ್ಯಯನದ ನಮೂನೆಯನ್ನು ಪಾರದರ್ಶಕವಾಗಿ ಆಯ್ಕೆ ಮಾಡಲಾಗಿದೆ. ನಿಗಮದ ಕಾಯಂ ನೌಕರರ ಯಾದಿಯನ್ನು ನಿಗಮದ ವಲಯ ಕಚೇರಿಯಿಂದ ಪಡೆದು ಮಾಹಿತಿದಾರರನ್ನು ಗುರುತಿಸಲಾಗಿದೆ.

ಅಧ್ಯಯನದ ಪ್ರಾಥಮಿಕ ಮಾಹಿತಿಯನ್ನು ವಿವರವಾದ ಸಂದರ್ಶನ ಸೂಚಿ ಸಾಧನದ ಮೂಲಕ ಪಡೆಯಲಾಗಿದೆ. ಸಂದರ್ಶನ ಸೂಚಿಯು ಮಾಹಿತಿದಾರರ ವೈಯುಕ್ತಿಕ ಮಾಹಿತಿ, ಕೌಟುಂಬಿಕ ವಿವರ, ಮಾಹಿತಿದಾರರ ಕುಟುಂಬದ ಸಾಮಾಜಿಕ– ಆರ್ಥಿಕ ಸ್ಥಿತಿಗತಿ, ಔದ್ಯೋಗಿಕ ವಿವರ, ರಬ್ಬರ್ ತೋಟದಲ್ಲಿನ ಕೆಲಸದ ಸ್ಥಿತಿಗತಿ, ಆರೋಗ್ಯ ಸಮಸ್ಯೆಗಳು ಮತ್ತು ವೃತ್ತಿ ಅಪಾಯಗಳನ್ನು ಒಳಗೊಂಡಿವೆ.. ಮುಖ್ಯವಾಗಿ ತೋಟಕಾರ್ಮಿಕರಲ್ಲಿ ಬಹುಮಂದಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಪೂರೈಸಿದವರು ಅಥವಾ ಸ್ಥಳೀಯ ಭಾಷೆಯಲ್ಲಿ ಪರಿಣತಿ ಇಲ್ಲದೇ ಇರುವ ಸಾಧ್ಯತೆಗಳಿಗಾಗಿ ಅಥವಾ ಅಕ್ಷರಜ್ಞಾನ ಇಲ್ಲದೇ ಇರುವ ಸಾಧ್ಯತೆ ಪ್ರಾಯೋಗಿಕ ಅಧ್ಯಯನದಲ್ಲಿ ಕಂಡುಬಂದುದರಿಂದ ಸಂದರ್ಶನ ಸೂಚಿಯನ್ನು ಪ್ರಾಥಮಿಕ ಮಾಹಿತಿಯನ್ನು ಸಂಗ್ರಹಿಸುವ ಮೂಲ ಸಾಧನವಾಗಿ ಅಳವಡಿಸಿಕೊಳ್ಳಲಾಯಿತು. ಅಲ್ಲದೇ ಕಾರ್ಮಿಕರನ್ನು ನೇರವಾಗಿ ಬೇಟಿಯಾಗುವ ಮತ್ತು ಅವರಜೊತೆ ಸಮಸ್ಯೆಗಳ ಕುರಿತು ಚರ್ಚಿಸುವ ಅವಕಾಶವನ್ನು, ಅನುಮಾನಗಳನ್ನು, ಹೆಚ್ಚಿನ ಮಾಹಿತಿಯನ್ನು, ವಿವರಣೆಯನ್ನು ಪಡೆದುಕೊಳ್ಳುವ ಭಾಗವಾಗಿ ಸಂದರ್ಶನಸೂಚಿಯನ್ನು ಪ್ರಾಥಮಿಕ ಮಾಹಿತಿಯ ಸಂಗ್ರಹಣೆಯ ಮೂಲ ಸಾಧನವನ್ನಾಗಿ ಅಂತಿಮಗೊಳಿಸಲಾಯಿತು. ಇನ್ನುಳಿದಂತೆ ಇತರ ಮಾಹಿತಿಗಳನ್ನು ಆಡಳಿತ ವರ್ಗದ ಪ್ರಾದೇಶಿಕ ಕಚೇರಿಯಿಂದ, ವಲಯ ವ್ಯವಸ್ಥಾಪಕರಿಂದ, ತೋಟ ಕಾರ್ಮಿಕರ ಕಲ್ಯಾಣಾಧಿಕಾರಿಗಳಿಂದ, ಆಡಳಿತ ಮಂಡಳಿಯ ಪ್ರತಿನಿಧಿಗಳಿಂದ, ಕಾರ್ಮಿಕ ಸಂಘದ ಪ್ರತಿನಿಧಿಗಳಿಂದ ಪಡೆಯಲಾಗಿದೆ.

ಅಧ್ಯಯನಕ್ಕೆ ಸಂಬಂಧಿಸಿದ ಮಾಧ್ಯಮಿಕ ಮಾಹಿತಿಗಳನ್ನು ಪ್ರಕಟಿತ ಲೇಖನಗಳಿಂದ, ಪುಸ್ತಕಗಳಿಂದ, ನಿಗಮವು ಕಾಲಕಾಲಕ್ಕೆ ಹೊರತಂದಿರುವ ವರದಿಗಳಿಂದ ಪಡೆಯಲಾಗಿದೆ. ಮುಖ್ಯವಾಗಿ ಪ್ರಸ್ತುತ ಅಧ್ಯಯನದ ಚರಾಂಶಗಳನ್ನು ಗುರುತಿಸುವಲ್ಲಿ, ಪ್ರಶ್ನಾವಳಿಯನ್ನು ಅಂತಿಮಗೊಳಿಸುವಲ್ಲಿ ಮತ್ತು ಅಧ್ಯಯನಕ್ಕೆ ಸಂಬಂಧಿಸಿದ ಸಾಹಿತ್ಯಿಕ ಪರಾಮರ್ಶೆ ನಡೆಸುವಲ್ಲಿ ಮಾಧ್ಯಮಿಕ ಮಾಹಿತಿಯ ಮೂಲಗಳು ಹೆಚ್ಚು ಸಹಾಯಕವಾಗಿವೆ.

## ಅಧ್ಯಯನದ ವ್ಯಾಪ್ತಿ ಮತ್ತು ಮಿತಿ

- ಪ್ರಸ್ತುತ ಅಧ್ಯಯನವನ್ನು ಕರ್ನಾಟಕ ಸರಕಾರದ ಅಧೀನಕ್ಕೊಳಪಟ್ಟ, ಕರ್ನಾಟಕ ರಾಜ್ಯ ಅರಣ್ಯ ಅಭಿವೃದ್ಧಿ ನಿಗಮ (ಕೆ.ಎಫ್.ಡಿ.ಸಿ) ಯಿಂದ ನಡೆಸಲ್ಪಡುವ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು, ಐವರನಾಡು ಮತ್ತು ಸುಳ್ಯ ವಲಯದ ರಬ್ಬರ್ ತೋಟಗಳ ಕಾರ್ಮಿಕರಾಗಿ ದುಡಿಯುತ್ತಿರುವ

ಸಿಲೋನ್ ಪುನರ್ ಸಂಜಾತ , ಪುನರ್ವಸಿತ ಸಮುದಾಯದ ತೋಟಕಾರ್ಮಿಕರಿಗೆ ಮಾತ್ರ ಸೀಮಿತವಾಗಿದೆ.

- ಸದರಿ ಅಧ್ಯಯನಕ್ಕೆ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದ (ಕೆ.ಎಫ್.ಡಿ.ಸಿ) ರಬ್ಬರ್ ವಿಭಾಗದ ಕಾಯಂ ನೌಕರರನ್ನು ಮಾತ್ರ ಅಧ್ಯಯನಕ್ಕೆ ಒಳಪಡಿಸಲಾಗಿದೆ.
- ಪ್ರಸ್ತುತ ಅಧ್ಯಯನವು ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ (ಕೆ.ಎಫ್.ಡಿ.ಸಿ)ದ ರಬ್ಬರ್ ವಿಭಾಗದ ಕಾಯಂ ನೌಕರರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳ ಬಗ್ಗೆ ಅಧ್ಯಯನ ಮಾಡುತ್ತದೆ.

## ಅಧ್ಯಾಯಗಳ ವರ್ಗೀಕರಣ

ಪ್ರಸ್ತುತ ಸಂಶೋಧನಾ ಮಹಾಪ್ರಬಂಧವು ಏಳು ಅಧ್ಯಾಯಗಳನ್ನು ಒಳಗೊಂಡಿದೆ.

**ಅಧ್ಯಾಯ-1**. ಮೊದಲ ಅಧ್ಯಾಯವು ಸಂಶೋಧನೆಯ ಪ್ರಸ್ತಾವನೆ ಮತ್ತು ಹಿನ್ನೋಟ, ಸಮಸ್ಯೆಯ ಹೇಳಿಕೆ, ಅಧ್ಯಯನದ ಅಗತ್ಯತೆ ಮತ್ತು ಉದ್ದೇಶಗಳನ್ನು ಒಳಗೊಂಡಿದೆ.

**ಅಧ್ಯಾಯ-2**. ಎರಡನೇ ಅಧ್ಯಾಯವು ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದ ಲೇಖನ, ಪುಸ್ತಕಗಳು, ವರದಿಗಳನ್ನೊಳಗೊಂಡ ಸಾಹಿತ್ಯ ಪರಾಮರ್ಶೆಯನ್ನು ಹೊಂದಿದೆ.

**ಅಧ್ಯಾಯ-3**. ಮೂರನೇ ಅಧ್ಯಾಯವು ಪ್ರಸ್ತುತ ಅಧ್ಯಯನದ ಸಂಶೋಧನಾ ವಿಧಾನವನ್ನು ಒಳಗೊಂಡಿದೆ.

**ಅಧ್ಯಾಯ-4** ನಾಲ್ಕನೇ ಅಧ್ಯಾಯವು ಸಿಲೋನ್ ತೋಟ ಕಾರ್ಮಿಕರ 'ಐತಿಹಾಸಿಕ ಹಿನ್ನೆಲೆ' ಮತ್ತು ಪುನರ್ಸಂಜಾತ ಸಿಲೋನ್ ತೋಟ ಕಾರ್ಮಿಕರಿಗೆ ಭಾರತದಲ್ಲಿ ಅನುಷ್ಠಾನಗೊಳಿಸಿದ 'ಪುನರ್ವಸತೀಕರಣ ಯೋಜನೆ'ಗಳ ಕುರಿತ ವಿವರಣೆಯನ್ನು ಒಳಗೊಂಡಿದೆ.

**ಅಧ್ಯಾಯ-5**. ಐದನೇ ಅಧ್ಯಾಯವು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪುನರ್ವಸತೀಕರಣಗೊಂಡ ಸಿಲೋನ್ ತೋಟಕಾರ್ಮಿಕರ ಸಾಮಾಜಿಕ-ಆರ್ಥಿಕ ಸ್ಥಿತಿಗತಿಯ ವಿಶ್ಲೇಷಣೆಯನ್ನು ಒಳಗೊಂಡಿದೆ.

**ಅಧ್ಯಾಯ-6** ಆರನೇ ಅಧ್ಯಾಯವು ಸಿಲೋನ್ ತೋಟ ಕಾರ್ಮಿಕರು ಪ್ರಸ್ತುತ ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಬೆಳಕು ಚೆಲ್ಲುತ್ತದೆ.

**ಅಧ್ಯಾಯ-7** ಏಳನೇ ಅಧ್ಯಾಯವು ಪ್ರಸ್ತುತ ಅಧ್ಯಯನದ ಫಲಿತಾಂಶ, ಉಪಸಂಹಾರ ಮತ್ತು ಅಧ್ಯಯನ ವ್ಯಕ್ತಪಡಿಸುವ ಸಲಹೆಗಳನ್ನು ಒಳಗೊಂಡಿದೆ.

# ಸಂಶೋಧನಾ ಫಲಿತಾಂಶ

## ಸಿಲೋನ್ ತೋಟ ಕಾರ್ಮಿಕರ ಐತಿಹಾಸಿಕ ಹಿನ್ನೆಲೆ:

- ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ಮತ್ತು ಪುತ್ತೂರು ತಾಲ್ಲೂಕಿನಲ್ಲಿರುವ ಸಿಲೋನ್ ತೋಟಕಾರ್ಮಿಕರು ಮೂಲತಃ ಭಾರತೀಯರಾಗಿದ್ದಾರೆ. ಇವರು 19ನೇ ಶತಮಾನದಲ್ಲಿ ಭಾರತದಲ್ಲಿ ಉಂಟಾದ ಸಾಮಾಜಿಕ ಮತ್ತು ಆರ್ಥಿಕ ತಲ್ಲಣಗಳಿಂದಾಗಿ ಭಾರತದಿಂದ ಸಿಲೋನಿಗೆ ವಲಸೆ ಹೋದ ಭಾರತೀಯ ವಲಸೆ ಕಾರ್ಮಿಕರಾಗಿದ್ದಾರೆ. ದೀರ್ಘಕಾಲದ ಸಿಲೋನಿನ ಕಾರ್ಮಿಕ ಜೀವನದ ನಂತರ ಉಂಟಾದ ಪೌರತ್ವ ಸಮಸ್ಯೆಯ ಸುಧೀರ್ಘ ಚರ್ಚೆಯ ನಂತರ 1964 ಸಿರಿಮಾವೋ–ಶಾಸ್ತ್ರಿ ಒಪ್ಪಂದದ ಮೂಲಕ ಭಾರತಕ್ಕೆ ಪುನರ್ಸಂಜಾತೀಕರಣಗೊಂಡ ಕಾರ್ಮಿಕ ಸಮುದಾಯ ಎಂಬುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.
- 1964 ರಲ್ಲಿ ಭಾರತಕ್ಕೆ ಪುನರ್ ಸಂಜಾತರಾದ ಇವರನ್ನು, ಭಾರತ ಸರಕಾರ ಮತ್ತು ಕರ್ನಾಟಕ ಸರಕಾರದ ಜಂಟಿ ಪುನರ್ವಸತಿ ಯೋಜನೆಯಂತೆ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದ (ಕೆ.ಎಫ್.ಡಿ.ಸಿ) ಕಾಲನಿಗಳಲ್ಲಿ ಪುನರ್ವಸಿತರಾಗಿ, ಕೆ.ಎಫ್.ಡಿ.ಸಿ ನಿಗಮ ರಬ್ಬರ್ ತೋಟಗಳಲ್ಲಿ ಮೂರ್ತೆದಾರರಾಗಿ ಕಾರ್ಯನಿರ್ವಹಿಸುವ ಸಿಲೋನ್ ತೋಟ ಕಾರ್ಮಿಕರು ಎಂಬುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

## ಸಿಲೋನ್ ತೋಟ ಕಾರ್ಮಿಕರ ಜನಸಂಖ್ಯಾ ಚಿತ್ರಣ

- 1964ರ ಪುನರ್ವಸತಿಯೋಜನೆಯಂತೆ ಸುಮಾರು 988 ಸಿಲೋನ್ ತೋಟ ಕಾರ್ಮಿಕ ಕುಟುಂಬಗಳಿಗೆ ಸೇರಿದ, 1852 ಸಿಲೋನ್ ತೋಟ ಕಾರ್ಮಿಕರನ್ನು ಕೆ.ಎಫ್.ಡಿ.ಸಿ ನಿಗಮದ ನೆಡುತೋಪುಗಳ ಇಕ್ಕೆಲಗಳಲ್ಲಿ ಕಾಲನಿಯನ್ನು ನಿರ್ಮಿಸಿ, ಇತರ ಮೂಲಭೂತ ಸವಲತ್ತುಗಳೊಂದಿಗೆ ಪುನರ್ ವಸತೀಕರಣಗೊಳಿಸಲಾಗಿರುವುದನ್ನು ಅಧ್ಯಯನದಿಂದ ತಿಳಿದುಬಂದಿದೆ.
- ಪ್ರಸ್ತುತ ಒಟ್ಟು 1453 ಕುಟುಂಬಗಳ 6343 ಸಿಲೋನ್ ಪುನರ್ಸಂಜಾತರು (2015 ರ ಕಂದಾಯ ಇಲಾಖೆಯ ದಾಖಲೆಯಂತೆ) ಕೆ.ಎಫ್.ಡಿ.ಸಿ ಕಾಲನಿಗಳಲ್ಲಿ ವಾಸಿಸುತ್ತಿದ್ದಾರೆ ಎಂಬುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

**ಸಾಮಾಜಿಕ–ಆರ್ಥಿಕ ಸ್ಥಿತಿಗತಿ:**

- ಪ್ರಸ್ತುತ ಅಧ್ಯಯನಕ್ಕೆ ಸುಮಾರು 400 ತೋಟಕಾರ್ಮಿಕರನ್ನು ಒಳಪಡಿಸಲಾಗಿತ್ತು. ಒಟ್ಟು ಮಾಹಿತಿದಾರರಲ್ಲಿ 244 ಕಾರ್ಮಿಕರು ಮಹಿಳಾ ಕಾರ್ಮಿಕರಾಗಿದ್ದರೆ, 156 ಕಾರ್ಮಿಕರು ಪುರುಷ ಕಾರ್ಮಿಕರಾಗಿದ್ದಾರೆ. ಕೆ.ಎಫ್.ಡಿ.ಸಿ ರಬ್ಬರ್ ನಿಗಮದಲ್ಲಿ 1077 ಸಿಲೋನ್ ಪುನರ್ ಸಂಜಾತ ಕಾರ್ಮಿಕರಿದ್ದು ಇವರಲ್ಲಿ 665 ಮಹಿಳಾ ಕಾರ್ಮಿಕರಾದರೆ, 412 ಪುರುಷ ಕಾರ್ಮಿಕರಾಗಿದ್ದಾರೆ. ಆದ್ದರಿಂದ ನಿಗಮದ ಒಟ್ಟು ಕಾರ್ಮಿಕರಲ್ಲಿ ಮಹಿಳೆಯರ ಪ್ರಾಬಲ್ಯ ಹೆಚ್ಚಿದೆ.
- ಕೆ.ಎಫ್.ಡಿ.ಸಿ ನಿಗಮದ ಒಟ್ಟು ಕಾರ್ಮಿಕರಲ್ಲಿ ಶೇಕಡಾ 43 ರಷ್ಟು ಕಾರ್ಮಿಕರು 18–45 ವಯಸ್ಸಿನ ಉತ್ಪಾದಕ ವರ್ಗಕ್ಕೆ ಸೇರಿದವರಾಗಿದ್ದಾರೆ. ಇವರಲ್ಲಿ ಶೇಕಡಾ 28.9 ರಷ್ಟು ಮಹಿಳಾ ಕಾರ್ಮಿಕರಾಗಿದ್ದರೆ, ಪುರುಷ ಕಾರ್ಮಿಕರು ಶೇಕಡಾ 14 ರಷ್ಟು ಇದ್ದಾರೆ. ನಿಗಮದ ರಬ್ಬರ್ ಉತ್ಪಾದನೆಯಲ್ಲಿ ಈ ಕಾರ್ಮಿಕರ ಪಾತ್ರ ನಿರ್ಣಾಯಕವಾಗಿರುವುದನ್ನು ಗುರುತಿಸಲಾಗಿದೆ.
- ಅಧ್ಯಯನಕ್ಕೊಳಪಡಿಸಿದ ಒಟ್ಟು ಕಾರ್ಮಿಕರಲ್ಲಿ ಶೇಕಡಾ 94.8 ಕಾರ್ಮಿಕರು ಹಿಂದು ಧರ್ಮವನ್ನು ಅನುಸರಿಸುವವರಾದರೆ, ಶೇಕಡಾ 5.2 ರಷ್ಟು ಕಾರ್ಮಿಕರು ಕ್ರೈಸ್ತ ಮತವನ್ನು ಅನುಸರಿಸುತ್ತಿರುವುದನ್ನು ಅಧ್ಯಯನದಿಂದ ಗುರುತಿಸಲಾಗಿದೆ.
- ಅಧ್ಯಯನಕ್ಕೊಳಪಡಿಸಿದ ಸಿಲೋನ್ ತೋಟ ಕಾರ್ಮಿಕ ಮಾಹಿತಿದಾರರು, 19 ವಿವಿಧ ಜಾತಿ ವರ್ಗಗಳಿಗೆ ಸೇರಿರುವುದನ್ನು ಅಧ್ಯಯನದಿಂದ ಗುರುತಿಸಲಾಗಿದೆ. ಇವರಲ್ಲಿ ಶೇಕಡಾ 50.1 ರಷ್ಟು ಕಾರ್ಮಿಕರು ಪರಿಶಿಷ್ಟ ಜಾತಿಗೆ ಸೇರಿದವರಾದರೆ, ಶೇಕಡಾ 49.9 ರಷ್ಟು ಮಾಹಿತಿದಾರರು ಹಿಂದುಳಿದ ವರ್ಗಕ್ಕೆ ಸೇರಿದವರಾಗಿದ್ದಾರೆ.
- ಸಿಲೋನ್ ತೋಟ ಕಾರ್ಮಿಕರ ಮೂರನೇ ತಲೆಮಾರಿನ ವರ್ಗದಲ್ಲಿ ಶೇಕಡಾ 88.3 ರಷ್ಟು ಮಕ್ಕಳಿಗೆ ತಮ್ಮ ಮಾತೃ ಭಾಷೆಯಲ್ಲಿ ಓದಲು ಮತ್ತು ಬರೆಯಲು ತಿಳಿಯದೇ ಇರುವುದನ್ನು ಅಧ್ಯಯನದಿಂದ ಗುರುತಿಸಲಾಗಿದೆ. ಕೇವಲ ಶೇಕಡಾ 11.7 ಕಾರ್ಮಿಕರ ಮಕ್ಕಳಿಗೆ ಮಾತ್ರ ತಮಿಳಿನಲ್ಲಿ ಓದಲು, ಬರೆಯಲು ಮತ್ತು ಮಾತನಾಡಲು ಸಾಧ್ಯವಾಗುತ್ತಿದೆ.
- ಒಟ್ಟು ಮಾಹಿತಿದಾರರಲ್ಲಿ ಶೇಕಡಾ 64.75 ಕಾರ್ಮಿಕರ ಕುಟುಂಬದ ಗಾತ್ರವು 4 ರಿಂದ 5 ಸದಸ್ಯರಿಂದ ಕೂಡಿದ್ದಾಗಿದ್ದರೆ, ಶೇ. 17 ಕಾರ್ಮಿಕರ ಕುಟುಂಬವು 6–7 ಸದಸ್ಯರಿಂದ ಕೂಡಿದ ಕುಟುಂಬಗಳಾಗಿವೆ. ಉಳಿದಂತೆ ಶೇಕಡಾ 9.25 ಕುಟುಂಬಗಳು ಎರಡರಿಂದ ಮೂರು ಸದಸ್ಯರಿಂದ ಕೂಡಿದ ಕುಟುಂಬಗಳಾಗಿವೆ. ಪ್ರಮುಖವಾಗಿ ಶೇಕಡಾ 7.75 ರಷ್ಟು ಕಾರ್ಮಿಕರ ಕುಟುಂಬಗಳು 8

ಕ್ಕಿಂತಲೂ ಹೆಚ್ಚು ಸದಸ್ಯರಿಂದ ಕೂಡಿದ ಕುಟುಂಬಗಳಾದರೆ, ಶೇಕಡಾ 1.25 ರಷ್ಟು ಕಾರ್ಮಿಕರ ಕುಟುಂಬಗಳು ಏಕ ಸದಸ್ಯ ಕುಟುಂಬಗಳಾಗಿವೆ.

- ಅಧ್ಯಯನಕ್ಕೊಳಪಡಿಸಿದ ಒಟ್ಟು ಮಾಹಿತಿದಾರರಲ್ಲಿ ಶೇಕಡಾ 100 ಕಾರ್ಮಿಕರು ತಮಿಳುನಾಡಿನ ಮೂಲದವರಾದರೂ ಶೇಕಡಾ 14.5 (58) ಕಾರ್ಮಿಕರು ತಮ್ಮ ಮೂಲದ ಕುರಿತು ಯಾವುದೇ ಮಾಹಿತಿ ಇಲ್ಲದಿರುವುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.
- ಒಟ್ಟು ಮಾಹಿತಿದಾರರಲ್ಲಿ ಶೇಕಡಾ 53 ರಷ್ಟು ಕಾರ್ಮಿಕರು ತಮ್ಮ ರಕ್ತ ಸಂಬಂಧಿಗಳು ಇನ್ನೂ ಶ್ರೀಲಂಕಾದಲ್ಲಿ ಇದ್ದಾರೆ ಎಂಬುದನ್ನು ಅಧ್ಯಯನದಿಂದ ಗುರುತಿಸಲಾಗಿದೆ. ಆದರೆ ಅಂಶವೆಂದರೆ ಶೇಕಡಾ 28.7 ರಷ್ಟು ಕಾರ್ಮಿಕರು ಸಿಲೋನಿನಲ್ಲಿ ರಕ್ತಸಂಬಂಧಿಗಳ ಇರುವಿಕೆಯ ಕುರಿತು ಅನುಮಾನ ವ್ಯಕ್ತಪಡಿಸಿ ಗೊತ್ತಿಲ್ಲ ಎಂಬ ಉತ್ತರವನ್ನು ನೀಡಿರುತ್ತಾರೆ.
- ಸಿಲೋನ್ ತೋಟ ಕಾರ್ಮಿಕರ ತಮಿಳುನಾಡಿನ ಮೂಲದ ಕುರಿತು ಕೇಳಲಾದ ಪ್ರಶ್ನೆಗೆ ಶೇಕಡಾ 79.75 ರಷ್ಟು ಕಾರ್ಮಿಕರು ತಮ್ಮ ಸಂಬಂಧಿಗಳು ತಮಿಳುನಾಡಿನಲ್ಲಿ ಇದ್ದಾರೆ ಎಂಬ ಮಾಹಿತಿಯನ್ನು ನೀಡಿದರೆ, ಶೇಕಡಾ 11 ರಷ್ಟು ಕಾರ್ಮಿಕರು ಇಲ್ಲವೆಂದು ಅಭಿಪ್ರಾಯಿಸಿದ್ದಾರೆ. ಪ್ರಮುಖವಾಗಿ ಶೇಕಡಾ 9.25 ಕಾರ್ಮಿಕರು ತಮ್ಮ ಮೂಲದ ಕುರಿತು ಗೊತ್ತಿಲ್ಲವೆಂಬ ಮಾಹಿತಿಯನ್ನು ನೀಡಿದ್ದಾರೆ. ಕಾರಣ ಇವರ ಪೋಷಕರು ತಮ್ಮ ಮೂಲದ ಕುರಿತು ಯಾವುದೇ ಮಾಹಿತಿಯನ್ನು ನೀಡದೇ ಅಕಾಲಿಕ ಮರಣಹೊಂದಿರುವುದರಿಂದ ತಮ್ಮ ಮೂಲದ ಕುರಿತು ಇಂದಿಗೂ ತಿಳಿದಿಲ್ಲ ಎಂಬುದನ್ನು ಅಧ್ಯಯನದಿಂದ ಗುರುತಿಸಲಾಗಿದೆ.

### ಸಿಲೋನ್ ತೋಟ ಕಾರ್ಮಿಕರ ಶೈಕ್ಷಣಿಕ ಸ್ಥಿತಿಗತಿ

- ಒಟ್ಟು ಮಾಹಿತಿದಾರರಲ್ಲಿ ಶೇಕಡಾ 54.5 ಕಾರ್ಮಿಕರು ಪ್ರಾಥಮಿಕ ವಿದ್ಯಾಭ್ಯಾಸವನ್ನು ಮಾತ್ರ ಪಡೆದಿದ್ದಾರೆ. ಇವರಲ್ಲಿ ಶೇಕಡಾ 37 ರಷ್ಟು ಮಹಿಳೆಯರೇ ಇರುವುದು ಸಿಲೋನ್ ಪುನರ್ ಸಂಜಾತ ಸಮುದಾಯದಲ್ಲಿ ಮಹಿಳೆಯರು ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಮಾತ್ರ ಸೀಮಿತವಾಗಿರುವುದನ್ನು ಗುರುತಿಸಲಾಗಿದೆ. ಉಳಿದಂತೆ ಶೇಕಡಾ 29 ಕಾರ್ಮಿಕರು ಪ್ರೌಢ ಶಿಕ್ಷಣವನ್ನು ಪಡೆದಿದ್ದಾರೆ. ಮಾತ್ರವಲ್ಲ ಶೇಕಡಾ 6.2% ರಷ್ಟು ಕಾರ್ಮಿಕರು ಮಾತ್ರ ಪದವಿ ಪೂರ್ವ ವಿದ್ಯಾಭ್ಯಾಸವನ್ನು ಮಾಡಿರುವುದು ಗಮನಾರ್ಹವಾಗಿದೆ. ಇವರಲ್ಲಿ ಮಹಿಳೆಯರಿಗಿಂತ ಶೇಕಡಾ 2.5 (11), ಪುರುಷರು ಶೇಕಡಾ 3.5 (14) ಹೆಚ್ಚಿದ್ದಾರೆ. ಉನ್ನತ ಶಿಕ್ಷಣದಲ್ಲಿ ರಬ್ಬರ್ ಕಾರ್ಮಿಕರ ಸಂಖ್ಯೆ ನಗಣ್ಯವಾಗಿದೆ.

ಪ್ರಮುಖವಾಗಿ ಒಟ್ಟು ಕಾರ್ಮಿಕರಲ್ಲಿ ಶೇಕಡಾ 0.5 (2) ಕಾರ್ಮಿಕರು ಅದರಲ್ಲೂ ಪುರುಷ ಕಾರ್ಮಿಕರು ಮಾತ್ರ ಗುರುತಿಸಿಕೊಂಡಿರುವುದು ಉಲ್ಲೇಖನೀಯ.

## ಸಿಲೋನ್ ತೋಟಕಾರ್ಮಿಕರ ಔದ್ಯೋಗಿಕ ಸ್ಥಿತಿಗತಿ

- ಕೆ.ಎಫ್.ಡಿ.ಸಿ ರಬ್ಬರ್ ನಿಗಮದಲ್ಲಿ ಒಟ್ಟು 1154 ಕಾರ್ಮಿಕರು ಕೆಲಸವನ್ನು ಮಾಡುತ್ತಿದ್ದಾರೆ. ಇವರಲ್ಲಿ ಶೇಕಡಾ 64.03 (739) ಕಾರ್ಮಿಕರು ರಬ್ಬರ್ ತೋಟ ಮೂರ್ತೆದಾರರಾದರೆ, ಶೇಕಡಾ 3.81 (44) ರಷ್ಟು ಕಾರ್ಮಿಕರು ಹಾಲು ಸಂಗ್ರಹಣಾ ಘಟಕದಲ್ಲಿ ಕ್ಯಾನ್ ಶುಚಿತ್ವ ಕೆಲಸವನ್ನು ಮಾಡುತ್ತಿದ್ದಾರೆ. ಉಳಿದಂತೆ ಶೇಕಡಾ 7.45 (86) ಕಾರ್ಮಿಕರು ಮೇಸ್ತ್ರಿಗಳಾಗಿ, ಶೇಕಡಾ 17.24 (199) ಕಾರ್ಮಿಕರು ರಬ್ಬರ್ ಗಿಡಗಳ ಮರುನಾಟಿ ಕೆಲಸದಲ್ಲಿ ಮತ್ತು ಶೇಕಡಾ 0.17 (2) ಕಾರ್ಮಿಕರು ಆಯಗಳಾಗಿ, ಶೇಕಡಾ 9.01 ರಷ್ಟು ಕಾರ್ಮಿಕರು ಕಾರ್ಖಾನೆ ಕಾರ್ಮಿಕರಾಗಿ ದುಡಿಯುತ್ತಿರುವುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.
- ಅಧ್ಯಯನಕ್ಕೊಳಪಡಿಸಿದ ಒಟ್ಟು ಕಾರ್ಮಿಕರಲ್ಲಿ ಶೇಕಡಾ 81.5% ಕಾರ್ಮಿಕರು ನಿಗಮದ ರಬ್ಬರ್ ತೋಟಗಳಲ್ಲಿ ಮೂರ್ತೆದಾರ ಕಾರ್ಮಿಕರಾಗಿದ್ದರೆ, ಶೇಕಡಾ 9.3 ಕಾರ್ಮಿಕರು ರಬ್ಬರ್ ಫ್ಯಾಕ್ಟರಿಯಲ್ಲಿ ಕಾರ್ಮಿಕರಾಗಿ, ಶೇಕಡಾ 4.5% ಕಾರ್ಮಿಕರು ಮೇಸ್ತ್ರಿಗಳಾಗಿ, ಶೇಕಡಾ 3.8% ಕಾರ್ಮಿಕರು ರಬ್ಬರ್ ಹಾಲು ಸಂಗ್ರಹಣಾ ಕೇಂದ್ರಗಳಲ್ಲಿ ಕ್ಯಾನ್ ಕ್ಲೀನರ್ ಗಳಾಗಿ ಮತ್ತು ಶೇಕಡಾ 1% ಕಾರ್ಮಿಕರು ಆಯಾಗಳಾಗಿ ದುಡಿಯುತ್ತಿರುವುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.
- ಕೆ.ಎಫ್.ಡಿ.ಸಿ ರಬ್ಬರ್ ನಿಗಮವು ಸಿಲೋನ್ ಪುನರ್ ಸಂಜಾತರ ಪುನರ್ವಸತಿಗಾಗಿ ಆರಂಬಿಸಲಾದ ಯೋಜನೆಯಾದುದರಿಂದ ಮೊದಲ ಕಾರ್ಮಿಕರ ನೇಮಕವು ಪ್ರತೀ ಕಾರ್ಮಿಕ ಕುಟುಂಬಗಳಿಗೆ ಎರಡು ಕೆಲಸದಂತೆ ನೀಡಲಾಗಿದೆ. ನಂತರದಲ್ಲಿ ಎರಡನೇ ತಲೆಮಾರಿಗೂ ಅದೇ ಕೆಲಸ ವರ್ಗಾವಣೆಯಾಗಿದ್ದು ಮೂರನೇ ತಲೆಮಾರಿಗೆ ಕೆಲಸದ ವರ್ಗಾವಣೆಯನ್ನು ತಡೆಹಿಡಿಯಲಾಗಿದೆ. ಇದರ ಜೊತೆಗೆ 240 ದಿನಗಳ ದೀರ್ಘ ಕಾಲ ದುಡಿದ ಕಾರ್ಮಿಕರನ್ನು ಕಾಯಂ ಮಾಡಲಾಗಿತ್ತು. ಪ್ರಸ್ತುತ ಕಳೆದ ಎಂಟು ವರ್ಷಗಳಿಂದ ಯಾವುದೇ ನೇಮಕಾತಿ ನಡೆದಿಲ್ಲ. ಅಧ್ಯಯನಕ್ಕೊಳಪಡಿಸಿದ ಕಾರ್ಮಿಕರಲ್ಲಿ ಶೇಕಡಾ 94.25 ರಷ್ಟು ಕಾರ್ಮಿಕರು ಎರಡನೆ ತಲೆಮಾರಿಗೆ ಕೆಲಸವನ್ನು ವರ್ಗಾವಣೆಯಾಗಿ ಪಡೆದವರಾದರೆ ಶೇಕಡಾ 5.75 ರಷ್ಟು ಕಾರ್ಮಿಕರು ಕೆಲಸವನ್ನು 240 ನಿಯಮದಂತೆ ಪಡೆದು ನೇಮಕವಾಗಿ ದುಡಿಯುತ್ತಿರುವುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

- ಒಟ್ಟು ಮಾಹಿತಿದಾರರಲ್ಲಿ 73.75 ನಾಲ್ಕು ಕಿ.ಮೀ ಅಂತರದ ಒಳಗಿನ ಕಾರ್ಯಕ್ಷೇತ್ರ ದೂರವನ್ನು ಹೊಂದಿದ್ದಾರೆ. ಹಾಗಾಗಿ ಶೇಕಡಾ 70 ರಷ್ಟು ಕಾರ್ಮಿಕರು ಕೆಲಸದ ಸ್ಥಳವನ್ನು ಕಾಲ್ನಡಿಗೆಯ ಮೂಲಕವೇ ತಲುಪುತ್ತಾರೆ. ಉಳಿದಂತೆ ಶೇಕಡಾ 26.25 ರಷ್ಟು ಕಾರ್ಮಿಕರ ಕೆಲಸದ ಸ್ಥಳವು 5–10ಕಿ.ಮೀ ಅಂತರದಲ್ಲಿರುವುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.
- ಪ್ರಸ್ತುತ ಅಧ್ಯಯನದ ಮಾಹಿತಿದಾರರಲ್ಲಿ ಶೇಕಡಾ 69.25 ರಷ್ಟು ಕಾರ್ಮಿಕರು ಮೂರ್ತೆಗಾಗಿ ರಬ್ಬರ್ ತೋಟವನ್ನು ಮತ್ತು ಪ್ಯಾಕ್ಟರಿಯನ್ನು ಕಾಲ್ನಡಿಗೆಯ ಮೂಲಕ ಕ್ರಮಿಸುತ್ತಾರೆ. ಶೇಕಡಾ 2.25% ಕಾರ್ಮಿಕರು ಸೈಕಲನ್ನು ಅವಲಂಬಿಸಿದರೆ, ಶೇಕಡಾ 26.5% ಕಾರ್ಮಿಕರು ದ್ವಿಚಕ್ರ ವಾಹನವನ್ನು ಮತ್ತು ಶೇಕಡಾ 2% ಕಾರ್ಮಿಕರು ಬಸ್ಸಿನ ಮೂಲಕ ತಮ್ಮ ಕಾರ್ಯ ಕ್ಷೇತ್ರವನ್ನು ತಲುಪುತ್ತಾರೆ.
- ಕೆ.ಎಫ್.ಡಿ.ಸಿ ರಬ್ಬರ್ ನಿಗಮದ ಕಾರ್ಮಿಕರ ಕೆಲಸದ ಅವಧಿಯು ಎಂಟು ಗಂಟೆಗಳಾಗಿದ್ದು ಪೂರ್ವಾಹ್ನ 6.30 ರಿಂದ ಅಪರಾಹ್ನ 2.30 ರವರೆಗೆ ಇರುತ್ತದೆ. 1956 ರ ಕರ್ನಾಟಕ ತೋಟ ಕಾರ್ಮಿಕರ ಕಾಯ್ದೆಯ ಅನ್ವಯ ಇದನ್ನು ನಿಗದಿಪಡಿಸಲಾಗಿದೆ. ಪ್ರಸ್ತುತ ಕಾರ್ಮಿಕರ ಸಂಘಟನೆ ಮತ್ತು ಆಡಳಿತ ಮಂಡಳಿಯ ನಡುವಿನ ಒಪ್ಪಂದದಂತೆ ಪ್ರತೀ ಕಾರ್ಮಿಕನು ದಿನವೊಂದಕ್ಕೆ 350 ರಬ್ಬರ್ ಮರಗಳನ್ನು ಮೂರ್ತೆ ಮಾಡಿ ಸ್ಕ್ರೇಪ್, ರಬ್ಬರ್ ಹಾಲು ಸಂಗ್ರಹಿಸಿ ಹಾಲು ಸಂಗ್ರಹಣಾ ಕೇಂದ್ರಕ್ಕೆ ಒಪ್ಪಿಸಬೇಕು, ಜೊತೆಗೆ ಕಾರ್ಮಿಕನಿಗೆ ವಹಿಸಿದ ತೋಟದ ಕಳೆಕಿತ್ತು ಸ್ವಚ್ಛವಾಗಿಟ್ಟುಕೊಳ್ಳುವ ಕೆಲಸವನ್ನು ನೀಡಲಾಗಿದೆ.
- ಕೆಲಸದ ನಡುವೆ 30 ನಿಮಿಷಗಳ ಚಹಾ ವಿರಾಮವಿದ್ದು, ವಾರದಲ್ಲಿ ಭಾನುವಾರ ಒಂದು ದಿನದ ರಜೆಯನ್ನು ನೀಡಲಾಗಿದೆ. ಆದರೆ ರಬ್ಬರ್ ತೋಟ ಕಾರ್ಮಿಕರು ದಿನಗೂಲಿ ನೌಕರರಾಗಿರುವುದರಿಂದ ವಾರದ ರಜೆ ಸೌಲಭ್ಯವಿದ್ದರೂ, ಅದು ಸಂಬಳರಹಿತ ರಜೆಯಾಗಿದೆ. ಇನ್ನುಳಿದಂತೆ ಕಾರ್ಮಿಕ ಕಾಯ್ದೆಯ ಅನ್ವಯ ಲಭ್ಯವಿರುವ ಇತರೆ ರಜೆಗಳು ಪ್ರತೀ ಕಾರ್ಮಿಕರಿಗೂ ದೊರಕುತ್ತಿದೆ. ಒಟ್ಟು ಕಾರ್ಮಿಕರಲ್ಲಿ ಶೇಕಡಾ 64.25 ಕಾರ್ಮಿಕರು ಕೆಲಸದ ಸಮಯದಲ್ಲಿ ವಿಶ್ರಾಂತಿ ಸಿಗುವುದಿಲ್ಲವೆಂದೂ ಶೇಕಡಾ 35.75 ಕಾರ್ಮಿಕರು ಮಾತ್ರ ವಿರಾಮ ಸಿಗುತ್ತದೆ ಎಂದು ಅಭಿಪ್ರಾಯಿಸಿದ್ದಾರೆ.
- ಅಧ್ಯಯನಕ್ಕೊಳಪಡಿಸಿದ ಒಟ್ಟು ಕಾರ್ಮಿಕರಲ್ಲಿ ಶೇಕಡಾ 55.25 ಕಾರ್ಮಿಕರು ಪ್ರಸ್ತುತ ಮಾಡುತ್ತಿರುವ ಕೆಲಸವು ಒತ್ತಡದಿಂದಕೂಡಿದ್ದು ಕಷ್ಟಕರವಾಗುತ್ತಿದೆ ಎಂದು ಅಭಿಪ್ರಾಯಿಸಿದ್ದರೆ, ಶೇಕಡಾ 44.75 ಕಾರ್ಮಿಕರು ಒತ್ತಡವಿಲ್ಲದ ಕುರಿತು ಪ್ರತಿಕ್ರಿಯಿಸಿದ್ದಾರೆ. ಬಹುಮುಖ್ಯವಾಗಿ ಕೆಲಸವು ಒತ್ತಡದಿಂದಿದ್ದು,

ಕಷ್ಟಕರವಾಗುತ್ತಿದೆ ಎಂದು ಅಭಿಪ್ರಾಯಿಸಿದ ಕಾರ್ಮಿಕರಲ್ಲಿ ಶೇಕಡಾ 81 ರಷ್ಟು ಕಾರ್ಮಿಕರು ಮಹಿಳೆಯರೇ ಆಗಿದ್ದರೆ ಉಳಿದ ಶೇಕಡಾ 19 ಕಾರ್ಮಿಕರು ನಿವೃತ್ತಿ ಅಂಚಿನಲ್ಲಿರುವವರಾಗಿದ್ದಾರೆ.

- ಕೆ.ಎಫ್.ಡಿ.ಸಿ ರಬ್ಬರ್ ತೋಟ ಕಾರ್ಮಿಕರ ವೇತನವು ಕಾರ್ಮಿಕ ಸಂಘಟನೆಗಳು ಮತ್ತು ಕೆ.ಎಫ್.ಡಿ.ಸಿ ನಿಗಮದ ಜೊತೆ ನಡೆಯುವ ಒಪ್ಪಂದದಂತೆ ನಿರ್ಣಯಿಸಲಾಗುತ್ತದೆ. ಪ್ರಸ್ತುತ 2016 ರ ಕಾರ್ಮಿಕ ಸಂಘಟನೆ ಮತ್ತು ನಿಗಮದ ನಡುವೆ ನಡೆದ ವೇತನ ನಿರ್ಧಾರ ಒಪ್ಪಂದದಂತೆ ಅನುಷ್ಠಾನದಲ್ಲಿದ್ದು, ಪ್ರತೀ ಕಾರ್ಮಿಕರಿಗೆ ದಿನವೊಂದಕ್ಕೆ ರೂಪಾಯಿ 432.36 ನ್ನು ನೀಡಲಾಗುತ್ತಿದೆ. ಜೊತೆಗೆ ಕೆ.ಎಫ್.ಡಿ.ಸಿ ನಿಗಮದಲ್ಲಿನ ತೋಟಕಾರ್ಮಿಕರಿಗೆ ವೇತನವನ್ನು ಪುರುಷ ಮತ್ತು ಮಹಿಳಾ ಕಾರ್ಮಿಕರಿಗೆ ಸಮಾನವಾಗಿ ನೀಡುತ್ತಿರುವುದನ್ನು ಅಧ್ಯಯನದಿಂದ ಗುರುತಿಸಲಾಗಿದೆ.
- ಕೆ.ಎಫ್.ಡಿ.ಸಿ ಯ ರಬ್ಬರ್ ನಿಗಮದಲ್ಲಿ ವಿವಿಧ ಕಾರಣಗಳಿಗಾಗಿ ವೇತನ ಕಟಾವಣೆಯು ಮಾಡುವುದನ್ನು ಅಧ್ಯಯನದಲ್ಲಿ ಗುರುತಿಸಲಾಗಿದೆ. ಮುಖ್ಯವಾಗಿ ರಬ್ಬರ್ ಮೂರ್ತೆದಾರ ವರ್ಗದಲ್ಲಿ ಕಾರ್ಮಿಕರಿಗೆ ವಹಿಸಿದಷ್ಟು ಮರಗಳನ್ನು ಮೂರ್ತೆ ಮಾಡದೇ ವಂಚಿಸಿದಲ್ಲಿ, ಗೊಬ್ಬರ ಹಾಕುವಲ್ಲಿ, ಸುಣ್ಣ ಬಳಿಯುವ ಕೆಲಸ ಮದ್ದು ಸಿಂಪಡಿಸುವಲ್ಲಿ ಮರಗಳನ್ನು ಬಿಟ್ಟು ಹೋದಲ್ಲಿ ಅಥವಾ ನಿಗದಿತ ಪ್ರದೇಶದಲ್ಲಿನ ಕಳೆಗಳನ್ನು ಕಟಾಯಿಸದೆ ಸ್ವಚ್ಚವಾಗಿಟ್ಟುಕೊಳ್ಳದಿದ್ದಲ್ಲಿ, ರಬ್ಬರ್ ಗಿಡಗಳ ಮರುನಾಟಿ ತೋಟಗಳಲ್ಲಿನ ಕಳೆ ತೆಗೆಯುವುದು, ನೆರಳು ಕಟ್ಟುವುದು, ಹಸಿರು ಎಲೆ, ಮುಳಿಹುಲ್ಲು ಅಥವಾ ಅಡಿಕೆಗರಿಗಳ ನೆರಳು ಕಟ್ಟುವ ಇತ್ಯಾದಿ ಕೆಲಸಗಳನ್ನು ಸಮರ್ಪಕವಾಗಿ ಮಾಡದೇ ಇದ್ದಲ್ಲಿ ವೇತನ ಕಟವಾಣೆಯನ್ನು ಮಾಡಲಾಗುತ್ತಿರುವುದನ್ನು ಗುರುತಿಸಲಾಗಿದೆ.
- ಕೆ.ಎಫ್.ಡಿ.ಸಿ ತೋಟಕಾರ್ಮಿಕರಲ್ಲಿ ಯಾವುದೇ ಲೈಂಗಿಕ ದೌರ್ಜನ್ಯ ಪ್ರಕರಣಗಳನ್ನು ಗುರುತಿಸಲಾಗಿಲ್ಲ. ಮುಖ್ಯವಾಗಿ ತೋಟಕಾರ್ಮಿಕರೆಲ್ಲರೂ ಪುನರ್‌ಸಂಜಾತ ಪುನರ್ವಸಿತ ಕಾರ್ಮಿಕರಾಗಿರುವುದು ಮತ್ತು ಹೆಚ್ಚಿನ ಕಾರ್ಮಿಕರು ಸಂಬಂಧಿಗಳಾಗಿದ್ದು, ಒಂದೇ ಕಾಲನಿಯಲ್ಲಿ ವಾಸಿಸುತ್ತಿರುವುದು ಲೈಂಗಿಕ ದೌರ್ಜನ್ಯ ಪ್ರಕರಣಗಳು ಕಂಡುಬರದೇ ಇರಲು ಕಾರಣ ಎಂಬುದನ್ನು ಅಧ್ಯಯನದಿಂದ ಗುರುತಿಸಲಾಗಿದೆ.
- ಕೆ.ಎಫ್.ಡಿ.ಸಿ ರಬ್ಬರ್ ಕಾರ್ಮಿಕರಲ್ಲಿ ಸುಮಾರು 10 ಕಾರ್ಮಿಕ ಸಂಘಟನೆಗಳು ಕಾರ್ಯಚರಿಸುತ್ತಿರುವುದನ್ನು ಅಧ್ಯಯನದಿಂದ ಗುರುತಿಸಲಾಗಿದೆ. ಪ್ರತೀ 3 ವರ್ಷಗಳಿಗೊಮ್ಮೆ ಕಾರ್ಮಿಕ ಸಂಘಟನೆ ಮತ್ತು ಕೆ.ಎಫ್.ಡಿ.ಸಿ ಆಡಳಿತ ಮಂಡಳಿಯ ನಡುವೆ ನಡೆಯುವ ಕಾರ್ಮಿಕರ

ವೇತನ ನಿರ್ಧಾರದ ಒಪ್ಪಂದದಲ್ಲಿ ಕಾರ್ಮಿಕ ಸಂಘಟನೆಗಳು ಪ್ರಮುಖ ಪಾತ್ರವನ್ನು ವಹಿಸುತ್ತಿರುವುದನ್ನು ಅಧ್ಯಯನದಲ್ಲಿ ಗುರುತಿಸಲಾಗಿದೆ. ಅಧ್ಯಯನಕ್ಕೊಳಪಡಿಸಿದ ಒಟ್ಟು ಕಾರ್ಮಿಕರಲ್ಲಿ ಶೇಕಡಾ 78.25 ಕಾರ್ಮಿಕ ಸಂಘಟನೆಗಳ ಸದಸ್ಯರಾಗಿದ್ದರೆ, ಶೇಕಡಾ 21.75 ಕಾರ್ಮಿಕರು ಯಾವುದೇ ಕಾರ್ಮಿಕ ಸಂಘಟನೆಗಳ ಸದಸ್ಯರಾಗಿಲ್ಲ.

- ಒಟ್ಟು ಕಾರ್ಮಿಕರಲ್ಲಿ ಶೇಕಡಾ 26.5 ಕಾರ್ಮಿಕರು 1951 ರ ತೋಟ ಕಾರ್ಮಿಕರ ಕಾಯ್ದೆಯ ಕುರಿತು ಅರಿವನ್ನು ಹೊಂದಿದ್ದರೆ, ಶೇಕಡಾ 73.5 ಕಾರ್ಮಿಕರು ಕಾರ್ಮಿಕ ಕಾಯ್ದೆಯ ಕುರಿತು ಅರಿವನ್ನು ಹೊಂದಿಲ್ಲ. ಕಾರ್ಮಿಕ ಕಾಯ್ದೆಯ ಅರಿವನ್ನು ಹೊಂದಿರುವ ಕಾರ್ಮಿಕರಲ್ಲಿ ಮೇಸ್ತ್ರಿಗಳು, 20 ವರ್ಷಗಳಿಗಿಂತ ಹೆಚ್ಚಿನ ಕೆಲಸದ ಅನುಭವವನ್ನು ಮತ್ತು ಪ್ರಾಥಮಿಕ ವಿದ್ಯಾಭ್ಯಾಸಕ್ಕಿಂತ ಹೆಚ್ಚಿನ ವಿದ್ಯಾಭ್ಯಾಸವನ್ನು ಪಡೆದ ಕಾರ್ಮಿಕ ವರ್ಗದವರಾಗಿರುವುದನ್ನು ಅಧ್ಯಯನದಿಂದ ಗುರುತಿಸಲಾಗಿದೆ.

## ಸಿಲೋನ್ ತೋಟಕಾರ್ಮಿಕರ ಆರ್ಥಿಕ ಸ್ಥಿತಿಗತಿ

- ತೋಟ ಕಾರ್ಮಿಕರ ಆರ್ಥಿಕ ಸ್ಥಿತಿಗತಿಯಂತೆ ಒಟ್ಟು ಮಾಹಿತಿದಾರರಲ್ಲಿ ಶೇಕಡಾ 52.75 ರಷ್ಟು ಕಾರ್ಮಿಕರು 4000–6000 ವರೆಗಿನ ಆದಾಯವನ್ನು ಹೊಂದಿದ್ದಾರೆ. ಶೇಕಡಾ 26 ರಷ್ಟು ಕಾರ್ಮಿಕರು 6000–8000 ಆದಾಯವನ್ನು ಹೊಂದಿದರೆ, ಶೇಕಡಾ 12.25 ರಷ್ಟು ಕಾರ್ಮಿಕರು 8000 –10000 ಆದಾಯವನ್ನು ಹೊಂದಿದ್ದಾರೆ. ಪ್ರಮುಖವಾಗಿ 10000 ಕ್ಕಿಂತ ಹೆಚ್ಚು ಆದಾಯವನ್ನು ಹೊಂದಿರುವ ಕುಟುಂಬಗಳು ಕೇವಲ ಶೇಕಡಾ 3.25 (13) ಮಾತ್ರ ಇರುವುದನ್ನು ಅಧ್ಯಯನದಿಂದ ಗುರುತಿಸಲಾಗಿದೆ.

- ರಬ್ಬರ್ ತೋಟ ಕಾರ್ಮಿಕರ ಮಾಸಿಕ ಖರ್ಚು–ವೆಚ್ಚಗಳ ಚಿತ್ರಣ ಗಮನಾರ್ಹವಾಗಿದೆ. ಮುಖ್ಯವಾಗಿ ಕಾರ್ಮಿಕರ ಒಟ್ಟು ಮಾಸಿಕ ಖರ್ಚುಗಳಲ್ಲಿ ಶೇಕಡಾ 27 ರಷ್ಟು ಆಹಾರಕ್ಕಾಗಿ ಖರ್ಚು ಮಾಡಿದರೆ, ಶೇಕಡಾ 14 ನ್ನು ವೈದ್ಯಕೀಯ ವೆಚ್ಚಕ್ಕಾಗಿ ಖರ್ಚು ಮಾಡುತ್ತಾರೆ. ಉಳಿದಂತೆ ಶೇಕಡಾ 15 ಶಿಕ್ಷಣಕ್ಕಾಗಿ, ಶೇಕಡಾ 9 ಗೃಹ ಬಳಕೆಗಾಗಿ, ಶೇಕಡಾ 12 ಸಾರಿಗೆ ಮತ್ತು ಸಂಪರ್ಕಕ್ಕಾಗಿ, ಶೇಕಡಾ 7 ನ್ನು ಧಾರ್ಮಿಕ ಆಚರಣೆಗಾಗಿ, ಶೇಕಡಾ 6 ನ್ನು ಮನೋರಂಜನೆಗಾಗಿ ಮತ್ತು ಉಳಿದ ಶೇಕಡಾ 10 ನ್ನು ಮದ್ಯಪಾನ–ತಂಬಾಕು ಸೇವನೆ–ದೂಮಪಾನಕ್ಕಾಗಿ ಹಾಗು ಇತರೆ ಖರ್ಚುಗಳಿಗಾಗಿ ವ್ಯಯಿಸುತ್ತಿರುವುದನ್ನು ಅಧ್ಯಯನದಿಂದ ಗುರುತಿಸಲಾಗಿದೆ.

- ಅಧ್ಯಯನಕ್ಕೊಳಪಡಿಸಿದ ಒಟ್ಟು ಕಾರ್ಮಿಕರಲ್ಲಿ ಶೇ 38.25% ಕಾರ್ಮಿಕರು ಉಳಿತಾಯವನ್ನು ಹೊಂದಿದ್ದರೆ, ಶೇಕಡಾ 61.75 ರಷ್ಟು ಕಾರ್ಮಿಕರು ಉಳಿತಾಯವನ್ನು ಹೊಂದಿಲ್ಲ ಎಂಬುದನ್ನು ಅಧ್ಯಯನದಿಂದ ಗುರುತಿಸಲಾಗಿದೆ. ತೋಟ ಕಾರ್ಮಿಕರ ಉಳಿತಾಯವು ಚಿನ್ನಾಭರಣ, ವಿಮೆ, ಅಂಚೆ ಠೇವಣಿ, ಬ್ಯಾಂಕ್ ಠೇವಣಿ ರೂಪದಲ್ಲಿ ಇದೆ. ಉಳಿತಾಯ ಇಲ್ಲದೇ ಇರುವ ಕಾರ್ಮಿಕರು ತಮ್ಮ ಮಕ್ಕಳ ಶಿಕ್ಷಣ, ವಿವಾಹ ಮತ್ತು ಕುಟುಂಬದ ಇತರೆ ಸದಸ್ಯರ ವೈಧ್ಯಕೀಯ ವೆಚ್ಚ ಹೆಚ್ಚಾದುದರಿಂದ ಹೆಚ್ಚಿನ ಕಾರ್ಮಿಕರಲ್ಲಿ ಉಳಿತಾಯ ಮಾಡಲು ಸಾಧ್ಯವಾಗದೇ ಇರುವುದನ್ನು ಅಧ್ಯಯನದಿಂದ ಗುರುತಿಸಲಾಗಿದೆ.
- ಒಟ್ಟು ಮಾಹಿತಿದಾರರಲ್ಲಿ ಶೇಕಡಾ 89.25 ರಷ್ಟು ಕಾರ್ಮಿಕರು ಸಾಲವಿರುವುದಾಗಿಯೂ, ಶೇಕಡಾ 10.75 ಕಾರ್ಮಿಕರು ಯಾವುದೇ ಸಾಲ ಇಲ್ಲವೆಂದು ಅಭಿಪ್ರಾಯಿಸಿದ್ದಾರೆ. ಬಹುಮುಖ್ಯವಾಗಿ ಸಾಲವಿರುವ ಕಾರ್ಮಿಕರಲ್ಲಿ 35.57 ಕಾರ್ಮಿಕರು ಮಕ್ಕಳ ಶಿಕ್ಷಣಕ್ಕಾಗಿ ಸಾಲವನ್ನು ಮಾಡಿದ್ದರೆ, ಶೇಕಡಾ 30.33 ಕಾರ್ಮಿಕರು ವೈಧ್ಯಕೀಯ ವೆಚ್ಚಕ್ಕಾಗಿ ಸಾಲವನ್ನು ಮಾಡಿದ್ದಾರೆ. ಉಳಿದಂತೆ ಶೇಕಡಾ 21.84 ರಷ್ಟು ಕಾರ್ಮಿಕರು ವಾಹನವನ್ನು ಖರೀದಿಸಲು ಸಾಲ ಮಾಡಿದ್ದರೆ, ಶೇಕಡಾ 6.72 ಕಾರ್ಮಿಕರು ಹಬ್ಬ ಹರಿದಿನಗಳ ಆಚರಣೆ, ತಮಿಳುನಾಡಿಗೆ ಪ್ರಯಾಣ ಮತ್ತು ಇತರೆ ಖರ್ಚು ವೆಚ್ಚಗಳಿಗಾಗಿ ಸಾಲವನ್ನು ಮಾಡಿರುವುದನ್ನು ಅಧ್ಯಯನದಿಂದ ಗುರುತಿಸಲಾಗಿದೆ.
- ಒಟ್ಟು ಕಾರ್ಮಿಕರಲ್ಲಿ ಶೇಕಡಾ 69.25 ಕಾರ್ಮಿಕರು ಸ್ವ–ಸಹಾಯ ಸಂಘಗಳಲ್ಲಿ ಸದಸ್ಯರಾಗಿದ್ದಾರೆ. ಸ್ವ–ಸಹಾಯ ಸಂಘಗಳ ಸದಸ್ಯರಾದ ಕಾರ್ಮಿಕರು ಉಳಿತಾಯಕ್ಕಾಗಿ, ಸಾಲ ಮತ್ತು ಇನ್ನಿತರ ಸಮಾಜಮುಖಿ ಕೆಲಸಗಳಲ್ಲಿ ತೊಡಗಿಸಿಕೊಳ್ಳುವ ಕಾರಣಕ್ಕಾಗಿ ಸ್ವಸಹಾಯ ಸಂಘಗಳಲ್ಲಿ ಸದಸ್ಯರಾಗಿರುವುದನ್ನು ಅಧ್ಯಯನದಿಂದ ಗುರುತಿಸಲಾಗಿದೆ.
- ಸಿಲೋನ್ ತೋಟ ಕಾರ್ಮಿಕರು ದಿನಗೂಲಿ ನೌಕರರಾಗಿದ್ದರೂ ನಿಗಮದ ಖಾಯಂ ನೌಕರರಾಗಿರುವುದರಿಂದ ಶೇಕಡಾ 72.2 ಕುಟುಂಬಗಳು ಎ.ಪಿ.ಎಲ್ ಪಡಿತರ ಚೀಟಿಯನ್ನು, ಶೇಕಡಾ 27.8 ಕುಟುಂಬಗಳು ಬಿ.ಪಿ.ಎಲ್ ಪಡಿತರ ಚೀಟಿಯನ್ನು ಹೊಂದಿದೆ. ಶೇಕಡಾ 60 ರಷ್ಟು ಪರಿಶಿಷ್ಟ ಜಾತಿಯ ಕಾರ್ಮಿಕ ಕುಟುಂಬಗಳಿದ್ದರೂ ಅಧ್ಯಯನಕ್ಕೊಳಪಡಿಸಿದ ಒಟ್ಟು ಸಿಲೋನ್ ತೋಟಕಾರ್ಮಿಕರಲ್ಲಿ ಶೇಕಡಾ 70 ಕಾರ್ಮಿಕ ಕುಟುಂಬಗಳು ಸರಕಾರದ ಸವಲತ್ತುಗಳಿಂದ ವಂಚಿತವಾಗಿರುವುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

## ಸಿಲೋನ್ ತೋಟ ಕಾರ್ಮಿಕರು ಹೊಂದಿರುವ ಅಗತ್ಯ ಮೂಲಭೂತ ಸೌಲಭ್ಯಗಳು

- ಅಧ್ಯಯನಕ್ಕೊಳಪಡಿಸಿದ ಎಲ್ಲಾ 100% ಮಾಹಿತಿದಾರರು ಕೆ.ಎಫ್.ಡಿ.ಸಿ ನಿಗಮದ ಸಾಲು ಮನೆಯ ವಸತಿ ಕೇಂದ್ರಗಳಲ್ಲಿ (ಕ್ವಾಟರ್ಸ್) ವಾಸಿಸುತ್ತಿದ್ದಾರೆ. ಪ್ರತೀ ಸಾಲು ಮನೆಯು ನಾಲ್ಕು ಮನೆಯನ್ನು ಹೊಂದಿದೆ. ಎಲ್ಲಾ ಮಾಹಿತಿದಾರರ ಮನೆಯು ಹಂಚಿನ ಮಹಡಿಯನ್ನು, ಹೊಂದಿದ್ದು ಸಿಮೆಂಟಿನಿಂದ ಸಾರಣೆಯಿಂದ ಕೂಡಿದ ನಾಲ್ಕು ಕೊಠಡಿಗಳನ್ನು ಹೊಂದಿದೆ. ನಿಗಮವು ಒಟ್ಟು 1366 ಮನೆಯನ್ನು ಹೊಂದಿದ್ದು ಇವುಗಳಲ್ಲಿ 12 ಮನೆಗಳು ಮಾತ್ರ ಆರ್.ಸಿ.ಸಿ ಇಂದ ನಿರ್ಮಿಸಿದ್ದಾಗಿದೆ. ಸಿಲೋನ್ ಪುನರ್ ಸಂಜಾತ ಪ್ರತೀ ಕುಟುಂಬಗಳಿಗೆ ಕೆ.ಎಫ್.ಡಿ.ಸಿ ನಿಗಮದ ಉಚಿತ ವಸತಿಯನ್ನು ನೀಡಿರುವುದನ್ನು ಅಧ್ಯಯನ ಪ್ರಸ್ತುತಪಡಿಸಿದೆ.
- 1970 ರ ದಶಕದಲ್ಲಿ ನಿರ್ಮಿಸಿದ ಕಾಲನಿಗಳಾಗಿರುವುದರಿಂದ ಪ್ರಾರಂಭದಲ್ಲಿ ಶೇಕಡಾ 100 ಕಾಲನಿಗಳು ನೈಸರ್ಗಿಕವಾಗಿ ಹರಿದು ಬರುತ್ತಿದ್ದ ನೀರನ್ನೇ ಅವಲಂಬಿಸಿದ್ದವು. ಪ್ರತೀ ಕಾಲನಿಗಳಿಗೆ ಕೆ. ಎಫ್. ಡಿ.ಸಿ ನಿಗಮದ ವತಿಯಿಂದ ತೆರದ ಬಾವಿಯನ್ನು ಕೊರೆದು ಕುಡಿಯುವ ನೀರಿನ ಸೌಲಭ್ಯವನ್ನು ಮಾಡಲಾಗಿದೆ. ಆದರೆ ಇತ್ತೀಚಿನ ದಿನಗಳಲ್ಲಿ, ತೆರೆದ ಬಾವಿಯಲ್ಲಿ ನೀರು ಬತ್ತಲು ಪ್ರಾರಂಭವಾದುದರಿಂದ ಸ್ಥಳೀಯ ಆಡಳಿತದ ವತಿಯಿಂದ ಪ್ರತೀ ಕಾಲನಿಯ ಶೇಕಡಾ 100 ಮನೆಗಳಿಗೆ ಪೈಪು ಮುಖಾಂತರ ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿರುವುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.
- ಅಧ್ಯಯನಕ್ಕೆ ಒಳಪಡಿಸಿದ ಒಟ್ಟು ಮಾಹಿತಿದಾರರಲ್ಲಿ ಶೇಕಡಾ 96% ರಷ್ಟು ಕಾರ್ಮಿಕ ಕುಟುಂಬಗಳು ಸ್ವಂತ ಶೌಚಾಲಯ ವ್ಯವಸ್ಥೆಯನ್ನು ಹೊಂದಿದರೆ ಶೇಕಡಾ 1% ಕುಟುಂಬಗಳು ಸಮುದಾಯ ಶೌಚಾಲಯವನ್ನು ಉಪಯೋಗಿಸುತ್ತಿವೆ. ಉಲ್ಲೇಖನೀಯ ಅಂಶವೆಂದರೆ ಶೇಕಡಾ 3 ರಷ್ಟು ಕುಟುಂಬಗಳು ಬಯಲು ಶೌಚಾಲಯವನ್ನೇ ನೆಚ್ಚಿಕೊಂಡಿವೆ. ಅರಣ್ಯದ ಅಂಚಿನಲ್ಲಿ ಜೀವಿಸುವುದು ಬಯಲು ಶೌಚಾಲಯ ಆರಿಸಿಕೊಳ್ಳಲು ಒಂದು ಕಾರಣವಾದರೆ, ಮನೆಯೊಳಗೆ ಜೋಡಿಸಿದ ಶೌಚಾಲಯವು ತಮ್ಮ ಧಾರ್ಮಿಕ ನಂಬಿಕೆಗೆ ಅಶುದ್ಧಿಯ ಕಾರಣವೂ ಪ್ರಮುಖವಾಗಿದೆ.
- ಕೆ. ಎಫ್. ಡಿ.ಸಿ ನಿಗಮವು ನಿಗಮದ ಕಾರ್ಮಿಕರಿಗೆ ವಸತಿಯೊಂದಿಗೆ ಕಾಲನಿಯಲ್ಲಿ ವಿದ್ಯುಚ್ಛಕ್ತಿ ಮತ್ತು ಬೀದಿ ದೀಪಗಳ ವ್ಯವಸ್ಥೆಯನ್ನು ನೀಡಿದೆ. ಮುಖ್ಯವಾಗಿ ಬಹುತೇಕ ಕಾಲನಿಗಳು ಜನ ನಿಬಿಡವಾಗಿದ್ದು, ಕನಿಷ್ಠ 8–10 ಸಾಲುಗಳನ್ನೊಳಗೊಂಡ 40 ಮನೆಗಳನ್ನು ಹೊಂದಿವೆ. ಬಹುತೇಕ ಕಾಲನಿಗಳು

ಅರಣ್ಯದ ಅಂಚಿನಲ್ಲಿರುವ ಕಾರಣದಿಂದ ಎಲ್ಲಾ ಕಾಲನಿಗಳಿಗೂ ನಿಗಮ, ಸ್ಥಳೀಯಾಡಳಿತದ ವತಿಯಿಂದ ಶೇಕಡಾ 100 ಕಾಲನಿಗಳಿಗೆ ಬೀದಿ ದೀಪಗಳು ಮತ್ತು ಮನೆಗಳಿಗೆ ವಿದ್ಯಚ್ಛಕ್ತಿಯ ಸೌಲಭ್ಯವನ್ನು ನೀಡಲಾಗಿದೆ. ಆದರೆ ಕಾಲನಿಗಳಲ್ಲಿನ ಬೀದಿ ದೀಪಗಳು ದುರಸ್ತಿಯಲ್ಲಿರುವುದನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗುರುತಿಸಲಾಗಿದೆ.

- ತೋಟ ಕಾರ್ಮಿಕರು ವಾಸಿಸುತ್ತಿರುವ ಶೇಕಡಾ 100 ಕಾಲನಿಗಳಿಗೆ, ಚರಂಡಿ ಸೌಲಭ್ಯಗಳನ್ನು ನಿರ್ಮಿಸಲಾಗಿದೆ. ಬಹುತೇಕ ಕಾಲನಿಗಳಲ್ಲಿ ಚರಂಡಿಗಳು ಕಾರ್ಯಚರಿಸುತಿದ್ದರೂ, ಸಮರ್ಪಕವಾಗಿಲ್ಲ. ಚರಂಡಿಯ ಶುಚಿತ್ವ ಸೂಕ್ತ ರೀತಿಯಲ್ಲಿ ನಡೆಯುತ್ತಿಲ್ಲ. ತ್ಯಾಜ್ಯಗಳನ್ನು ಎಲ್ಲೆಂದರಲ್ಲಿ ಮುಖ್ಯವಾಗಿ ಚರಂಡಿಗಳಲ್ಲಿ ಎಸೆದಿರುವುದನ್ನು ಗಮನಿಸಲಾಗಿದೆ.

- ತೋಟ ಕಾರ್ಮಿಕರ ಕಾಲನಿಗಳು ರಬ್ಬರ್ ತೋಟಗಳ ಸಮೀಪವಿದ್ದು ಅರಣ್ಯದ ಅಂಚಿನಲ್ಲಿ ಕೇಂದ್ರೀಕರಿಸಿದೆ. ಪ್ರಾರಂಭದಲ್ಲಿ ಶೇಕಡ 100 ಕಾಲನಿಗಳು ಕಚ್ಚಾ ದಾರಿಯನ್ನೇ ಅರಸಿದ್ದವು. ತೋಟಗಳು ಕೇಂದ್ರ ಮೀಸಲು ಅರಣ್ಯಗಳ ನಡುವೆ ಇದ್ದುದರಿಂದ ಪ್ರಾರಂಭದಲ್ಲಿ ಕಾಲನಿಗಳಿಗೆ ರಸ್ತೆ ಸಂಪರ್ಕಗಳಿರಲಿಲ್ಲ. ಪ್ರಸ್ತುತ ಶೇಕಡಾ. 100 ನಿಗಮದ ಕಾಲನಿಗಳು ರಸ್ತೆ ಸಂಪರ್ಕವನ್ನು ಪಡೆದಿವೆ. ಇವುಗಳಲ್ಲಿ ಸುಮಾರು 12 ಕಾಲನಿಗಳಿಗೆ ಕಾಂಕ್ರಿಟ್ ರಸ್ತೆಗಳ ನಿರ್ಮಾಣವನ್ನು ಸ್ಥಳೀಯ ಆಡಳಿತ ನಿರ್ಮಿಸಿರುವುದನ್ನ ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಸಂಶೋಧಕನಿಂದ ಗುರುತಿಸಲಾಗಿದೆ. 9 ಕಾಲನಿಗಳು ಡಾಂಬಾರು ನಿರ್ಮಿತ ರಸ್ತೆಗಳನ್ನು ಹೊಂದಿದ್ದು ಕೆಲವು ದುರಸ್ತಿಯಲ್ಲಿವೆ. ಇನ್ನುಳಿದ ಕಾಲನಿಗಳು ಕಚ್ಚಾ ರಸ್ತೆಯನ್ನೇ ಅವಲಂಬಿಸಿರುವುದನ್ನು ಅಧ್ಯಯನದಿಂದ ಗುರುತಿಸಲಾಗಿದೆ.

## ಸಿಲೋನ್ ತೋಟಕಾರ್ಮಿಕರ ಆರೋಗ್ಯ ಸ್ಥಿತಿಗತಿ

- ರಬ್ಬರ್ ತೋಟ ಕಾರ್ಮಿಕರು ಕೆಲಸದ ಸ್ವರೂಪ ಮತ್ತು ಭಂಗಿಗಳಿಂದಾಗಿ ವಿವಿಧ ಸ್ನಾಯು ಸಂಬಂಧಿ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಪ್ರಸ್ತುತ ಅಧ್ಯಯನಕ್ಕೊಳಪಡಿಸಿದ ಒಟ್ಟು ಕಾರ್ಮಿಕರಲ್ಲಿ ಶೇಕಡಾ 83.25 ರಷ್ಟು ಕಾರ್ಮಿಕರು ಸೊಂಟ ನೋವು, ಶೇ. ಶೇಕಡಾ 80.25% ಕಾರ್ಮಿಕರು ಮಂಡಿನೊವನ್ನು ಹಾಗು ಶೇಕಡಾ 73.25% ಬೆನ್ನು ನೋವಿನ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಅಲ್ಲದೆ ಶೇಕಡಾ 74.25% ಕಾರ್ಮಿಕರು ಭುಜ ನೋವನ್ನು, ಶೇಕಡಾ 69.75 ಕಾರ್ಮಿಕರು ಕುತ್ತಿಗೆ ನೋವನ್ನು, ಶೇಕಡಾ 60.75 ಕಾರ್ಮಿಕರು ಮಣಿಕಟ್ಟು ನೋವನ್ನು, ಶೇ. 50.25% ಕಾರ್ಮಿಕರು ತಲೆನೋವನ್ನು ಎದುರಿಸುತ್ತಿದ್ದಾರೆ. ಮುಂದುವರೆದು ಶೇಕಡಾ 49% ಕಾರ್ಮಿಕರು ಕಣ್ಣು ಉರಿಯಂತಹ ಸಮಸ್ಯೆಗಳನ್ನು, ಶೇಕಡಾ 47.5% ಕಾರ್ಮಿಕರು ಸ್ನಾಯು ಹಿಡಿತ ದಂತಹ

ಸಮಸ್ಯೆಗಳನ್ನು, ಶೇಕಡಾ 34.5 ಕಾರ್ಮಿಕರು ಉಸಿರಾಟದ ಸಮಸ್ಯೆಗಳನ್ನು, ಶೇಕಡಾ 13% ಕಾರ್ಮಿಕರು ಚರ್ಮ ಸಂಬಂಧಿ ಮತ್ತು ಶೇಕಡಾ 9.75 ಕಾರ್ಮಿಕರು ಹೊಟ್ಟೆ ನೋವಿನ ಸಮಸ್ಯೆಗಳನ್ನು ಎದುರಿಸುತಿದ್ದಾರೆ. ಆದ್ದರಿಂದ ತೋಟಕಾರ್ಮಿಕರು ಸ್ನಾಯು ಸಂಬಂಧಿ ಸಮಸ್ಯೆಗಳಿಂದ, ಮುಖ್ಯವಾಗಿ ರಬ್ಬರ್ ತೋಟ ಕಾರ್ಮಿಕರು ಎದುರಿಸುತ್ತಿದ್ದಾರೆ.

- ಕೆ.ಎಫ್.ಡಿ.ಸಿ ರಬ್ಬರ್ ತೋಟದಲ್ಲಿ ಕೆಲಸ ಮಾಡುತ್ತಿರುವ ಮಹಿಳಾ ಕಾರ್ಮಿಕರು ಕೆಲಸದ ಸ್ವರೂಪ ಮತ್ತು ಕೆಲಸದ ಭಂಗಿಗಳಿಂದಾಗಿ ಎದುರಿಸುತ್ತಿರುವ ದೈಹಿಕ ಆರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಇದರಂತೆ ಶೇಕಡಾ 91.39 (223) ರಷ್ಟು ಮಹಿಳಾ ಕಾರ್ಮಿಕರು ಸೊಂಟ ನೋವು, ಶೇಕಡಾ 90.57 (221) ರಷ್ಟು ಕಾರ್ಮಿಕರು ಕತ್ತು ನೋವಿನಂತಹ ಸಮಸ್ಯೆ ಇರುವ ಬಗ್ಗೆ ಪ್ರತಿಕ್ರಿಯಿಸಿದ್ದಾರೆ. ಅಲ್ಲದೆ ಶೇಕಡಾ 86.47 (211) ಕಾರ್ಮಿಕರು ಬೆನ್ನು ನೋವು, ಶೇಕಡಾ 82.78 (202) ಕಾರ್ಮಿಕರು ಮಂಡಿ ನೋವಿರುವ ಬಗ್ಗೆ ಪ್ರತಿಕ್ರಿಯಿಸಿದ್ದಾರೆ. ಮುಂದುವರೆದು ಶೇಕಡಾ 64.34 (157) ಕಾರ್ಮಿಕರು ಮಣಿಕಟ್ಟು ನೋವು, ಶೇಕಡಾ 52.86 (129) ಕಾರ್ಮಿಕರು ಹೊಟ್ಟೆ ನೋವಿರುವ ಬಗ್ಗೆ ಅಭಿಪ್ರಾಯಿಸಿದ್ದಾರೆ. ಅಲ್ಲದೆ ಶೇಕಡಾ 50.4 (123) ಕಾರ್ಮಿಕರು ಸ್ನಾಯು ಹಿಡಿತ, ಶೇಕಡಾ 39.75 (97) ಕಾರ್ಮಿಕರು ಭುಜನೋವು ಮತ್ತು ಶೇಕಡಾ 28.27 (69) ಕಾರ್ಮಿಕರು ಎದೆ ನೋವಿನಂತಹ ಸಮಸ್ಯೆಗಳನ್ನು ಎದುರಿಸುತ್ತಿರುವುದನ್ನು ಅಧ್ಯಯನದಿಂದ ಗುರುತಿಸಲಾಗಿದೆ.
- ರಬ್ಬರ್ ತೋಟಗಳ ಕೆಲಸದ ಸ್ವರೂಪ ಮತ್ತು ವಾತಾವರಣದ ಭಾಗವಾಗಿ ಮೂರ್ತೆ ಕಾರ್ಮಿಕರು ಆರೋಗ್ಯ ಸಮಸ್ಯೆಗಳಿಗೊಳಗಾಗುತ್ತಾರೆ. ಮುಖ್ಯವಾಗಿ ಶೇಕಡಾ 46.15 (72) ಪುರುಷ ಕಾರ್ಮಿಕರು ಮತ್ತು ಶೇಕಡಾ 65.16 (159) ಮಹಿಳಾ ಕಾರ್ಮಿಕರು ಸೇರಿದಂತೆ ಸರಾಸರಿ ಶೇಕಡಾ 57.75 (231) ಕಾರ್ಮಿಕರು ತಲೆನೋವಿನ ಸಮಸ್ಯೆಯನ್ನು ಎದುರಿಸುತಿದ್ದಾರೆ. ಬಹುಮುಖ್ಯವಾಗಿ ರಬ್ಬರ್ ಮೂರ್ತೆಗಾರಿಕೆಯು ಮುಂಜಾವಿನ ಮೊದಲೇ ಪ್ರಾರಂಭವಾಗುವುದರಿಂದ ಕಾರ್ಮಿಕರು ಅರೆ ನಿದ್ರೆಯಲ್ಲಿ ಮೂರ್ತೆಗಾರಿಕೆ ಪ್ರಾರಂಭಿಸಿದಲ್ಲಿ, ಹಸಿದ ಹೊಟ್ಟೆಯಲ್ಲಿ ಕೆಲಸ ಪ್ರಾರಂಭಿದಲ್ಲಿ ತಲೆ ನೋವಿನಂತಹ ಸಮಸ್ಯೆಗಳನ್ನು ಎದುರಿಸುತ್ತಿರುವುದನ್ನು ಅಧ್ಯಯನದಿಂದ ಗುರುತಿಸಲಾಗಿದೆ.
- ರಬ್ಬರ್ ತೋಟಗಳಲ್ಲಿ ಮೂರ್ತೆ ಮೂಲಕ ಸಂಗ್ರಹಿಸಿದ ಹಾಲನ್ನು ದ್ರವರೂಪದಲ್ಲಿ ಕಾಯ್ದಿಡಲು ಬಳಸುವ ಅಮೋನಿಯ ದ್ರಾವಣವು ಕಾರ್ಮಿಕರಿಗೆ ಉಸಿರಾಟದ ಸಮಸ್ಯೆಯನ್ನು ತಂದೊಡ್ಡುತ್ತವೆ.

ಅಧ್ಯಯನಕ್ಕೊಳಪಡಿಸಿದ ಒಟ್ಟು ಕಾರ್ಮಿಕರಲ್ಲಿ ಶೇಕಡಾ 71.29 (112) ಪುರುಷ ಕಾರ್ಮಿಕರು ಮತ್ತು ಶೇಕಡಾ 89.34 (218) ಮಹಿಳಾ ಕಾರ್ಮಿಕರು ಉಸಿರಾಟದ ಸಮಸ್ಯೆಯನ್ನು ಗುರುತಿಸಲಾಗಿದೆ.

- ಅಧ್ಯಯನಕ್ಕೊಳಪಡಿಸಿದ ಒಟ್ಟು ಕಾರ್ಮಿಕರಲ್ಲಿ ಸರಾಸರಿ ಶೇಕಡಾ 53 (212) ಕಾರ್ಮಿಕರು ತುರಿಕೆಯಂತಹ ಸಮಸ್ಯೆಗಳನ್ನು, ಶೇಕಡಾ 69.5 (278) ಕಾರ್ಮಿಕರು ಅಲರ್ಜಿಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಪ್ರಮುಖವಾಗಿ ರಬ್ಬರ್ ತೋಟವು ಅರಣ್ಯದ ಅಂಚಿನಲ್ಲಿ ಗುರುತಿಸಿಕೊಂಡಿದ್ದು, ವಿವಿಧ ರೀತಿಯ ನುಸಿ, ಹುಳಗಳು, ಕೀಟಗಳು, ಸೊಳ್ಳೆಗಳು, ಜೇನು ನೊಣಗಳ ಕಡಿತವು ಕಾರ್ಮಿಕರಲ್ಲಿ ತುರಿಕೆ ಮತ್ತು ಅಲರ್ಜಿಯಂತಹ ಸಮಸ್ಯೆಗಳನ್ನು ಉಂಟು ಮಾಡುತ್ತವೆ. ಮಾತ್ರವಲ್ಲ ರಬ್ಬರ್ ಹಾಲನ್ನು ದ್ರವರೂಪದಲ್ಲಿ ಕಾಯ್ದಿಡಲು ಬಳಸುವ ಅಮೋನಿಯ ದ್ರಾವಣ ದೇಹದ ಮೇಲೆ ಉಂಟುಮಾಡುವ ಪರಿಣಾಮವು ತುರಿಕೆ ಮತ್ತು ಅಲರ್ಜಿಯನ್ನು ಉಂಟು ಮಾಡುತ್ತವೆ ಎಂಬುದನ್ನು ಅಧ್ಯಯನದಿಂದ ಗುರುತಿಸಲಾಗಿದೆ.
- ಕೆ.ಎಫ್.ಡಿ.ಸಿ ರಬ್ಬರ್ ತೋಟ ಕಾರ್ಮಿಕರು ಮಾನಸಿಕ ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಮುಖ್ಯವಾಗಿ ಒತ್ತಡ, ಆತಂಕ, ಭಯ, ಖಿನ್ನತೆ, ಮನಸ್ಥಿತಿ ಬದಲಾವಣೆಯಂತಹ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಪ್ರಮುಖವಾಗಿ ರಬ್ಬರ್ ಕಾರ್ಮಿಕರು ಅರಣ್ಯಕ್ಕೆ ಅಂಟಿಕೊಂಡಿರುವ ಪ್ರದೇಶದಲ್ಲಿ ಕನಿಷ್ಠ 2 ಹೆಕ್ಟೇರ್ ವ್ಯಾಪ್ತಿಯಲ್ಲಿ ಏಕಾಂಗಿಯಾಗಿ ಕಾರ್ಯನಿರ್ವಹಿಸಬೇಕಾದುದು ಕಾರ್ಮಿಕರಲ್ಲಿ ಭಯ ಮತ್ತು ಆತಂಕವನ್ನು ಸೃಷ್ಟಿ ಮಾಡಿವೆ. ಮುಖ್ಯವಾಗಿ ಹಾವುಗಳು, ಜೇನು ಹಾಗೂ ಇತರ ವಿಷಕಾರಿ ಜಂತುಗಳ ಕಡಿತದ ಭಯ ಮತ್ತು ಆತಂಕ ಕಾರ್ಮಿಕರಲ್ಲಿ ಸದಾ ಜಾಗರೂಕವಾಗಿರುತ್ತದೆ. ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಸುಮಾರು 17 ಕಾರ್ಮಿಕರು ಹಾವು ಕಚ್ಚಿದಂತಹ ಪ್ರಕರಣಗಳ ಕುರಿತಂತೆ ಮತ್ತು 3 ಕಾರ್ಮಿಕರು ಜೇನು ನೊಣಗಳು ಕಡಿಸಿಕೊಂಡಿರುವ ಪ್ರಕರಣಗಳನ್ನು ಅಧ್ಯಯನದಿಂದ ಗುರುತಿಸಲಾಗಿದೆ.
- ಒಟ್ಟು ಮಾಹಿತಿದಾರರಲ್ಲಿ ಶೇಕಡಾ 37.75 ಕಾರ್ಮಿಕರು ಯಾವುದೇ ಕೆಟ್ಟ ಚಟಗಳನ್ನು ಹೊಂದಿಲ್ಲವೆಂದು ಅಭಿಪ್ರಾಯಿಸಿದ್ದಾರೆ. ಶೇಕಡಾ 14.25% ರಷ್ಟು ಕಾರ್ಮಿಕರು ಮದ್ಯಪಾನ ಸೇವನೆಯ ಚಟಗಳನ್ನು ಹೊಂದಿದ್ದರೆ, ಶೇಕಡಾ 4.75 ಕಾರ್ಮಿಕರು ಧೂಮಪಾನ ಸೇವನೆಯ ಚಟಗಳು ಇರುವ ಕುರಿತು ಅಭಿಪ್ರಾಯಪಡಿಸಿದ್ದಾರೆ. ಇದರಂತೆ ಶೇಕಡಾ 43.25% ಕಾರ್ಮಿಕರು ಗುಟ್ಕಾ ಮತ್ತು ವೀಳ್ಯದೆಲೆ ಅಡಿಕೆ ಸೇವನೆಯ ಚಟಗಳನ್ನು ಹೊಂದಿದ್ದಾರೆ.

- ಪ್ರತೀ ದಿನ 2 ಹೆಕ್ಟೇರ್ ವಿಸ್ತೀರ್ಣದಲ್ಲಿ 350 ರಬ್ಬರ್ ಮರವನ್ನು ಮೂರ್ತೆ ಮಾಡಿ ರಬ್ಬರ್ ಸ್ಕ್ರೇಪ್ ಸಂಗ್ರಹಿಸಿ, ಬೆನ್ನ ಹಿಂದಿನ ಚೀಲದಲ್ಲಿ ( ಗರಿಷ್ಠ 4 ಕಿ.ಗ್ರಾಂ) ಭಾರ ಹಾಕಿಕೊಂಡು ಮತ್ತೆ ಅಷ್ಟೇ ವಿಸ್ತೀರ್ಣದಲ್ಲಿ ಪುನಃ ಹಾಲು ಸಂಗ್ರಹಿಸಿ ತಲೆ ಮೇಲೆ ಹೊತ್ತು ಹಾಲು ಸಂಗ್ರಹಣಾ ಘಟಕಕ್ಕೆ ತಲುಪಿಸಬೇಕಾದುದರಿಂದ ಹಾಗೂ ರಬ್ಬರ್ ಮರಗಳು ಗುಡ್ಡ ಪ್ರದೇಶದಲ್ಲಿದ್ದು ಮೂರ್ತೆಗಾಗಿ ಪುನಃ ಪುನಃ ಹತ್ತಿ–ಇಳಿಯಬೇಕಾದುದರಿಂದ ಬೆನ್ನು ನೋವು ಸೊಂಟ ನೋವು ಹಾಗೂ ಮಂಡಿನೋವಿನಂತಹ ಸಮಸ್ಯೆಗಳಿಗೆ ಕಾರಣವಾಗುತ್ತವೆ. ಮಾತ್ರವಲ್ಲ ಮೂರ್ತೆಗಾರಿಕೆಯ ಸಂದರ್ಭದಲ್ಲಿ ಪುನರಾವರ್ತಿತ ರೀತಿಯಲ್ಲಿ ಮಣಿಕಟ್ಟನ್ನು, ಭುಜ, ತಲೆ ಭಾಗ ಸೇರಿದಂತೆ ಇಡಿ ದೇಹವನ್ನು ಹೊಂದಿಸಿಕೊಳ್ಳಬೇಕಾದುದರಿಂದ ಪುರುಷರಿಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಮಹಿಳಾ ಕಾರ್ಮಿಕರು ಸ್ನಾಯು ಸೆಳೆತ, ಮಣಿಕಟ್ಟು, ಮಣಿಗಂಟು, ಕುತ್ತಿಗೆ ನೋವಿನಂತಹ ಸಮಸ್ಯೆಗಳನ್ನು ಎದುರಿಸಲು ಕಾರಣವಾಗಿವೆ. ದಿನದ 8 ಗಂಟೆಗಳ ಕಾಲ ಗುಡ್ಡ ಹತ್ತಿ ಇಳಿಯುವ ಕೆಲಸವನ್ನು ಪುನರಾವರ್ತಿತ ನೆಲೆಯಲ್ಲಿ ಮಾಡಬೇಕಾದುದರಿಂದ ಉಸಿರಾಟದ ಸಮಸ್ಯೆಗಳು ಕಾರ್ಮಿಕರನ್ನು ನಿತ್ಯ ಕಾಡುತ್ತಿರುವುದನ್ನು ಅಧ್ಯಯನದಿಂದ ಗುರುತಿಸಲಾಗಿದೆ.
- ಕೆ.ಎಫ್.ಡಿ.ಸಿ ನಿಗಮದ ತೋಟ ಕಾರ್ಮಿಕರ ಆರೋಗ್ಯ ರಕ್ಷಣೆಗಾಗಿ ನಿಗಮದ ವತಿಯಿಂದ ಉದ್ಯಾನವನ ಆಸ್ಪತ್ರೆಯು ಸುಳ್ಯ ಪಟ್ಟಣದಲ್ಲಿ 24*7 ನೆಲೆಯಲ್ಲಿ ಕಾರ್ಯಚರಿಸುತ್ತಿದೆ. ಪ್ರಸ್ತುತ ಉದ್ಯಾನವನ ಆಸ್ಪತ್ರೆಯಲ್ಲಿ 15 ಹಾಸಿಗೆಗಲಿದ್ದು, ಓರ್ವ ಹಿರಿಯ ಶಸ್ತ್ರ ಚಿಕಿತ್ಸಾ ತಜ್ಞರು, ಓರ್ವ ನಿವೃತ್ತ ವೈದ್ಯರು ರಾತ್ರಿಪಾಳಿಯಲ್ಲಿ ಸೇರಿದಂತೆ ಮೂರು ಮಂದಿ ದಾದಿಯರೊಂದಿಗೆ ಕಾರ್ಯಚರಿಸುತ್ತಿದೆ. ಜೊತೆಗೆ ಸುಬ್ರಹ್ಮಣ್ಯ ರಬ್ಬರ್ ವಲಯದಲ್ಲಿ ಒಂದು ಮತ್ತು ಸುಳ್ಯ ಹಾಗೂ ಐವರನಾಡು ರಬ್ಬರ್ ವಲಯಗಳಿಗೆ ಒಂದರಂತೆ ಆಂಬ್ಯುಲೆನ್ಸ್‌ಗಳು ತುರ್ತು ಚಿಕಿತ್ಸಾ ಕಾರ್ಯ ನಿಮಿತ್ತ ಕಾರ್ಯಚರಿಸುತ್ತಿರುವುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

## ಸಿಲೋನ್ ತೋಟ ಕಾರ್ಮಿಕರ ರಾಜಕೀಯ ಭಾಗವಹಿಸುವಿಕೆ

- ಸಿಲೋನ್ ತೋಟಕಾರ್ಮಿಕ ಪುನರ್ವಸಿತರು ಸ್ಥಳೀಯ ರಾಜಕೀಯದಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತಿದ್ದಾರೆ. ಬಹುಮುಖ್ಯವಾಗಿ ಸಿಲೋನಿನ ಪುನರ್ ಸಂಜಾತೀಕರಣ ಮತ್ತು ಪುನರ್ವಸತೀಕರಣ ಪ್ರಕ್ರಿಯೆಗಳಲ್ಲಿ ಮತ್ತು ಪ್ರಸ್ತುತ ಅವರು ಎದುರಿಸುತ್ತಿರುವ ಸಮಸ್ಯೆಗಳನ್ನು ರಾಜಕೀಯ ಒತ್ತಡಗಳ

ಮೂಲಕ ಪರಿಹರಿಸಿಕೊಳ್ಳಲು ಸಾಧ್ಯವಾಗಿರುವುದು, ರಾಜಕೀಯದಲ್ಲಿ ಸಿಲೋನ್ ತೋಟ ಕಾರ್ಮಿಕರು ವಿಶೇಷ ಆಸಕ್ತಿ ನೀಡುತ್ತಿರುವುದನ್ನು ಅಧ್ಯಯನದಿಂದ ಗುರುತಿಸಲಾಗಿದೆ.

- ಜಾತಿ ಮತ್ತು ಆದಾಯ ಪ್ರಮಾಣಪತ್ರ ಪಡೆಯುವಲ್ಲಿ, ವೇತನ ನಿಗದಿ ನಿರ್ಧಾರದಲ್ಲಿ, ವಸತಿ ಸಮಸ್ಯೆಯ ತಾತ್ಕಾಲಿಕ ಪರಿಹಾರ ಹಾಗೂ ಇನ್ನಿತರ ಸಮಸ್ಯೆಗಳು ರಾಜಕೀಯ ಸಂಘಟಿತ ಒತ್ತಡದ ಭಾಗವಾಗಿ ಪರಿಹಾರವಾಗಿರುವುದನ್ನು ಅಧ್ಯಯನದಲ್ಲಿ ಗುರುತಿಸಲಾಗಿದೆ. ಮಾತ್ರವಲ್ಲ ಪುನರ್ ಸಂಜಾತ ಸಮುದಾಯಗಳ ಸದಸ್ಯರು ಗ್ರಾಮ ಪಂಚಾಯತ್, ಮಂಡಲ ಪಂಚಾಯತ್, ಜಿಲ್ಲಾ ಪಂಚಾಯತ್ ಸದಸ್ಯರಾಗಿ ಆಯ್ಕೆಯಾಗಿ ಕಾರ್ಯನಿರ್ವಹಿಸಿರುವುದನ್ನು ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ. ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಒಟ್ಟು ಆರು ಗ್ರಾಮ ಪಂಚಾಯತ್ ಸದಸ್ಯರಾಗಿ ಕಾರ್ಯ ನಿರ್ವಹಿಸುತ್ತಿರುವುದನ್ನು ಕಂಡುಕೊಳ್ಳಲಾಗಿದೆ.

## ಸಿಲೋನ್ ತೋಟ ಕಾರ್ಮಿಕರ ಸಮುದಾಯ ಸಂಘಟನೆ

- ಪುನರ ಸಂಜಾತರ ಸಮುದಾಯ ಸಂಘಟನೆಯು ರಚನಾತ್ಮಕ ರೂಪವನ್ನು ಪಡೆದುಕೊಂಡಿದ್ದು, ದಕ್ಷಿಣ ಕನ್ನಡ 'ತಮಿಳು ಸೇವಾ ಸಂಘ' ಎಂಬ ಹೆಸರಿನಲ್ಲಿ ಪುನರ್ ಸಂಜಾತರ ಸಮುದಾಯ ಸಂಘಟನೆಯು ಕಾರ್ಯನಿರ್ವಹಿಸುತ್ತಿದೆ. ಸಂಘವು ವಾರ್ಷಿಕ ನೆಲೆಯಲ್ಲಿ ಸಾಂಸ್ಕೃತಿಕ ಮತ್ತು ಕ್ರೀಢಾ ಸ್ಪರ್ಧೆಗಳನ್ನು ಸಮುದಾಯದ ಸದಸ್ಯರಿಗೆ ಏರ್ಪಡಿಸುತ್ತದೆ. ಪ್ರತೀ ವರ್ಷ ಶಿಕ್ಷಣ, ಸಮಾಜಸೇವೆ ಮತ್ತು ಇನ್ನಿತರ ಕ್ಷೇತ್ರಗಳಲ್ಲಿ ವಿಶೇಷ ಸಾಧನೆ ಮಾಡಿದ ಸಮುದಾಯದ ಸದಸ್ಯರಿಗೆ ಗೌರವ, ಪ್ರೋತ್ಸಾಹಧನ ಮತ್ತು ಸನ್ಮಾನಗಳನ್ನು ಏರ್ಪಡಿಸುತ್ತಾರೆ. ನೈಸರ್ಗಿಕ ವಿಕೋಪಗಳು ಸಂಭವಿಸಿದಾಗ ತಮಿಳು ಸೇವಾ ಸಂಘವು ಸಮುದಾಯದ ವತಿಯಿಂದ ಪರಿಹಾರನಿಧಿಯನ್ನು, ಸಮುದಾಯದ ಮತ್ತು ಸ್ಥಳೀಯ ದೇವಸ್ಥಾನಗಳ ಬ್ರಹ್ಮಕಲಶದಲ್ಲಿ ಸಂಘವು ಸಕ್ರೀಯವಾಗಿ ಪಾಲ್ಗೊಳ್ಳುತ್ತಿರುವುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

## ಸಿಲೋನ್ ತೋಟಕಾರ್ಮಿಕರ ಸಾಮಾಜಿಕ ಜೀವನ ಪದ್ಧತಿ

- ಕುಟುಂಬವು ಸಿಲೋನ್ ತೋಟ ಕಾರ್ಮಿಕರ ಸಾಮಾಜಿಕ ಸಂಘಟನೆಯ ಮೂಲ ಆಧಾರ ಸ್ಥಂಭ. ಪುನರ್ವಸಿತ ತಮಿಳರ ಕುಟುಂಬದ ಸದಸ್ಯತ್ವವು ಹುಟ್ಟಿನ ಮುಖೇನ ಅಥವಾ ವಿವಾಹದ ಮುಖೇನ ಪಡೆಯಬಹುದಾಗಿದೆ. ಕುಟುಂಬವು ತಂದೆ, ತಾಯಿ ಮತ್ತು ಅವರ ಅವಿವಾಹಿತ ಮಕ್ಕಳನ್ನು ಒಳಗೊಂಡಿರುವುದು. ಪುನರ್ವಸಿತ ತಮಿಳರಲ್ಲಿ ಕುಟುಂಬವನ್ನು **'ಕುಡುಂಬಂ'** ಎಂದು ಮನೆಯನ್ನು

**'ವೀಡು'** ಎಂದು ಕರೆಯುತ್ತಾರೆ. ಪುನರ್ವಸಿತ ಕಾರ್ಮಿಕರ ಬಹು ಕುಟುಂಬಗಳು ವಿಭಕ್ತ ಕುಟುಂಬಗಳಾಗಿದ್ದು ತಂದೆ, ತಾಯಿ ಮತ್ತು ಅವರ ಅವಿವಾಹಿತ ಮಕ್ಕಳಿಂದ ಕೂಡಿರುವುದನ್ನು ಅಧ್ಯಯನದಿಂದ ಗುರುತಿಸಲಾಗಿದೆ.

- ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ 17 ಅಂತರ್ಜಾತಿ ಮತ್ತು ಅಂತರ್ ಧರ್ಮೀಯ ವಿವಾಹಗಳು ಗುರುತಿಸಲ್ಪಟ್ಟಿವೆ. ಅಂತರ್ಜಾತಿ ವಿವಾಹಗಳು ಪೂಜಾರಿ, ಗೌಡ, ಮೊಗೇರ, ಆದಿದ್ರಾವಿಡ, ಬಂಟ, ಮಣಿಯಾಣಿ, ಕುಲಾಲ್ ಸಮುದಾಯಗಳೊಂದಿಗೆ ನಡಿದಿರುವುದು ಅಧ್ಯಯನದಲ್ಲಿ ಕಂಡುಬಂದಿದೆ.
- ವರದಕ್ಷಿಣೆಯು ಪುನರ್ ಸಂಜಾತರಲ್ಲಿ ಹಾಸುಹೊಕ್ಕಾಗಿದೆ. ವರದಕ್ಷಿಣೆಯು ವಿವಾಹದ ವಿಧಿ ವಿಧಾನವಾಗಿ ಬದಲಾಗಿದೆ. ಒಳ್ಳೆಯ ಮನೆತನದ ಜೊತೆಗೆ ಸಂಬಂಧವನ್ನು ಕಂಡುಕೊಳ್ಳಬೇಕಾದರೆ ವರದಕ್ಷಿಣೆ ಅನಿವಾರ್ಯ ಎಂಬುದನ್ನು ಸಂದರ್ಶನದಲ್ಲಿ ಗುರುತಿಸಲಾಗಿದೆ. ಸ್ಥಳೀಯ ಕಾಲನಿಗಳಿಂದಲೇ ವಿವಾಹವಾದಲ್ಲಿ ವರದಕ್ಷಿಣೆ ಪ್ರಮಾಣ ಕಡಿಮೆಯದಾಗಿರುತ್ತದೆ. ಅಂತರ್ಜಾತಿ ವಿವಾಹಗಳು ಹೆಚ್ಚುತ್ತಿರುವುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.
- ದಕ್ಷಿಣ ಕನ್ನಡದಲ್ಲಿನ ಸಿಲೋನ್ ತಮಿಳು ಪುನರ್ವಸಿತರು ಧಾರ್ಮಿಕ ಆಚರಣೆಯ ಮೇಲೆ ಗಾಢ ನಂಬಿಕೆಯುಳ್ಳವರಾಗಿದ್ದಾರೆ. ಪುನರ್ ಸಂಜಾತ ತಮಿಳರು ಮುತ್ತು ಮಾರಿಯಮ್ಮ ದೇವಿಯ ಆರಾಧಕರು. ಮಾತ್ರವಲ್ಲದೆ ಮುನೀಶ್ವರನ್ ದೇವರ ಆರಾಧಕರೂ ಆಗಿದ್ದಾರೆ. ಹೆಚ್ಚಿನ ತಮಿಳರು ಕುಲದೇವರಾಗಿ ಮುನೀಶ್ವರನ್, ಕುರುಪ್ಪ್ ಸ್ವಾಮಿ, ಕಾಲಿಯಮ್ಮ ಮತ್ತು ಪದಯಾಚಿ ಅಮ್ಮನ್ ದೇವರುಗಳನ್ನು ಆರಾಧಿಸುತ್ತಾರೆ. ಮಾತ್ರವಲ್ಲದೆ ವಿಷ್ಣು, ಶಿವ, ಪಿಳ್ಳೈಯಾರ್, ಮುರುಗನ್, ಶಕ್ತಿ, ಲಕ್ಷ್ಮಿ ಮತ್ತು ಸರಸ್ವತಿಯನ್ನು ಆರಾಧಿಸುತ್ತಾರೆ. ಹಿಂದು ತಮಿಳರ ಪ್ರತೀ ಮನೆಯಲ್ಲಿಯೂ ಅವರು ಆರಾಧಿಸುವ ದೇವ ದೇವತೆಗಳ ಚಿತ್ರಗಳನ್ನು ಹಾಗೂ ಪ್ರತ್ಯೇಕ ದೇವರ ಕೋಣೆ ಇರುವುದನ್ನು ಕ್ಷೇತ್ರಕಾರ್ಯದಿಂದ ತಿಳಿದುಬಂದಿದೆ.

**ಪುನರ್ವಸತಿ ಯೋಜನೆಯ ಕುರಿತಂತೆ ಸಿಲೋನ್ ತೋಟ ಕಾರ್ಮಿಕರ ಅಭಿಪ್ರಾಯ**

- ಸಿಲೋನ್ ಪುನರ್ ಸಂಜಾತರ ಪುನರ್ವಸತಿ ಯೋಜನೆಯ ಯಶಸ್ವಿಯು ತೃಪ್ತಿಕರವಾಗಿಲ್ಲದಿರುವುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ. ಶೇಕಡಾ 47.8 ಕಾರ್ಮಿಕರು ತೃಪ್ತರಾಗಿದ್ದರೆ, ಶೇಕಡಾ 52.2 ಕಾರ್ಮಿಕರು ಅಸಂತುಷ್ಟರಾಗಿದ್ದಾರೆ.

- ಸಿಲೋನ್ ಪುನರ್ ಸಂಜಾತ ಪುನರ್ವಸಿತರು ಭಾರತದಲ್ಲಿ ಜೀವಿಸಿತ್ತಿರುವುದಕ್ಕೆ ಶೇಕಡಾ 100 ಸಂತೃಪ್ತಿಯನ್ನು ವ್ಯಕ್ತಪಡಿಸಿದ್ದಾರೆ. ರಾಷ್ಟ್ರರಹಿತರಾದವರಿಗೆ ಪೌರತ್ವವನ್ನು ನೀಡಿ ಬದುಕು ಕಟ್ಟಿಕೊಟ್ಟಿದ್ದಾರೆ ಎಂಬ ಧನ್ಯತೆ ಭಾವನೆಯನ್ನು ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.
- ಶೇಕಡಾ 55.75 ಕಾರ್ಮಿಕರು ನಿಗಮದ ಉಚಿತ ವಸತಿಯ ಕುರಿತು ಸಂತುಷ್ಟರಾಗಿದ್ದರೆ, ಶೇಕಡಾ 44.25 ರಷ್ಟು ಕಾರ್ಮಿಕರು ಅಸಂತುಷ್ಟರಾಗಿದ್ದಾರೆ. ಶೇಕಡಾ 82.5 ರಷ್ಟು ಕಾರ್ಮಿಕರು ಕಾಲನಿ ಜೀವನದ ಕುರಿತು ಸಂತುಷ್ಟರಾಗಿದ್ದರೆ, ಶೇಕಡಾ 17.5 ರಷ್ಟು ಕಾರ್ಮಿಕರು ಅಸಂತುಷ್ಟರಾಗಿರುವುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.
- ನಿಗಮದ ಪ್ರಸ್ತುತ ವೇತನದ ಕುರಿತಂತೆ ಶೇಕಡಾ 60.75 (243) ಕಾರ್ಮಿಕರು ತೃಪ್ತಿಯನ್ನು ವ್ಯಕ್ತಪಡಿಸಿದರೆ, ಶೇಕಡಾ 39.25 (157) ಕಾರ್ಮಿಕರು ತೃಪ್ತಿಯನ್ನು ವ್ಯಕ್ತಪಡಿಸಿದ್ದಾರೆ. ಪ್ರಸ್ತುತ ನಿಗಮ ಮತ್ತು ಕಾರ್ಮಿಕರ ಒಪ್ಪಂದದ ಭಾಗವಾಗಿ ರೂ 457/– ವೇತನ ಚಾಲ್ತಿಯಲ್ಲಿದೆ. ಪ್ರಮುಖವಾಗಿ ಖಾಸಗಿ ಕೃಷಿ ವಲಯದಲ್ಲಿನ ಮಹಿಳಾ ಕಾರ್ಮಿಕರಿಗೆ ರೂ.300/– ಚಾಲ್ತಿಯಲ್ಲಿದ್ದರೆ, ನಿಗಮದಲ್ಲಿ ಅದಕ್ಕಿಂತ ಹೆಚ್ಚು (ರೂ. 457) ವೇತನ ದೊರಕುವ ಕಾರಣಕ್ಕಾಗಿ ಸಂತುಷ್ಟರಾಗಿದ್ದಾರೆ. ಇನ್ನು ಪುರುಷ ಕಾರ್ಮಿಕರಿಗೆ ಖಾಸಗೀ ವಲಯದಲ್ಲಿ ಹೆಚ್ಚಿನ ಬೇಡಿಕೆ ಇದ್ದು, ಕಟ್ಟಡ ನಿರ್ಮಾಣ ಕಾರ್ಯದಲ್ಲಿ ಕನಿಷ್ಠ ರೂ.600/– ವೇತನ ಸ್ಥಳೀಯ ಮಟ್ಟದಲ್ಲಿ ಚಾಲ್ತಿಯಲ್ಲಿದೆ. ಈ ಕಾರಣಕ್ಕಾಗಿ ಪುರುಷ ಕಾರ್ಮಿಕರು ಅಸಂತುಷ್ಟತೆಯನ್ನು ವ್ಯಕ್ತಪಡಿಸಿರುವುದನ್ನು ಅಧ್ಯಯನದಿಂದ ಗುರುತಿಸಲಾಗಿದೆ.
- ನಿಗಮದ ಉದ್ಯಾನವನ ಆಸ್ಪತ್ರೆ ನೀಡಲಾಗುತ್ತಿರುವ ವೈದ್ಯಕೀಯ ಸೌಲಭ್ಯಗಳ ಕುರಿತು ಪ್ರಶ್ನಿಸಲಾಗಿತ್ತು. ಶೇಕಡಾ 71.75 (287) ಕಾರ್ಮಿಕರು ಉದ್ಯಾನವನ ಆಸ್ಪತ್ರೆಯ ವೈಧ್ಯಕೀಯ ಸೌಲಭ್ಯಗಳ ಕುರಿತು ಸಂತುಷ್ಟರಾಗಿದ್ದರೆ, ಶೇಕಡಾ 28.25 (113) ಕಾರ್ಮಿಕರು ಅಸಂತುಷ್ಟರಾಗಿದ್ದಾರೆ. ಉದ್ಯಾನವನ ಆಸ್ಪತ್ರೆಯು ಕಾಲನಿ ಬೇಟಿ ಸಮರ್ಪಕವಾಗಿ ನಡೆಸುತ್ತಿಲ್ಲ ಎಂದು ಅಸಂತುಷ್ಟರಾದ ಕಾರ್ಮಿಕರಾಗಿದ್ದಾರೆ. ಮಾತ್ರವಲ್ಲ ವೈಧ್ಯಕೀಯ ರಜೆ ಮತ್ತು ಮೂರ್ತೆ ಕೆಲಸಕ್ಕೆ ಅಸಮರ್ಥ ಎಂಬ ಪ್ರಮಾಣಪತ್ರವನ್ನು ನೀಡದೇ ಇರುವ ಉದ್ಯಾನವನ ಆಸ್ಪತ್ರೆಯ ಕುರಿತು ಅಸಂತುಷ್ಟರಾದವರಾಗಿರುವುದನ್ನು ಅಧ್ಯಯನದಿಂದ ಗುರುತಿಸಲಾಗಿದೆ.
- ಅಧ್ಯಯನಕ್ಕೊಳಪಡಿಸಿದ ಒಟ್ಟು ಕಾರ್ಮಿಕರಲ್ಲಿ ಶೇಕಡಾ 78.75 ರಷ್ಟು ಕಾರ್ಮಿಕರು ನಿವೃತ್ತಿ ನಂತರದಲ್ಲಿ ನಿಗಮದ ಕಾಲನಿಯಲ್ಲಿಯೇ ಉಳಿದುಕೊಳ್ಳುವ ಕುರಿತು ಅಭಿಪ್ರಾಯ ವ್ಯಕ್ತಪಡಿಸಿದರೆ,

ಶೇಕಡಾ 12.25 ಕಾರ್ಮಿಕರು ಮನೆ, ಜಮೀನು ಖರೀದಿಸುವ ಆಲೋಚನೆಯಲ್ಲಿರುವುದನ್ನು ಹಾಗೂ ಶೇಕಡಾ 9 ರಷ್ಟು ಕಾರ್ಮಿಕರು ಇನ್ನೂ ನಿವೃತ್ತಿಯ ನಂತರದ ಜೀವನದ ಕುರಿತು ಯಾವುದೇ ನಿರ್ಧಾರವನ್ನು ಮಾಡಿಲ್ಲದ ಕುರಿತು ಕಂಡುಬಂದಿದೆ.

## ಸಿಲೋನ್ ತೋಟ ಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಗಳು

- **ಸ್ವಂತ ಮನೆ ಮತ್ತು ಜಮೀನಿನ ಸಮಸ್ಯೆ:** ಪ್ರಸ್ತುತ ಸಿಲೋನ್ ತೋಟ ಕಾರ್ಮಿಕರು ಕೆ.ಎಫ.ಡಿ.ಸಿ ನಿಗಮದ ಕೆಲಸದಿಂದ ನಿವೃತ್ತಿಯಾಗುತ್ತಿದ್ದು, ನಿಗಮದ ನೀಡಿದ ವಸತಿಯನ್ನು ಬಿಟ್ಟು ಕೊಡಬೇಕಾದುದರಿಂದ ತೋಟಕಾರ್ಮಿಕರು ಪ್ರಸ್ತುತ ವಸತಿಯ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಜೊತೆಗೆ ಕಳೆದ ಐದು ದಶಕಗಳಿಂದ ನಿಗಮದ ಸಾಲು ಮನೆಗಳಲ್ಲಿ ವಾಸಿಸುತ್ತಿದ್ದುದರಿಂದ ಸಿಲೋನ್ ತೋಟ ಕಾರ್ಮಿಕರು ಸ್ವಂತ ಭೂಮಿಯನ್ನು ಹೊಂದಿಲ್ಲ. ಈ ಕಾರಣದಿಂದ ನಿವೃತ್ತಿಯ ನಂತರ ಸ್ವಂತ ಮನೆ ಕಟ್ಟಲು ಭೂಮಿಯ ಸಮಸ್ಯೆಯನ್ನು ಎದುರಿಸುತ್ತಿರುವುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.
- **ಜಾತಿ ಪ್ರಮಾಣ ಪತ್ರದ ಸಮಸ್ಯೆ:** ಸಿಲೋನ್ ತೋಟ ಕಾರ್ಮಿಕರು ಜಾತಿಪ್ರಮಾಣ ಪತ್ರ ಪಡೆಯಲು ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಆದರೆ ಸತತ ಹೋರಾಟಗಳ ನಂತರ ಪರಿಶಿಷ್ಟ ಜಾತಿ ಸಮುದಾಯದ ತೋಟ ಕಾರ್ಮಿಕರು ಜಾತಿಪ್ರಮಾಣ ಪತ್ರವನ್ನು ಪಡೆಯಲು ಯಶಸ್ವಿಯಾದರೂ, ಹಿಂದುಳಿದ ವರ್ಗಗಳ ತೋಟ ಕಾರ್ಮಿಕರು ಇನ್ನೂ ಜಾತಿಪ್ರಮಾಣ ಪತ್ರ ಪಡೆದುಕೊಳ್ಳುವಲ್ಲಿ ಸಮಸ್ಯೆಯನ್ನು ಎದುರಿಸುತ್ತಿರುವುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.
- **ಉದ್ಯೋಗ ವರ್ಗಾವಣೆಯ ಸಮಸ್ಯೆ:** ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮವು 1971 ರಲ್ಲಿ ಸಿಲೋನ್ ತೋಟಕಾರ್ಮಿಕರಿಗೆ ನಿಗಮದ ರಬ್ಬರ್ ತೋಟದಲ್ಲಿ ಉಚಿತ ವಸತಿ, ಉದ್ಯೋಗ ಮತ್ತು ವಿದ್ಯುತ್ ಹಾಗು ಇತರೆ ಮೂಲಭೂತ ಸೌಕರ್ಯಗಳೊಂದಿಗೆ ಪುನರ್ವಸತಿ ಮಾಡಿತ್ತು. ಪ್ರತಿ ಕುಟುಂಬಕ್ಕೆ ಎರಡು ಉದ್ಯೋಗವನ್ನು, ಇದನ್ನು ಮುಂದಿನ ತಲೆಮಾರಿಗೆ ವರ್ಗಾಯಿಸುವ ಅವಕಾಶವನ್ನು ನೀಡಲಾಗಿತ್ತು. ಇದರಂತೆ ಮೊದಲ ತಲೆಮಾರಿನಿಂದ ಎರಡನೇ ತಲೆಮಾರಿಗೆ ನಂತರದ ವರ್ಷಗಳಲ್ಲಿ ಉದ್ಯೋಗದ ವರ್ಗಾವಣೆಯಾಗಿತ್ತು. ಆದರೆ ಪ್ರಸ್ತುತ ಮೂರನೇ ತಲೆಮಾರಿಗೆ ಕೆ.ಎಫ್.ಡಿ.ಸಿ ನಿಗಮ ಕೆಲಸದ ವರ್ಗಾವಣೆಯನ್ನು ತಡೆಹಿಡಿದಿದೆ. ಇದರಿಂದ ಸಿಲೋನ್ ತೋಟ ಕಾರ್ಮಿಕರು ನಿಗಮದ

ಕೆಲಸದ ವರ್ಗಾವಣೆಯ ಸಮಸ್ಯೆಯನ್ನು ಎದುರಿಸುತ್ತಿರುವುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

- **ಮಾತೃಭಾಷೆಯನ್ನು ಕಲಿಯುವಲ್ಲಿ ಸಮಸ್ಯೆ:** ಸಿಲೋನ್ ತೋಟ ಕಾರ್ಮಿಕರು ಮೂಲತಃ ತಮಿಳುನಾಡಿನರಾಗಿದ್ದು, ತಮಿಳು ಮಾತೃ ಭಾಷೆಯನ್ನಾಡುವವರಾಗಿದ್ದಾರೆ. ಆದರೆ ಪ್ರಸ್ತುತ ತಮಿಳು ಕಲಿಸುವ ತಮಿಳು ಶಿಕ್ಷಕರು ವಯೋ ನಿವೃತ್ತಿಯಾಗಿರುವುದರಿಂದ, ಮೂರನೇ ತಲೆಮಾರಿನ ಮಕ್ಕಳು ತಮಿಳು ಭಾಷೆ ಮಾತನಾಡಲು ಮಾತ್ರ ಸೀಮಿತವಾಗಿದ್ದಾರೆ. ಈ ಕಾರಣದಿಂದ ಸಿಲೋನ್ ತೋಟ ಕಾರ್ಮಿಕರು ಮಾತೃಭಾಷೆಯನ್ನು ಕಲಿಯುವಲ್ಲಿ ಸಮಸ್ಯೆಯನ್ನು ಎದುರಿಸುತ್ತಿರುವುದನ್ನು ಅಧ್ಯಯನದಿಂದ ಗುರುತಿಸಲಾಗಿದೆ.
- **ವೃತ್ತಿಚಲನೆ ಇಲ್ಲದಿರುವಿಕೆ:** ಸಿಲೋನ್ ತೋಟ ಕಾರ್ಮಿಕರು ಮೂರ್ತೆದಾರರಾಗಿ ಕೆಲಸವನ್ನು ಆರಂಭಿಸಿ ಮೂರ್ತೆದಾರರಾಗಿಯೇ ನಿವೃತ್ತರಾಗುತ್ತಿದ್ದಾರೆ. ಈ ಹಿಂದೆ ಮೇಸ್ತ್ರಿ ಹುದ್ದೆಗೆ ಹಿರಿಯ ಕಾರ್ಮಿಕರನ್ನು ನೇಮಿಸುತ್ತಿದ್ದರೂ, ಪ್ರಸ್ತುತ ವಿದ್ಯಾಭ್ಯಾಸದ ಅರ್ಹತೆಯ ಕಾರಣದಿಂದ ಮೇಸ್ತ್ರಿ ಹುದ್ದೆ ದೊರಕುತ್ತಿಲ್ಲ. ಆದ್ದರಿಂದ ತೋಟ ಕಾರ್ಮಿಕರು ವೃತ್ತಿಚಲನೆ ಇಲ್ಲದಿರುವ ಸಮಸ್ಯೆಯನ್ನು ಎದುರಿಸುತ್ತಿರುವುದನ್ನು ಅಧ್ಯಯನದಿಂದ ಗುರುತಿಸಲಾಗಿದೆ.
- **ನಿರುದ್ಯೋಗದ ಸಮಸ್ಯೆ**: ಕೆ.ಎಫ್.ಡಿ.ಸಿ ನಿಗಮವು ಮೂರ್ತೆದಾರರ ನೇಮಕಾತಿ ಮಾಡದೇ ಇರುವುದು ಮತ್ತು ನಿಗಮವು ಮೂರನೇ ತಲೆಮಾರಿಗೆ ಕೆಲಸದ ವರ್ಗಾವಣೆಯನ್ನು ತಡೆಹಿಡಿದಿರುವುದರಿಂದ ಪುನರ್ ಸಂಜಾತ ಕಾರ್ಮಿಕರ ನವತಲೆಮಾರಿನ ಯುವ ಜನತೆ ನಿರುದ್ಯೋಗದ ಸಮಸ್ಯೆಯನ್ನು ಎದುರಿಸುತ್ತಿರುವುದನ್ನು ಅಧ್ಯಯನದಿಂದ ಗುರುತಿಸಲಾಗಿದೆ.
- **ಪ್ರತ್ಯೇಕತೆಯ ಸಮಸ್ಯೆ:** ಪುನರ್ವಸಿತ ಪ್ರದೇಶವು ಅರಣ್ಯದ ಅಂಚಿನಲ್ಲಿದ್ದು, ರಬ್ಬರ್ ತೋಟಗಳ ಸಮೀಪ ನೆಲೆಗೊಂಡಿರುವುದು ಸಮಜದ ಮುಖ್ಯವಾಹಿನಿಯಿಂದ ಮಾತ್ರವಲ್ಲ, ಸ್ಥಳೀಯ ಸಮುದಾಯಗಳಿಂದ ದೂರವಿರಿಸಿದಂತಾಗಿ ಭೌಗೋಳಿಕ ಪ್ರತ್ಯೇಕತೆಯ ಭಾವನೆಗೆ ಕಾರಣವಾಗಿದೆ. ಈ ಬೆಳವಣಿಗೆಯಿಂದ ಕಳೆದ ನಾಲ್ಕು ದಶಕಗಳಿಂದ ಇಲ್ಲೇ ಜೀವಿಸುತಿದ್ದರೂ, ಸುತ್ತಮುತ್ತಲಿನ ಇತರ ಸಮುದಾಯಗಳಿಗೆ ಅವರು ಇಂದಿಗೂ ಅಪರಿಚಿತರೇ ಆಗಿದ್ದಾರೆ. ಮಾತ್ರವಲ್ಲ ಭಾರತೀಯ ಪೌರತ್ವವನ್ನು ಪಡೆದು ಪುನರ್ ಸಂಜಾತರಾದರೂ, ಇಂದಿಗೂ ಕೂಡ ತೋಟ ಕಾರ್ಮಿಕರು ಕನ್ನಡ ಭಾಷೆಯಲ್ಲಿ 'ಸಿಲೋನಿನವರು', ಸ್ಥಳೀಯ ತುಳು ಆಡು ಭಾಷೆಯಲ್ಲಿ 'ಸಿಲೋನ್‌ದಕುಲು' ಅರೆಕನ್ನಡ

ಭಾಷೆಯಲ್ಲಿ ‘ಸಿಲೋನ್‌ನವು’ ಮತ್ತು ಮಲಯಾಳಂ ಭಾಷೆಯಲ್ಲಿ ‘ಸಿಲೋನ್‌ಕಾರನ್’ ಎಂಬ ನಾಮಧೇಯದೊಂದಿಗೇ ಗುರುತಿಸುತ್ತಿರುವುದು, ಅವರಲ್ಲಿ ‘ಹೊರಗುಳಿಯಲ್ಪಟ್ಟವರು’ ಅಥವಾ ‘ಪ್ರತ್ಯೇಕಿತರೆಂಬ’ ಭಾವನೆಯನ್ನು ಮೂಡಿಸಿರುವುದನ್ನು ಅಧ್ಯಯನದಿಂದ ಗುರುತಿಸಲಾಗಿದೆ.

## ಉಪಸಂಹಾರ

- 1964 ರಲ್ಲಿ ಪುನರ್ ಸಂಜಾತರಾದ ಶ್ರೀಲಂಕಾದ ತಮಿಳರು ಕಳೆದ ಐದು ದಶಕಗಳಿಂದ ದಕ್ಷಿಣ ಕನ್ನಡದ ಸುಳ್ಯ ಮತ್ತು ಪುತ್ತೂರು ತಾಲ್ಲೂಕಿನಲ್ಲಿ ಪುನರ್ವಸಿತರಾಗಿದ್ದಾರೆ. ಕಳೆದ ನಲವತ್ತೆಂಟು ವರುಷಗಳಲ್ಲಿ ಈ ಪುನರ್ವಸಿತ ಕಾರ್ಮಿಕರು ಹಲವು ನೋವು ನಲಿವುಗಳಿಗೆ ಸಾಕ್ಷಿಗಳಾಗಿದ್ದಾರೆ. ಸರಕಾರ ಪುನರ್ವಸತಿ ಮಾಡಿದ್ದರೂ ಶಾಶ್ವತ ಪುನರ್ವಸತೀಕರಣ ಆಗದೇ ಇರುವುದರಿಂದ ಪ್ರಸ್ತುತ ಅವರ ಜೀವನವು ಅಭದ್ರತೆಯಿಂದ ಕೂಡಿದೆ.
- 1964 ರಲ್ಲಿನ ಒಪ್ಪಂದದ ಅನುಷ್ಠಾನವು ಸಿಲೋನ್ ತಮಿಳರಲ್ಲಿ ಏಕಾಏಕಿ ಬದಲಾವಣೆಯನ್ನು ತಂದೊಡ್ಡಿತು. ಒತ್ತಡಪೂರ್ವಕವಾಗಿ ಹೊಸ ಪ್ರದೇಶದಲ್ಲಿ ಜೀವಿಸುವಂತೆ ಮಾಡಿತು. ಇದು ಅವರ ಧಾರ್ಮಿಕ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಬಂಧದ ಮೇಲೆ ನೇರವಾದ ಪರಿಣಾಮವನ್ನು ಬೀರಿದೆ. ಹೊಸ ನೆಲದಲ್ಲಿ ತಮ್ಮ ಮೂಲ ಧಾರ್ಮಿಕ ಸಂಪತ್ತನ್ನು ಸೃಷ್ಟಿಸಬೇಕಾದ, ಅವುಗಳನ್ನು ಮತ್ತೆ ಮರು ಅನುಷ್ಠಾನಗೊಳಿಸಬೇಕಾದ ಅನಿವಾರ್ಯತೆ ಎದುರಾಯಿತು. ಹಲವು ಶತಮಾನಗಳ ಸಿಲೋನಿನ ಜೀವನದ ಬಾಂಧವ್ಯವನ್ನು ಕಡಿದುಕೊಳ್ಳುವುದು ಸಿಲೋನ್ ಪುನರ್ ಸಂಜಾತರಿಗೆ ಸುಲಭವಾಗಿರಲಿಲ್ಲ, ಕಾರ್ಮಿಕರಾಗಿದ್ದರೂ ಸಿಲೋನಿನ ನೆಲವನ್ನು ಗೌರವಿಸಿದ್ದರು. ಆದರೆ 1964 ರ ಒಪ್ಪಂದದ ಅನುಷ್ಠಾನವು ಈ ಮಾನವೀಯ ಮೌಲ್ಯಗಳಿಗೆ ಬೆಲೆ ಕೊಡಲಿಲ್ಲ. ಅವೆಲ್ಲವು ಒಪ್ಪಂದದ ಕಾಗದದ ಮೂಲಕ ಮರೆಯಾದವು. ಒತ್ತಡಪೂರ್ವಕವಾಗಿ ಹೊಸಪ್ರದೇಶವೊಂದಕ್ಕೆ ಸ್ಥಳಾಂತರವಾಗಬೇಕಾಯಿತು.
- ಪುನರ್ವಸತೀಕರಣ ಪ್ರಕ್ರಿಯೆಯಲ್ಲಿ ಸಿಲೋನಿನಲ್ಲಿನ ಇವರ ಅನುಭವ, ಅವರ ಕೌಶಲ್ಯ ಯಾವುದೂ ಮಾನದಂಡವಾಗಲಿಲ್ಲ. ಬದಲಾಗಿ ಇಲ್ಲಿ ಭಾರತಕ್ಕೆ ಹಂಚಿಕೆಯಾದ ಕಾರ್ಮಿಕರ ಒಟ್ಟು ಸಂಖ್ಯೆಯ ನೆಲೆಯಲ್ಲಿ ನೋಡಲಾಯಿತು. ಹಾಗಾಗಿ ಕುಟುಂಬದ ಸದಸ್ಯರು ಭಾರತದ ವಿವಿಧ ಭಾಗಗಳಲ್ಲಿ ಹಂಚಿ ಹೋದರು, ಇವರು ಮತ್ತೆ ಸಂಪರ್ಕಿಸಲು ಬಹುವರ್ಷಗಳೇ ಹಿಡಿದವು ಅಥವಾ ಇನ್ನೂ ಸಂಪರ್ಕಿಸಲು ಸಾಧ್ಯವಾಗಿಲ್ಲ. ಕಾರ್ಮಿಕರಿಗೆ ನೀಡಿದ ಕೆಲಸದ ಆಯ್ಕೆಯು ಅವರ

ಆಯ್ಕೆಯಾಗಿರಲಿಲ್ಲ, ಬದಲಾಗಿ ಅವೆಲ್ಲವೂ ಅಧಿಕಾರಿಗಳ ಒತ್ತಾಯದ ಪುನರ್ವಸತಿ ಯೋಜನೆಗಳಾಗಿದ್ದವು ಅಥವಾ ಆಜ್ಞೆಗಳಾಗಿದ್ದವು ಅಥವಾ ನಿರ್ಧಾರಗಳಾಗಿದ್ದವು.

- ಪ್ರಸ್ತುತ ಸಂಶೋಧನೆಯು ಪುನರ್ ಸಂಜಾತರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಯು, ಸಮತೋಲಿತವಾಗಿಲ್ಲದೇ ಇರುವುದನ್ನು ಸ್ಪಷ್ಟಪಡಿಸುತ್ತದೆ. ಪುನರ್ವಸಿತ ಕುಟುಂಬಗಳಲ್ಲಿ ನಿರುದ್ಯೋಗದ ಸಮಸ್ಯೆ ಕಾಡುತ್ತಿದೆ. ಮೂರನೇ ತಲೆಮಾರಿಗೆ ಕೆಲಸ ವರ್ಗಾವಣೆಯನ್ನು ಮಾಡದೇ ಇರುವುದರಿಂದ ಭವಿಷ್ಯದಲ್ಲಿ ತಾತ್ಕಾಲಿಕ ನೆಲೆಯಲ್ಲಿ ನಿಗಮದ ವಸತಿ ಪಡೆಯುವ ನಿಟ್ಟಿನಲ್ಲಿ ಯಾವುದೇ ಉದ್ಯೋಗದ ಭದ್ರತೆ ಇಲ್ಲದೆ ದುಡಿಯಬೇಕಾದ ಸಂಧಿಗ್ಧತೆಗೆ ಒಳಗಾಗಿದ್ದಾರೆ. ಬೇರೆ ಕೆಲಸ ಗೊತ್ತಿಲ್ಲದೇ ಇರುವ ಕಾರ್ಮಿಕರ ಈ ದೌರ್ಬಲ್ಯದ ಅವಕಾಶವನ್ನು ಖಾಸಗೀ ರಬ್ಬರ್ ತೋಟಗಳ ಮಾಲಿಕರು ಕಡಿಮೆ ವೇತನಕ್ಕೆ ದುಡಿಸಿಕೊಳ್ಳುವ ಸಾಧ್ಯತೆ ಎದುರಾಗಬಹುದು.
- ಪುನರ್ವಸಿತ ಸಮುದಾಯಗಳು ತಮ್ಮ ಅಸ್ತಿತ್ವದ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಬಹುಮುಖ್ಯವಾಗಿ ಸಮಾಜ ಕಲ್ಯಾಣ ಇಲಾಖೆಯ ದಾಖಲೆಯಂತೆ ಶೇ. 60 ಕ್ಕಿಂತಲೂ ಪುನರ್ವಸಿತರು ಪರಿಶಿಷ್ಟ ಜಾತಿ ಸಮುದಾಯಕ್ಕೆ ಸೇರಿದವರಾಗಿದ್ದಾರೆ. ಆದರೆ ಎಲ್ಲಾ ಪರಿಶಿಷ್ಟ ಸಮುದಾಯಗಳು ಜಾತಿ ಪ್ರಮಾಣ ಪತ್ರವನ್ನು ಇದುವರೆಗೂ ಪಡೆದಿಲ್ಲ. ಇತರೆ ಹಿಂದುಳಿದ ಸಮುದಾಯಗಳು ಜಾತಿ ಪ್ರಮಾಣ ಪತ್ರವನ್ನು ಪಡೆಯಲು ನಿರ್ಧಿಷ್ಟಪಡಿಸಿರುವ ನಿಯಮಗಳ ಭಾಗವಾಗಿ ಅಥವಾ ಜಾತಿ ಪ್ರಮಾಣಪತ್ರದ ಅಗತ್ಯತೆಗಳನ್ನು ಅರಿಯದೇ ಆಸಕ್ತಿಕರವಾಗದೇ ಇರುವುದು ತಮ್ಮ ಗುರುತಿನ ಸಮಸ್ಯೆಯನ್ನು ವೃದ್ಧಿಗೊಳಿಸಲು ಕಾರಣವಾಗಿವೆ. ಈ ಕಾರಣದಿಂದ ಸಮುದಾಯಗಳಿಗೆ ದಕ್ಕಬೇಕಾದ ಬಿ.ಪಿ.ಎಲ್ ಪಡಿತರ ಚೀಟಿಯು ಸಿಗದೇ ಇರುವುದರಿಂದ, ಪ್ರಮುಖ ಸರಕಾರಿ ಸೌಲಭ್ಯಗಳಿಂದ ವಂಚಿತರಾಗುತ್ತಿದ್ದಾರೆ. ಈ ಎಲ್ಲಾ ಕಾರಣಗಳು ಪುನರ್ವಸಿತ ಸಮುದಾಯಗಳಲ್ಲಿ ಪ್ರತ್ಯೇಕತೆಯ ಭಾವನೆಯನ್ನು ಸೃಷ್ಠಿಸಿದ್ದು, ಪ್ರಸ್ತುತ ತಮ್ಮನ್ನು ತಾವು 'ಪುನರ್ ಸಂಜಾತ' ರಾಗಿಯೇ ಗುರುತಿಸಲು ಇಚ್ಚಿಸುತ್ತಿರುವುದು ಭವಿಷ್ಯದ ದೃಷ್ಠಿಯಲ್ಲಿ ಆಡಳಿತಕ್ಕೆ ಒಂದು ಸವಾಲಾಗಿದೆ.
- ಕಾರ್ಮಿಕ ಸಂಘಟನೆಗಳ ನಡುವೆ ಇಲ್ಲದ ಅನ್ಯೋನ್ಯತೆ, ಒಗ್ಗಟ್ಟು ಪುನರ್ ಸಂಜಾತರ ಸಮಸ್ಯೆಗಳ ಸಾಮೂಹಿಕ ಚೌಕಾಶಿಗೆ ತಡೆಯಾಗುವ ಸಾಧ್ಯತೆ ಹೆಚ್ಚಿವೆ. ಕಾರ್ಮಿಕ ಸಂಘಟನೆಗಳ ಕುರಿತು ಅದರ ನಾಯಕರ ಕುರಿತಂತೆ ಕಾರ್ಮಿಕರಲ್ಲಿ ಅಸಮದಾನಗಳು ಹೆಚ್ಚುತ್ತಿವೆ. ಕಾರ್ಮಿಕರ ನಾಯಕರುಗಳಲ್ಲಿ ಸ್ವಹಿತಾಸಕ್ತಿ ಹೆಚ್ಚಾಗುತ್ತಿರುವುದು, ಬದ್ಧತೆ ಇಲ್ಲದೇ ಇರುವುದು, ಕಾರ್ಮಿಕ ಸಂಘಟನೆಗಳ ಕುರಿತು

ಕಾರ್ಮಿಕರಲ್ಲಿ ಅನಾಸಕ್ತಿ ಮೂಡಲು ಪ್ರಮುಖ ಕಾರಣವಾಗಿದೆ. ಅಸ್ತಿತ್ವದಲ್ಲಿರುವ ಎಲ್ಲಾ ಕಾರ್ಮಿಕ ಸಂಘಟನೆಗಳು ಒಂದಾಗಬೇಕಾದ ತುರ್ತು ಇದೆ. ಕಾರ್ಮಿಕ ಸಂಘಟನೆಗಳ ಒಗ್ಗಟ್ಟು, ಪುನರ್ ಸಂಜಾತರಲ್ಲಿ ಒಗ್ಗಟ್ಟನ್ನು, ಸಮಸ್ಯೆಯನ್ನು ಪರಿಹರಿಸುವ ನಿಟ್ಟಿನಲ್ಲಿ ಬದ್ಧತೆಯನ್ನು ಸೃಷ್ಟಿಸಲು, ದೀರ್ಘಕಾಲದಿಂದ ಎದುರಿಸುತ್ತಿರುವ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವಿದೆ.

- ಪುನರ್ ಸಂಜಾತರ ಕಲ್ಯಾಣದ ದೃಷ್ಟಿಯಿಂದ ಸ್ಥಾಪಿತವಾದ ತಮಿಳು 'ಸೇವಾ ಸಂಘ'ವನ್ನು ಬಲಪಡಿಸುವ ಅಗತ್ಯವಿದೆ. ಸಮೂಹದ ಅಭಿವೃದ್ಧಿಗೆ ಸಾಮೂಹಿಕ ಪಾಲ್ಗೊಳ್ಳುವಿಕೆಯ ಅರಿವನ್ನು ಮೂಡಿಸುವ ಕೆಲಸವನ್ನು ಸಂಘ ಕೈಗೆತ್ತಿಕೊಳ್ಳಬೇಕಾಗಿದೆ. ಸಮುದಾಯದ ಜೊತೆಗೆ ಒಗ್ಗಟ್ಟನ್ನು ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಹೊಸ ತಲೆಮಾರುಗಳಿಗೆ ಜವಾಬ್ದಾರಿ ಹಂಚಿಕೆಯನ್ನು ಹೆಚ್ಚಿಸಬೇಕಾಗಿದೆ. ಇದು ಪುನರ್‌ಸಂಜಾತರ ಉನ್ನತಿಯಲ್ಲಿ ಸರಕಾರದ ಹೊರೆಯನ್ನು ತಗ್ಗಿಸಿ ತಮ್ಮೊಳಗೇ ಅಭಿವೃದ್ಧಿಯನ್ನು ಹೊಂದುವಂತೆ ಮಾಡಬಹುದು.

## ಸಂಶೋಧನಾ ಸಲಹೆಗಳು

- ಸಂಶೋಧನಾ ಸಲಹೆಗಳು ಸಾಮಾಜಿಕ ಸಂಶೋಧನೆಯಲ್ಲಿ ಬಹುಮುಖ್ಯವಾದುದು. ಸಂಶೋಧನಾ ಸಲಹೆಗಳು ಮುಂದಿನ ವಿಸ್ತೃತ ಅಧ್ಯಯನದ ನಿಟ್ಟಿನಲ್ಲಿ ಮತ್ತು ಅಧ್ಯಯನ ಸಮೂಹಗಳಿಗೆ ಸಂಬಂಧಿಸಿದಂತೆ ಸಮರ್ಪಕ ಯೋಜನೆಗಳನ್ನು ರೂಪಿಸುವಲ್ಲಿ ಅತ್ಯಂತ ಸಹಾಯಕವಾದುದು. ಪ್ರಸ್ತುತ ಸಂಶೋಧನೆಯ ಫಲಿತಗಳು ಮತ್ತು ಕ್ಷೇತ್ರಾಧ್ಯಯನದ ಸಂದರ್ಭದಲ್ಲಿ ಮಾಹಿತಿದಾರರ ಅಭಿಪ್ರಾಯಗಳು ಮತ್ತು ಸಲಹೆಗಳ ನೆಲೆಯಲ್ಲಿ ಸಂಶೋಧನೆಯ ಸಲಹೆಗಳನ್ನು ಇಲ್ಲಿ ಪ್ರಸ್ತುತಪಡಿಸಲಾಗಿದೆ.

### ಅ) ತೋಟ ಕಾರ್ಮಿಕರ ಶಾಶ್ವತ ಪುನರ್ವಸತಿಗೆ ಬೃಹತ್ ಯೋಜನೆಯ ಅಗತ್ಯತೆ

ಪುನರ್ ಸಂಜಾತರ ಶಾಶ್ವತ ಪುನರ್ವಸತೀಕರಣಕ್ಕೆ ಬೃಹತ್ ಯೋಜನೆಯೊಂದನ್ನು ರೂಪುಗೊಳಿಸಬೇಕಾದ ಅಗತ್ಯವಿದೆ. ಬಹುಮುಖ್ಯವಾಗಿ ಪ್ರಾರಂಭದಲ್ಲಿ ಪುನರ್ವಸತೀಕರಣಗೊಳಿಸಿದ ಕುಟುಂಬಗಳು ನೈಸರ್ಗಿಕ ಏರಿಕೆಯನ್ನು ಕಂಡು ಕುಟುಂಬಗಳ ಸದಸ್ಯರ ಸಂಖ್ಯೆಯಲ್ಲಿ ವೃದ್ಧಿಯಾಗಿರುವುದು, ಶಾಶ್ವತ ಪುನರ್ವಸತೀಕರಣಕ್ಕೆ ಬೃಹತ್ ಯೋಜನೆಯ ಅಗತ್ಯವನ್ನು ಸೃಷ್ಟಿಸಿದೆ. ಶಾಶ್ವತ ಪುನರ್ವಸತಿ ಯೋಜನೆಯು ಎಷ್ಟು ಬೇಗ ಅನುಷ್ಠಾನಗೊಳ್ಳುವುದೋ ಅಷ್ಟು ಹೊರೆಯನ್ನು

ಸರಕಾರವು ಕಡಿಮೆ ಮಾಡಿಕೊಳ್ಳಬಹುದು. ಪುನರ್ ಸಂಜಾತರ ಜನಸಂಖ್ಯೆಯು ನೈಸರ್ಗಿಕ ಏರಿಕೆಯು, ಶಾಶ್ವತ ಪುನರ್ವಸತಿಯನ್ನು ತುರ್ತಾಗಿ ಕೈಗೆತ್ತಿಕೊಳ್ಳುವ ಅಗತ್ಯವನ್ನು ಉಂಟುಮಾಡಿದೆ.

## ಆ) ವ್ಯವಸ್ಥಿತ ಯೋಜನೆ ಮತ್ತು ಅದರ ಅನುಷ್ಠಾನದ ಅಗತ್ಯತೆ

ಪುನರ್ ಸಂಜಾತರ ಶಾಶ್ವತ ಪುನರ್ವಸತಿಗಾಗಿ ಕೈಗೊಳ್ಳುವ ಯೋಜನೆಯು ಒಂದು ದಡ ಸೇರುವಂತಾಗಬೇಕು. ಹೀಗಾಗಬೇಕಾದಲ್ಲಿ ಕೈಗೆತ್ತಿಕೊಳ್ಳುವ ಯೋಜನೆಯು ವ್ಯವಸ್ಥಿತವಾಗಿ ಅನುಷ್ಠಾನಗೊಳ್ಳಬೇಕಾದ ಅನಿವಾರ್ಯತೆ ಇದೆ. ಪ್ರಸ್ತುತ ಅನುಷ್ಠಾನದಲ್ಲಿರುವ ಯೋಜನೆಯು ಸಿಲೋನ್ ಪುನರ್ ಸಂಜಾತರನ್ನು ತಾತ್ಕಾಲಿಕ ನೆಲೆಯಲ್ಲಿ ಪುನರ್ವಸತೀಕರಣಗೊಳಿಸಿದೆ. ಪ್ರತೀ ಕುಟುಂಬಗಳಿಗೆ ಎರಡು ಉದ್ಯೋಗ ಮತ್ತು ಉಚಿತ ವಸತಿ, ವಿದ್ಯುತ್ ಮತ್ತು ಇತರೆ ಮೂಲಭೂತ ಸೌಕರ್ಯಗಳನ್ನು ಒದಗಿಸಿದೆ. ಪುನರ್ ಸಂಜಾತರು ಈ ಯೋಜನೆಯನ್ನು ಪ್ರಶಂಸಿರುವುದು ಗಮನಾರ್ಹ. ಆದರೆ ಮೊದಲ ತಲೆಮಾರಿನಿಂದ ಎರಡನೇ ತಲೆಮಾರಿಗೆ ನಿಗಮದ ಕೆಲಸವನ್ನು ವರ್ಗಾವಣೆ ಮಾಡಿದಂತೆ ಮೂರನೇ ತಲೆಮಾರಿಗೆ ಕೆಲಸವನ್ನು ವರ್ಗಾವಣೆ ಮಾಡದೇ ತಡೆಹಿಡಿದಿರುವಂತಹುದು ಯೋಜನೆಯ ವೈಫಲ್ಯವನ್ನು ಎತ್ತಿತೋರಿಸುತ್ತದೆ. ಎರಡನೆಯದಾಗಿ ನಿಗಮದ ಶಾಶ್ವತ ಕಾರ್ಮಿಕನು ನಿವೃತ್ತಿ ಹೊಂದಿದ ನಂತರದಲ್ಲಿ ನಿಗಮದ ವಸತಿಗೆ ಸಂಬಂಧಿಸಿದಂತೆ ಯಾವುದೇ ಪೂರ್ವಯೋಜಿತ ಯೋಜನೆಗಳಿಲ್ಲದೆ, ಏಕಾಏಕಿ ವಸತಿಯನ್ನು ತೆರವುಗೊಳಿಸುವಂತೆ ಆದೇಶಿಸುವುದು ಎರಡನೇ ವೈಫಲ್ಯವನ್ನು ಎತ್ತಿತೋರಿಸುತ್ತದೆ.

ಒಂದು ದೇಶದಿಂದ ತಮ್ಮದೇ ಸಂಜಾತರನ್ನು ತಾಯ್ನೆಲಕ್ಕೆ ಕರೆತಂದಾಗ ಮುಖ್ಯವಾಗಿ ಇಲ್ಲಿನ ಜಾತಿವ್ಯವಸ್ಥೆಯ ಕುರಿತು ಅವರ ಅರ್ಹ ಜಾತಿಯ ಕುರಿತು, ಜಾತಿ ಪ್ರಮಾಣ ಪತ್ರ, ಮೀಸಲಾತಿಯ ಅನುಷ್ಠಾನ, ಅಥವಾ ಜಾತಿಯ ಹಿನ್ನೆಲೆಯಲ್ಲಿನ ಇತರೆ ಸಮಸ್ಯೆಗಳ ಕುರಿತು ಗಂಭೀರವಾಗಿ ಚಿಂತಿಸಬೇಕಾದ ಅನಿವಾರ್ಯತೆ ಇದೆ. ಮಾತ್ರವಲ್ಲ ಪ್ರತಿಯೊಬ್ಬ ಮನುಷ್ಯನನ್ನು ಆತನ ಸಾಮಾಜಿಕ ಏಳಿಗೆಯನ್ನು ಸಮಾಜಶಾಸ್ತ್ರೀಯ ದೃಷ್ಟಿಕೋನದಲ್ಲಿ ಪರಿಭಾವಿಸಬೇಕಾದ ಅಗತ್ಯವಿದೆ.

## ಇ) ಅನುಷ್ಠಾನದಲ್ಲಿನ ಪುನರ್ವಸತಿ ಯೋಜನೆಯ ಪುನರ್ ಅವಲೋಕನ ಅಥವಾ ಮೌಲ್ಯಮಾಪನದ ಅಗತ್ಯತೆ

ಪ್ರಸ್ತುತ ಸಿಲೋನ್ ಪುನರ್ ಸಂಜಾತರನ್ನು ಪುನರ್ವಸತೀಕರಣಗೊಳಿಸಲು ಸರಕಾರಗಳು ಅನುಷ್ಠಾನಗೊಳಿಸಿದ ಯೋಜನೆಯ ಮೌಲ್ಯಮಾಪನವನ್ನು ಅಥವಾ ಅವಲೋಕನವನ್ನು ನಡೆಸಿ, ಯೋಜನೆಯ ಸಾಧಕ–ಭಾದಕಗಳ ಕುರಿತು ಚರ್ಚಿಸಿ, ಶಾಶ್ವತವಾಗಿ ಪುನರ್ವಸತೀಕರಣವನ್ನು

ಈಗಾಗಲೇ ಕೈಗೊಳ್ಳಬೇಕಾಗಿತ್ತು. ಆದರೆ ತಾತ್ಕಾಲಿಕವಾಗಿ ಪುನರ್ವಸತೀಕರಣಗೊಳಿಸಿ ಐದು ದಶಕಗಳು ಸಂದರೂ ಇನ್ನೂ ಈ ಪ್ರಕ್ರಿಯೆ ಪ್ರಾರಂಭವಾಗದೇ ಇರುವುದು ದುರದೃಷ್ಟಕರ. ಈ ನಿಟ್ಟಿನಲ್ಲಿ ಅನುಷ್ಠಾನದಲ್ಲಿನ ಪುನರ್ವಸತೀಕರಣ ಯೋಜನೆಯ ಮೌಲ್ಯಮಾಪನದ ಅಗತ್ಯವಿದೆ.

**ಈ) ಸಿಲೋನ್ ತೋಟ ಕಾರ್ಮಿಕರು ಮತ್ತು ಸ್ಥಳೀಯ ಸಮುದಾಯಗಳ ನಡುವಿನ ಸ್ವಾಂಗೀಕರಣದ ಅಗತ್ಯತೆ**

ತಾತ್ಕಾಲಿಕ ಪುನರ್ವಸತೀಕರಣವು ರಬ್ಬರ್ ತೋಟಗಳ ಅಂಚಿನಲ್ಲಿ ಪ್ರತ್ಯೇಕ ಕಾಲನಿಗಳನ್ನು ನಿರ್ಮಿಸಿ ಪುನರ್ವಸತೀಕರಣಗೊಳಿಸಲಾಗಿದೆ. ಇದು ಸ್ಥಳೀಯ ಸಮುದಾಯಗಳಿಂದ ತಮಿಳರನ್ನು ಪ್ರತ್ಯೇಕಿಸಿರುವುದು, ಮಾತ್ರವಲ್ಲದೆ ಸ್ಥಳೀಯರು 'ಸಿಲೋನಿಗರು', 'ಸಿಲೋನ್ತಕುಲು', 'ಸಿಲೋನ್‌ಕಾರನ್' 'ತಮಿಳರು' ಎಂಬೀ ನಾಮಧೇಯದಿಂದ ಕರೆದು ಅವರನ್ನು ಪರಕೀಯರನ್ನಾಗಿಸಿದೆ. ಈ ನಿಟ್ಟಿನಲ್ಲಿ, ಶಾಶ್ವತ ಪುನರ್ವಸತೀಕರಣದ ಸಂದರ್ಭದಲ್ಲಿ ಎಚ್ಚರಿಕೆಯಿಂದ ಸ್ಥಳೀಯ ಸಮುದಾಯಗಳ ಜೊತೆ ಸ್ವಾಂಗೀಕರಣಗೊಳಿಸಿ ಅಸ್ತಿತ್ವದಲ್ಲಿನ ಪ್ರತ್ಯೇಕತೆಯ ಭಾವನೆಯನ್ನು ಎರಡು ಕಡೆಗಳಿಂದ ಹೋಗಲಾಡಿಸಬಹುದಾಗಿದೆ.

# ಪರಾಮರ್ಶನ ಗ್ರಂಥಗಳು

Abraham, Thomas.1986. "Sri Lanka and India: The Past and the Present". Man & Development, Vol. VII, No. 3, Sept. 1986.

Adapa, Satyanarayan,.2001. "Birds of Passage", Migrationof South Indian Labor Comunities to South East Asia: 19-20th Centuries, A.D. IIAS/IISG CLARA Working paper, No.11, pp. 1-27.

Bamford, M.1995. Introduction to Occupational Health, in M, Banford (ed).*Work and Health: An Introduction to Ocupational Health Care*, London, Chapman and Hall.

Bullion, A.J.1995. *India, Sri Lanka and Tamil Crises 1976-1994*. Pinter,London: Pinter.

Clark,C.,C.Peach and S. Vertovec (ed). 1990. South Asians Overseas: Migration and ethnicity, Cambridge University Press, Cambidge, pp. 3-16.

Cohen, R. 1995. *The Cambridge Survey of World Migration*, Cambridge University Press, Cambridge

Devendra, Reddy .V. et.al.2012. Lung Function Parameters, Neck Pain and Associated Foctors Among Mele Rubber Tapping Workers in Kerala, *International Journal of Pharma Medicin and Biological Sciences,* Vol. 1, No. 2, pp. 43-48.

Dodge and Weibe. 1981. The Repatriates in Madurai, Economic and Political Weekly, Vol. XVI, No.5

Dubey, Ravi Kant. 1989. *Indo-Sri Lankan Relations: With Special Reference to the Tamil Problem*. Deep & Deep Publications, New Delhi.

Engineer, Asghar AN. 1997. "Ethnic Conflict in South Asia". *Economic and Political Weekly*. Aug 16-23.

Engineer, Asghar, All. 1987. *Ethnic Conflict in South Asia.* Ajanta Publications, Delhi

Isaac, Kalpana. 1996. "Sri Lanka's Ethnic Divide". *Current History*, Vol. 95, No. 600.

Kodikara, S.U. 1965. Indo-Ceylon Relations since Independence. The Ceylon Institute of World Affaires, Colombo.

Kodikara, Shelton U. (ed.).1991.Dilemmas of Indo-Sri Lankan Relations, BMICH, Colombo

Kohn, Hans. 1944. *The Idea of Nationalism*: *A Study in Its Origin and Backgrounds*. Macmillan Press, New York.

Kondapi, C,. 1951. Indian Overseas 1938-1949. Indian Council of World Affairs, Madras.

Krishna P. Mukerji.' 1957. Indo -Ceylon Relations', *The Indian Journal of Political Science*, Vol.18, No.1, pp.41-54.

L. Vedavalli. 1989. "Rehabilitation of Sri Lankan Repatriates", Mother India- Children Abroad, Vol.3, pp.147

Lal, B. V. 1985. Kunti's cry: Indenture Women on Fiji Plantations, The Indian Economy and Social History Review Vol.1, Sage, New Delhi.

Mamta Gurung and S.R Mukharjee,.2018. Gender, Women and Work in the Tea Plantation: A Case study of Darjilin Hills, The Indian Journal of Labour Economics, Vol. 61, pp. 537-553.

Padnis, Urmila. 1967. "The Indo-Ceylon Pact and the 'Stateless' Indians in Ceylon", Asian Survey (Berkely), Vol. VII, pp. 226-236.

Patric, Peebles. 2001. *The Plantataion Tamils of Ceylon,* Leicester University Press, Newyork.

Rajasenan, D. 2010. Livelihood and Employment of Workers in Rubber and Spices Plantations, NRPPD, Discussion Paper.

Ramalingaswamy, V. and Patavardhan, V.N .1949. Diet and Health of the South Indian Plantation Labour, *Indian Journal of Medical Research,* Vol. 37, No. 1, pp. 51-60.

Ramaswamy, P. 1987. *New Delhi and Sri Lanka,* Ahmedabad: Allied Publishers Pvt. Ltd., Ahaedabad.

Rani, S. P.2012. Indo-Sri Lankan Pact 1964 and Problems of Statement- A critique, Afro Asian Journal of Social Sciences, Vol. 3, No. 3.1, pp. 1-14.

Ranjitdas, Gupta . 2008. Plantation Labour in Colonial India, The Journal of Peasant Studies, Vol.19, Issue. 3-4, pp. 173-198.

Ravi Raman, K. 1986. Plantation Labour Revisit Required, Economic and Political Weekly, Vol. 21, No. 22, pp. 960-962.

Report of Ministry of Labour and Employment Bureau, Chandigarh, Government of India, on 'Socio-economic Conditions of Women Workers in Plantation Industry-2008-09.

Richard Laing and Marni Pigot, .1987. 'Meeting the Health and Housing Needs of Plantation Workers,IDS Bulletin, Vol. 18, Issue. 2, pp. 23-29.

S.H Venkataramani. 1983. "Tamil Repatriates: Unhappy Home Coming" (Special Report) *India Today*, December 15, pp. 106-08.

Sahadevan, P. 1995. India and Overseas Indians: The case of Sri Lanka, Kalinga Publications, New Delhi.

Tapas.S.Nair. et.al. 2016. A Study of the Health Profile of Rubber Plantaion Workers in Rural Kerala, *Asian Journal of Medical Sciences*, Vol. 7, No. 3, pp. 103-107.

V. Suryanarayanan and L.Vedavalli. 1988. "Unwanted in Sri Lanka, Unwelcomes in India: The Plight of the Sri Lankan Repatriates in Tamil Nadu", *South Asian Social Scientist*, Vol. IV, pp. 111

Vamadevan, C,. 1989. Sri Lankan Repatriates in Tamil Nadu : Rehabilitation and Integration, Zen Publishrs, Madras. pp. 10-11.

Vamadevan, M. 1987. Rehabilitataion of Sri Lankan Repatriates in Tamil Nadu: An Assessment, Centre for Development Studies, Trivendrum.

Yee Guan NG and all Shamul BahriMOHD TAMRIN, Wai Mun Yik, Irwan Syah MOHD YUSUF, Ippei MORI .2014. The Prevalence of Musculoskeletal Disorder and Association with Productivity loss: A Preliminary Study Among Labour intensive Manual Harvesting Activity in oil Palm Plantation, Journal of Industrial Health, Vol. 52, No. 1, pp.78-85.

**ಸಂಶೋಧನಾ ವಿದ್ಯಾರ್ಥಿ** | **ಸಂಶೋಧನಾ ಮಾರ್ಗದರ್ಶಕರು**

**ಜಗದೀಶ ಎಂ** | **ಡಾ.ಗೋವಿಂದರಾಜು ಬಿ.ಎಂ**